


# ಅಖಿಲ ಭಾರತ ಪತ್ರಿಕೆ

ಏಪ್ರಿಲ್ 2025

## ಪರಮೋಚ್ಚನಿಂದ ಬಂದ ಸಂದೇಶಗಳು

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

# ಅಗ್ನಿ ಸೂಕ್ತ

**ಅಖಿಲ ಭಾರತ ಪತ್ರಿಕೆ**

**ಏಪ್ರಿಲ್ 2025**

ಸಂಪುಟ: 35 ಸಂಚಿಕೆ: 04


# ಪರಿವಿಡಿ

## ಪರಮೋಚ್ಚನಿಂದ ಬಂದ ಸಂದೇಶಗಳು

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಶ್ರೀಮಾತೆಯವರ ಸಹಿ** 4

**ಪ್ರಾರ್ಥನೆಗಳು** 6

**ಉದ್ದೇಶ** 7

**ಸ್ವಾತಂತ್ರ್ಯ** 8

**ಆಚರಣೆ** 9

**ಶ್ರೀ ಅರವಿಂದರು** 12

**ಶ್ರೀಮಾತೆ** 14

**ವಿಜಯ** 15

**ದೈವೀ ಪ್ರಕಾಶದ ಎಳೆಗಳು** 16

ಅನು: ಡಾ॥ ಕೆ.ಎಸ್. ಆಮೂರ

**ಶ್ರೀ ಅರವಿಂದರ ವಾಮದೇವನ 'ಅಗ್ನಿ ಸೂಕ್ತಗಳು'** 18

**ಶ್ರೀ ಅರವಿಂದರ 'ತ್ರಾಟಕ ಸೂರ್ಯ'** 21

**ಚಿನ್ಮಯದ ಅಗ್ನಿಜ್ವಾಲೆ** 31

**"ಪರಾ ವೃಕ್ಷೇಷು ಸಂಜಾತಾ.."** 32

ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಊರ್ವಶಿ'** 36

ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 52

ಅನು: ಜಾನ್ವಿ

**ವಾರ್ತಾಪತ್ರ** 59



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಸಂಪಾದಕರ ಟಿಪ್ಪಣಿ

ಬರೆದದ್ದನ್ನು ಹಾಗೂ ಅದಿದ್ದ ಹಾಗೆ ಅದಕ್ಕೆ ಸಹಿ ಹಾಕಿದ್ದನ್ನು ಸ್ವೀಕರಿಸುವುದು ಹಾಗೂ ಒಪ್ಪಿಕೊಳ್ಳುವುದು ಸಹಿಯೊಂದರ ಅಭಿವ್ಯಕ್ತಿಯಾಗಿರುತ್ತದೆ. ಹಾಗೆಯೇ ಅದು ಸಹಿ ಮಾಡುವ ವ್ಯಕ್ತಿಯ ಹೆಸರು ಒಳಗೊಂಡ ಒಂದು ಬಗೆಯ ದೈವೀ ಸಾಮರ್ಥ್ಯಕ್ಕೆ ಮೂರ್ತರೂಪ ಕೊಡುವಿಕೆ ಹಾಗೂ ಭೌತಿಕ ರೂಪ ಕೊಡುವಿಕೆ ಆಗಿರುತ್ತದೆ.

ಶ್ರೀಮಾತೆಯವರು ಹಾಗೂ ಶ್ರೀ ಅರವಿಂದರು ಯಾವುದೊಂದರ ಮೇಲೆ ಸಹಿ ಮಾಡಿದಾಗ ಅದು ಕೇವಲ ಔಪಚಾರಿಕ ವಿಷಯವಾಗಿರಲಿಲ್ಲ. ಅವರ ಎಲ್ಲ ದೈವೀ ಕ್ರಿಯೆಗಳ ಹಾಗೆ ಇದೂ ಕೂಡ ಪೃಥ್ವಿಗೆ ಹಾಗೂ ಮನುಕುಲಕ್ಕೆ ಆಶೀರ್ವದಿಸುವುದಾಗಿತ್ತು, ದೈವೀ ಕೃಪೆಯ ಒಂದು ಕ್ರಿಯೆಯಾಗಿತ್ತು, ಅವರು ಸಹಿ ಮಾಡಿದ್ದನ್ನು ನೆರವೇರಿಸಿಕೊಡುವುದಕ್ಕಾಗಿ ಅವರ ಹೆಸರಿನಲ್ಲಿರುವ ದೈವೀ ಸಾಮರ್ಥ್ಯದ ಏನೋ ಒಂದಕ್ಕೆ ಮೂರ್ತರೂಪ ಕೊಡುವುದಾಗಿತ್ತು, ಶ್ರೇಷ್ಠ ಮತ್ತು ಉಚ್ಚತರ ದೈವೀ ಜೀವನಕ್ಕೆ ಅಭೀಪ್ಸೆ ಪಡುವ ವ್ಯಕ್ತಿಯನ್ನು, ಸರ್ವಸಾಧಾರಣ ರೀತಿಯ ಮನುಕುಲವನ್ನು ಸ್ವೀಕರಿಸುವುದಾಗಿತ್ತು.

ಸಹಿಯ ರೂಪದಲ್ಲಿರುವ ಶಬ್ದ ಪರಮೋಚ್ಚನ ಮುದ್ರೆಯಾಗಿರುವುದರಿಂದ ಅದರ ಸಾಮರ್ಥ್ಯ ಅಧಿಕವಾಗುತ್ತದೆ. ತಮ್ಮ ಸಹಿ ಪರಮೋಚ್ಚನಿಂದ ಬಂದ ದೈವೀ ಕೃಪೆಯ ಸಂದೇಶವಾಹಕ ಪಕ್ಷಿ ಎಂದು ಆ ಸಹಿಯ ಅಂತರಾರ್ಥವನ್ನು ಶ್ರೀಮಾತೆಯವರು ವಿವರಿಸಿ ಹೇಳಿದ್ದಾರೆ.

ಹಲವಾರು ಸಂದರ್ಭಗಳಲ್ಲಿ ಶ್ರೀಮಾತೆಯವರು ತಮ್ಮದೇ ಕೈಬರಹದಿಂದ ಬರೆದುಕೊಟ್ಟು ಸಹಿ ಮಾಡಿದ ಸಂದೇಶಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ಹಾಗಾಗಿ ಇದು ವಿಶೇಷ ಸಂಚಿಕೆಯಾಗಿದೆ. ತಿಂಗಳಿನ ಪ್ರತಿಯೊಂದು ದಿನ ಯೋಚನೆಯೊಂದನ್ನು ಕೈಗೆತ್ತಿಕೊಂಡು ಅದನ್ನು ಕುರಿತು ಚಿಂತನ ಹಾಗೂ ಧ್ಯಾನ ಕೈಕೊಳ್ಳಬಹುದಾಗಿದೆ ಮತ್ತು ಅದನ್ನು ದೈನಂದಿನ ಜೀವನದಲ್ಲಿ ಆಚರಣೆಗೆ ತರಬಹುದಾಗಿದೆ. (ಎಐಎಂ)

## ಸಂಪಾದಕೀಯ

'ಪರಮೋಚ್ಚನಿಂದ ಬಂದ ಸಂದೇಶಗಳು' ನಿತ್ಯತ್ವವನ್ನು ಪ್ರತಿನಿಧಿಸುತ್ತವೆ. ಅದನ್ನು ಮತ್ತೆ ಮತ್ತೆ ಸ್ಮರಣೆಗೆ ತಂದುಕೊಂಡು ಸ್ಮೃತಿಯಾಗಿಸಿಕೊಳ್ಳುವದು ಮಾನವನ ಅಭೀಪ್ಸೆಯಾಗಬೇಕು. ಇದನ್ನು ಅನುಷ್ಠಾನಿಸಲೆಂದೆ 2015 ರಲ್ಲಿ ಪ್ರಕಟಗೊಂಡ ಈ 'ಸಂದೇಶಗಳನ್ನು' ಮತ್ತೆ ಇಲ್ಲಿ ರೂಪಿಸಲಾಗುತ್ತಿದೆ. 2015 ರಲ್ಲಿ ಸಂಪಾದಕರಾಗಿದ್ದ ಡಾ॥ ಕೆ.ಎಸ್.ಅಮೂರ ಅವರು ರೂಪಾಂತರಣಗೊಳಿಸಿರುವ ಸಂದೇಶಗಳ ಕನ್ನಡದ ಪಠ್ಯವನ್ನೇ ಇಲ್ಲಿ ನೀಡಲಾಗಿದೆ.

ಶ್ರೀ ಅರವಿಂದರಿಂದ ಅಭಿವ್ಯಕ್ತಗೊಂಡಿರುವ 'ಯೋಗದ ಕುರಿತ ದಾಖಲೆಗಳು' (ರಿಕಾರ್ಡ್ಸ್ ಆನ್ ಯೋಗ) ಇನ್ನೂ ಕನ್ನಡಕ್ಕೆ ರೂಪಾಂತರಣಗೊಂಡಿರುವದಿಲ್ಲ. ಅದರಲ್ಲೂ ಯೋಗ ಸಾಧನೆಯ ವಿಷಯದಲ್ಲಿ, ಶ್ರೀ ಅರವಿಂದರು, ಅಲೀಪುರ ಸೆರೆಮನೆಯ ವಾಸದ ನಂತರದಲ್ಲಿ, ಬರಿಸಾಲ ಎನ್ನುವಲ್ಲಿ ಯೋಗ ಸಾಧನೆಯ ಪ್ರಾರಂಭದಲ್ಲಿ ಅತ್ಯಂತ ಪ್ರಮುಖ ಘಟ್ಟವಾಗಿರುವ 'ತ್ರಾಟಕ ಸೂರ್ಯ' ಸಾಧನೆಯನ್ನು ಒಂದು ಸಪ್ತಾಹದಲ್ಲಿ ಸಿದ್ಧಿಸಿಕೊಳ್ಳುತ್ತಾರೆ. ಬರಿಸಾಲದಲ್ಲಿ ಇರುವ 'ಕಾಳಿ ದೇವಸ್ಥಾನ'ದಲ್ಲಿ ಈ ಸಿದ್ಧಿಯನ್ನು ಪಡೆಯುತ್ತಾರೆ. (ಆದರೆ ಈಗ ಈ ಬರಿಸಾಲ ಎನ್ನುವದು ಬಾಂಗ್ಲಾ ದೇಶದಲ್ಲಿದೆ). 'ವಂಗ–ಭಂಗ' ಚಳವಳಿಯ ಸಂದರ್ಭದಲ್ಲಿ, ಅದನ್ನು ವಿರೋಧಿಸಿ ನಡೆಸಿದ ಹೋರಾಟ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಟ ತೀವ್ರಗೊಳ್ಳುತ್ತಿದ್ದ ಅವಧಿಯಲ್ಲಿ, ಈ 'ತ್ರಾಟಕ ಸೂರ್ಯ' ಸಾಧನೆಯ ಮೌನದ ಅವಧಿಯಲ್ಲಿಯೇ ಅವರು ನಾಲ್ಕೈದು ಸಾರ್ವಜನಿಕ ಪ್ರವಚನಗಳನ್ನೂ ನೀಡಿದ್ದಾರೆ. ಸ್ವಾತಂತ್ರ್ಯ ಹೋರಾಟ ಮತ್ತು ಯೋಗ ಸಾಧನೆಯ ಸಮನ್ವಯತೆಯನ್ನು ಈ 'ರಿಕಾರ್ಡ್ಸ್ ಆನ್ ಯೋಗಾ'ದಲ್ಲಿ ಕೊಟ್ಟಿರುವ ಟಿಪ್ಪಣಿಗಳಲ್ಲಿ ಕಾಣಬಹುದು. ಇದೇ ಆಧಾರದಲ್ಲಿ 'ತ್ರಾಟಕ ಸೂರ್ಯ'ವನ್ನು ಪ್ರಾರಂಭಿಸಲಾಗಿದೆ.

ಸೂರ್ಯ ಸಿದ್ಧಾಂತದಿಂದ – ಶುದ್ಧ ಜ್ಞಾನದಿಂದ – ವಿಚಲನೆಗೊಂಡು, ಮನೋಮಯ ಪ್ರಪಂಚವೇ ಸರ್ವಸ್ವ ಎನ್ನುವ ಸಿದ್ಧಾಂತದ ಕಾರಣದಿಂದಾಗಿ, ಭರತವರ್ಷ ಅನುಭವಿಸಿದ ಸಾಂಸ್ಕೃತಿಕ ವಿಪ್ಲವಗಳನ್ನು ಶ್ರೀ ಅರವಿಂದರು ತಮ್ಮ ಪ್ರಾರಂಭದ ಲೇಖನಗಳಲ್ಲಿ, ಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಅದರಲ್ಲೂ, ಸೂರ್ಯ ವಂಶದ ಕೊನೆಯ ಅರಸು ಹಾಗೂ ಚಂದ್ರವಂಶದ ಪ್ರಥಮ ಅರಸು ಆಗಿರುವ ಪುರೂರವ ಕುರಿತು ಒಂದು ಕವನ ಹಾಗೂ ಖಂಡಕಾವ್ಯವನ್ನು ರಚಿಸಿದ್ದಾರೆ. ಈ ಮಹತ್ವದ ಕೃತಿಯನ್ನು ಕನ್ನಡಕ್ಕೆ ಪರಿಚಯಿಸುವ ಯತ್ನವನ್ನು ಈ ಸಂಚಿಕೆಯಿಂದ ಪ್ರಾರಂಭಿಸಲಾಗುತ್ತಿದೆ. (ಪಿಪಿಕೆ)


# ಪರಮೋಚ್ಚನಿಂದ ಬಂದ ಸಂದೇಶಗಳು

**– ಅನು: ಡಾ. ಕೆ.ಎಸ್. ಅಮೂರ**

## ಶ್ರೀಮಾತೆಯವರ ಸಹಿ




*




ಇದು ಸಹಿಯನ್ನು ರೇಖಾ ಚಿತ್ರಗಳ ಮೂಲಕ ನಿರೂಪಿಸಿದ್ದಾಗಿದೆ. ಅದರರ್ಥ "ಪೃಥ್ವಿಯ ಮೇಲೆ ದೈವೀ ಶಾಂತಿಯನ್ನು ಪ್ರತಿನಿಧಿಸುವ ಪಕ್ಷಿಯ ಅವರೋಹಣ" ಎಂದಿದೆ. ಅದರ ರೆಕ್ಕೆಗಳು ಪೃಥ್ವಿಯತ್ತ ಬಾಗಿಕೊಂಡಿವೆ. ಅದು ಪೃಥ್ವಿಯತ್ತ ಕೆಳಗಿಳಿದು ಬರುತ್ತಿದೆ. ಬಾಗಿಕೊಂಡ ಅದರ ರೆಕ್ಕೆಗಳು ಮಾಡುವ ಕೋನವನ್ನು ಮತ್ತು ಅದು ಪೃಥ್ವಿಯತ್ತ ಹೇಗೆ ಕೆಳಗಿಳಿದು ಬರುತ್ತಿದೆ ಎಂಬುದನ್ನು ನೀವು ನೋಡುವಿರಲ್ಲವೆ? ಅದು ದೈವೀ ಶಾಂತಿಯನ್ನು ತರುವುದಕ್ಕಾಗಿದೆ. ಅದು ಶಾಂತಿಯ ಸಂದೇಶವಾಹಕ. ದೈವೀ ಶಾಂತಿಯ ಪಕ್ಷಿ ಪೃಥ್ವಿಯ ಮೇಲೆ ಇಳಿದು ಬರುವುದಾಗಿದೆ.

ಸಹಿಗೆ ಈ ಪಕ್ಷಿ ಹೇಗೆ ಅನುಗುಣವಾಗಿದೆ ಎಂಬುದನ್ನು ನಾನು ಈಗ ವಿವರಿಸಿ ಹೇಳುತ್ತೇನೆ. ನೋಡಿರಿ, ಇದು ಪಕ್ಷಿಯ ಬಾಲ. ಇಲ್ಲಿ ಬಾಲದ ಎರಡು ತುದಿಗಳಿವೆ. ಮತ್ತು ಆ ಬಾಲವನ್ನು ರೆಕ್ಕೆಯ ಹಾಗೆ ವಿಸ್ತರಿಸುತ್ತ ಹೋಗುತ್ತೇನೆ. ಅದು ವಕ್ರ ರೇಖೆಯ ಹಾಗೆ ಕಾಣುತ್ತದೆ. ನೀವು ಪಕ್ಷಿಗಳ ರೆಕ್ಕೆಗಳನ್ನು ನೋಡಿದ್ದೀರಿ. ಅವು ಈ ರೀತಿಯವಾಗಿರುತ್ತವೆ.

ಹೀಗೆ ಬಾಲದ ಈ ಎರಡು ತುದಿಗಳು ಮತ್ತು ಒಂದು ರೆಕ್ಕೆ ಇವು ಪಕ್ಷಿಯ ಒಂದು ಭಾಗದಲ್ಲಿವೆ. ಮತ್ತು ಇದು ಇನ್ನೊಂದು ರೆಕ್ಕೆ. ಅವು ವಿಶಾಲ ರೆಕ್ಕೆಗಳು. ಎರಡು ಬಿಂದುಗಳಿಂದ ಇಲ್ಲಿ ನಿರೂಪಿಸಲಾದ ಇವು ಕಣ್ಣುಗಳು ಮತ್ತು ಇಲ್ಲಿ ಶಿರವಿದೆ.

ಆ ಪಕ್ಷಿ ಬಹಳ ದೂರದಿಂದ ಬರುತ್ತಿರುವ ಹಾಗೆ ಮನುಷ್ಯ ನೋಡುತ್ತಾನೆ, ಆ ಕಾರಣದಿಂದಾಗಿಯೆ ಅವನು ಹೊಳೆಯುತ್ತಿರುವ ಕಣ್ಣುಗಳನ್ನಷ್ಟೇ ನೋಡುತ್ತಾನೆ, ಆ ಪಕ್ಷಿಯ ಆಕಾರದ ಎಲ್ಲ ವಿವರಗಳನ್ನಲ್ಲ. ಅದಕ್ಕೆ ಬಹಳ ಭವ್ಯವಾದ ರೆಕ್ಕೆಗಳಿವೆ ಮತ್ತು ಅದು ಈ ರೀತಿ ಒಂದು ಬದಿಗೆ ವಾಲಿಕೊಂಡಿದೆ, ಆ ಕಾರಣದಿಂದಾಗಿ ಅದರ ದೇಹ ಮರೆಯಲ್ಲಿದೆ. ಮನುಷ್ಯ ಅದರ ದೇಹವನ್ನು ನೋಡುವುದಿಲ್ಲ, ಅದು ಅದರ ಭವ್ಯ ರೆಕ್ಕೆಯ ಹಿಂದೆ ಅಡಗಿದೆ. ಬಹಳ ದೂರದಿಂದ ಮನುಷ್ಯ ಅದರ ಎರಡು ಕಣ್ಣುಗಳನ್ನು, ಚುಂಚನ್ನು ಹಾಗೂ ಅಂತಹದೆಲ್ಲವನ್ನು ನೋಡುತ್ತಾನೆ. ಏಕೆಂದರೆ ಕಣ್ಣುಗಳಷ್ಟೇ ಹೊಳೆಯುತ್ತಿರುತ್ತವೆ, ಕಣ್ಣುಗಳು ಆತ್ಮವನ್ನು ಪ್ರತಿಫಲಿಸುತ್ತವೆ. ಕಣ್ಣು ಮಹತ್ವದ್ದಾದ ಭಾಗ. ಹಾಗಾಗಿ ಇದು ಹೀಗಿದೆ: ಬಾಲ ಒಂದು ರೆಕ್ಕೆಯ ಜೊತೆಗಿದೆ ಮತ್ತು ಇದು ಇನ್ನೊಂದು ರೆಕ್ಕೆ ಮತ್ತು ಇವೆರಡು ಬಿಂದುಗಳು ಅದರ ಕಣ್ಣುಗಳು.

ಇದು ಪೃಥ್ವಿಯ ಮೇಲೆ ಕೆಳಗಿಳಿದು ಬರುತ್ತಿರುವ ದೈವೀ ಶಾಂತಿಯ ಪಕ್ಷಿ ಕುರಿತು ಸಾಂಕೇತಿಕ ನಿರೂಪಣೆ. ಪ್ರತಿಸಲ ಆ ಹಕ್ಕಿಯನ್ನು ಇಡಿಯಾಗಿ ಮಿರಾ ಒಂದು ರೆಕ್ಕೆ ಬಾಲ ಇನ್ನೊಂದು ರೆಕ್ಕೆ ಶಿರ ಪರಮೋಚ್ಚನಿಂದ ಬಂದ ದೈವೀ ಕೃಪೆಯ ಸಂದೇಶವಾಹಕ ಪಕ್ಷಿ. ಇದನ್ನು ಚಿತ್ರಿಸುವುದರ ಬದಲಾಗಿ ನಾನು ಆ ಪಕ್ಷಿಯನ್ನು ಪ್ರತಿನಿಧಿಸುವ ಸಾಂಕೇತಿಕ ಚಿತ್ರ ಬಿಡಿಸಿದ್ದೇನೆ. ಪೃಥ್ವಿಯ ಮೇಲೆ ಕೆಳಗಿಳಿದು ಬರುತ್ತಿರುವ ಆ ಪಕ್ಷಿ ಹಾರುತ್ತಿರುವುದನ್ನು ನೀವು ಸ್ಪಷ್ಟವಾಗಿ ನೋಡಬಲ್ಲಿರಿ. ಅದಿನ್ನೂ ಬಹಳ ದೂರದಲ್ಲಿದೆ, ಆದರೆ ಒಂದು ದಿನ ಅದು

ಪೃಥ್ವಿಯ ಮೇಲಿಳಿಯುವುದು. ಆಗ ಅಲ್ಲಿ ದೈವೀ ಶಾಂತಿ ಇರುವುದು. ಹೀಗೆ ಇದು ನನ್ನ ಸಹಿಯ ಅಂತರಾರ್ಥ.

ಇಲ್ಲಿ ದೈವೀ ಶಾಂತಿಯನ್ನು ತರಲು ಅದು ಇನ್ನೊಂದು ಲೋಕದಿಂದ ಬರುತ್ತದೆ.

ನಾನು ನುಡಿದ ಶಬ್ದಗಳನ್ನು ಒಂದು ಬೋಧನೆಯ ರೂಪದಲ್ಲಿ ತೆಗೆದುಕೊಳ್ಳುವುದು ಬೇಡ. ಅವು, ಯಾವಾಗಲೂ, ಕ್ರಿಯೆಯಲ್ಲಿ ಒಂದು ಶಕ್ತಿಯ ರೂಪದಲ್ಲಿರುತ್ತವೆ, ಅವುಗಳನ್ನು ಒಂದು ನಿಶ್ಚಿತ ಉದ್ದೇಶದೊಂದಿಗೆ ಉಚ್ಚರಿಸಲಾಗಿರುತ್ತದೆ. ಆ ಉದ್ದೇಶದಿಂದ ಅವುಗಳನ್ನು ಬೇರ್ಪಡಿಸಿದರೆ ಅವು ತಮ್ಮ ನಿಜವಾದ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/53 – ಶ್ರೀಮಾತೆ**

## ಪ್ರಾರ್ಥನೆಗಳು

### ದೈನಂದಿನ ಪ್ರಾರ್ಥನೆ

ಹಗಲು ಹೊತ್ತಿನಲ್ಲಿ ನನ್ನ ಜೊತೆಗಿರುವ ಹಾಗೆ, ರಾತ್ರಿಯಲ್ಲೂ ಕೂಡ, ಯಾವಾಗಲೂ, ನನ್ನ ಜೊತೆಗಿರು.

ಎಚ್ಚತ್ತಿರುವಾಗಿನ ಹಾಗೆ ನಿದ್ರೆಯಲ್ಲೂ ಕೂಡ ನಿನ್ನ ಸಾನ್ನಿಧ್ಯದ ನೈಜತೆಯನ್ನು ನಾನು ಭಾವನೆಗೆ ತಂದುಕೊಳ್ಳುವಂತಾಗಲಿ.

ಸತತ ಮತ್ತು ಎಲ್ಲ ಕಾಲಗಳಲ್ಲಿ ಅದು ದೈವೀ ಸತ್ಯವನ್ನು ಪ್ರಜ್ಞೆಯನ್ನು ಹಾಗೂ ದಿವ್ಯಾನಂದವನ್ನು ನನ್ನಲ್ಲಿ ಪೋಷಿಸಿಕೊಂಡು ಬರುವಂತಾಗಲಿ, ಅಭಿವೃದ್ಧಿಪಡಿಸುವಂತಾಗಲಿ.

**– ಶ್ರೀ ಅರವಿಂದರು**

### ಹೊಸ ವರ್ಷ ಕುರಿತು ಪ್ರಾರ್ಥನೆ

ಹೊಸ ವರ್ಷದ ಪ್ರಾರಂಭ ನಮಗೆ ಹೊಸ ಹಾಗೂ ಹೆಚ್ಚು ಒಳ್ಳೆಯ ಜೀವನದ ಪ್ರಾರಂಭವಾಗುವಂತಾಗಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/182 – ಶ್ರೀಮಾತೆ**

ಪ್ರಾರ್ಥನೆ ಕೈಕೊಳ್ಳುತ್ತಿರುವುದರ ಜೊತೆಗೆ ನಾವು ಕಾರ್ಯನಿರತರಾಗೋಣ, ಏಕೆಂದರೆ ಕಾರ್ಯ ಭಗವಂತನಿಗೆ ದೇಹ ಅರ್ಪಿಸಬಹುದಾದ ಅತ್ಯಂತ ಒಳ್ಳೆಯ ಪ್ರಾರ್ಥನೆಯಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/299 – ಶ್ರೀಮಾತೆ**

## ದೇಹದಲ್ಲಿರುವ ಜೀವಕೋಶಗಳ ಪ್ರಾರ್ಥನೆ

ದೈವೀ ಕೃಪೆಯ ಪರಿಣಾಮದಿಂದಾಗಿ ನಾವು ಈಗ ಅಚೇತನದೊಳಗಿಂದ ಸಾವಧಾನವಾಗಿ ಹೊರಹೊಮ್ಮಿ ಬರುತ್ತಿದ್ದೇವೆ ಮತ್ತು ಪ್ರಜ್ಞಾಪೂರ್ಣ ಜೀವನಕ್ಕಾಗಿ ಎಚ್ಚತ್ತುಕೊಳ್ಳುತ್ತಿದ್ದೇವೆ. ಹಾಗಾಗಿ ಹೆಚ್ಚಿನ ಪ್ರಕಾಶಕ್ಕಾಗಿ, ಹೆಚ್ಚಿನ ಪ್ರಜ್ಞೆಗಾಗಿ ನಮ್ಮಲ್ಲಿ ಉತ್ಸಾಹಪೂರ್ಣ ಪ್ರಾರ್ಥನೆಯೊಂದು ಮೇಲಕ್ಕೆದ್ದು ಬರುತ್ತಿದೆ: "ಓ ವಿಶ್ವದ ಪರಮೋಚ್ಚ ಪ್ರಭುವೆ, ಪೃಥ್ವಿಯ ಮೇಲೆ ದೈವೀ ಉಪಕರಣವಾಗಲು ಅವಶ್ಯವಾಗಿರುವ ಬಲ, ಸೌಂದರ್ಯ, ಸಾಮರಸ್ಯದ ಪರಿಪೂರ್ಣತೆ ಇವುಗಳನ್ನು ನಮಗೆ ಕೊಡು ಎಂದು ನಿನ್ನಲ್ಲಿ ಮೊರೆಯಿಡುತ್ತೇವೆ."

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/91 – ಶ್ರೀಮಾತೆ**

## ಉದ್ದೇಶ

**ಜೀವನದ ಗುರಿ** ಸಂತೋಷದಿಂದ ಇರುವುದಾಗಿದೆಯೆ?
ಅಂತಹ ಉದ್ದೇಶ ವಿಷಯಗಳನ್ನು ಅವ್ಯವಸ್ಥೆಯಲ್ಲಿ ಇರಿಸುತ್ತದೆ.

ಮಾನವ ಜೀವನದ ಗುರಿ ಭಗವಂತನನ್ನು ಶೋಧಿಸುವುದಾಗಿರುತ್ತದೆ ಹಾಗೂ ಪ್ರಕಟಿಸುವುದಾಗಿರುತ್ತದೆ. ಸ್ವಾಭಾವಿಕವಾಗಿ ಈ ಶೋಧ ಸಂತೋಷದತ್ತ ಕರೆದೊಯ್ಯುವುದು, ಆದರೆ ಈ ಸಂತೋಷ ಒಂದು ಪರಿಣಾಮ, ತನ್ನಲ್ಲಿಯೇ ಅದೊಂದು ಗುರಿಯಲ್ಲ. ಮತ್ತು ಕೇವಲ ಪರಿಣಾಮ ಸ್ವರೂಪವಾದದ್ದನ್ನು ಜೀವನದ ಗುರಿಯೆಂದು ಭಾವಿಸುವ ಈ ತಪ್ಪೆಸಗುವಿಕೆಯೇ ಮಾನವ ಜೀವನವನ್ನು ದುಃಖಕ್ಕೀಡುಮಾಡುವ ಅನೇಕ ದುಸ್ಥಿತಿಗಳಿಗೆ ಕಾರಣವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/311–12 – ಶ್ರೀಮಾತೆ**

## ಜೀವನದಲ್ಲಿ ಶಾಶ್ವತವಾಗಿ ಇರುವ ಉದ್ದೇಶ

ಜೀವನದಲ್ಲಿ ಒಂದು ಉದ್ದೇಶವಿದೆ – ಅದು ಮಾತ್ರ ನಿಜವಾದದ್ದು ಹಾಗೂ ಉಳಿದುಕೊಳ್ಳುವಂತಹದು – ಆ ಉದ್ದೇಶ ಭಗವಂತ. ಅವನೆಡೆಗೆ ಹೊರಳಿರಿ, ಬರಿದಾಗಿರುವಿಕೆ ಸಾಗಿ ಹೋಗಿಬಿಡುವುದು.

ಆಶೀರ್ವಾದಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/6 – ಶ್ರೀಮಾತೆ**

## ಏಕೈಕ ಗುರಿ

ದೈವೀ ಪ್ರಭು, ಪರಿವರ್ತನೆಗಾಗಿರುವ ನಿನ್ನ ಕಾರ್ಯವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ನಾವು ಪೃಥ್ವಿಯ ಮೇಲಿದ್ದೇವೆ. ಅದು ನಮ್ಮ ಏಕೈಕ ಸಂಕಲ್ಪ ಹಾಗೂ ಏಕೈಕ ಪೂರ್ವಮಗ್ನವಾಗುವಿಕೆ. ಅದು ನಮ್ಮ ಏಕೈಕ ವೃತ್ತಿಯಾಗಲಿ, ಮತ್ತು ನಮ್ಮ ಎಲ್ಲ ಕ್ರಿಯೆಗಳು ಈ ಏಕೈಕ ಗುರಿಯತ್ತ ಸಹಾಯಕವಾಗಲಿ ಎಂದು ಅನುಗ್ರಹಿಸು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/6 – ಶ್ರೀಮಾತೆ**

## <u>ಸ್ವಾತಂತ್ರ್ಯ</u>

### ನಿಜವಾದ ಸ್ವಾತಂತ್ರ್ಯ ಎಂದರೇನು

ಸ್ವಾತಂತ್ರ್ಯ ಬಾಹ್ಯ ಪರಿಸ್ಥಿತಿಗಳಿಂದ ಬರುವುದಿಲ್ಲ, ಆದರೆ ಅದು ಆಂತರಿಕ ಮುಕ್ತಿಯಿಂದ ಬರುತ್ತದೆ.

ನಿಮ್ಮ ಆತ್ಮವನ್ನು ಕಂಡುಹಿಡಿಯಿರಿ, ಅದರೊಂದಿಗೆ ಏಕತೆ ಪಡೆಯಿರಿ, ಅದು ನಿಮ್ಮ ಜೀವನವನ್ನು ಆಳಲಿ, ಆಗ ನೀವು ಸ್ವತಂತ್ರರಾಗುವಿರಿ.

ಆಶೀರ್ವಾದಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/188 – ಶ್ರೀಮಾತೆ**

## ಅಹಂಕಾರದ ಜೊತೆಗೆ ದೈವೀ ಶಾಂತಿಯಿರುವುದಿಲ್ಲ

ಸಂಭವಿಸುವುದೆಲ್ಲವೂ ನಮಗೆ ಒಂದೇ ಒಂದು ಪಾಠವನ್ನು ಕಲಿಸಲಿಕ್ಕಾಗಿ ಇರುತ್ತದೆ: ನಾವು ಅಹಂಕಾರವನ್ನು ತೊಡೆದು ಹಾಕದಿದ್ದರೆ, ನಮಗಾಗಲಿ ಇಲ್ಲವೆ

ಇತರರಿಗಾಗಲಿ ಶಾಂತಿ ಇರುವುದಿಲ್ಲ. ಅಹಂಕಾರ ಇಲ್ಲದೆ ಇದ್ದಾಗ ಜೀವನ ಎಷ್ಟೊಂದು ಅದ್ಭುತ ಪವಾಡವಾಗಿರುತ್ತದೆ!

ಪ್ರೀತಿಯೊಂದಿಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/294 – ಶ್ರೀಮಾತೆ**

## ಎಂದಿಗೂ ಚಿಂತೆ ಮಾಡುವುದು ಬೇಡ

ಕೈಕೊಳ್ಳುವುದೆಲ್ಲವನ್ನೂ ನೀವು ನಿಷ್ಕಾಪಟ್ಯದಿಂದ ಕೈಕೊಳ್ಳಿರಿ ಮತ್ತು ಪರಿಣಾಮಗಳನ್ನು ಭಗವಂತನ ಜವಾಬ್ದಾರಿಗೆ ಬಿಟ್ಟುಕೊಡಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/222 – ಶ್ರೀಮಾತೆ**

## ಚಿಕಿತ್ಸೆ

ನಿಮ್ಮ ತೊಂದರೆಯಿಂದ ಮನಸ್ಸನ್ನು ಸಂಪೂರ್ಣವಾಗಿ ದೂರ ಬೇರೆಡೆ ಹೊರಳಿಸಿರಿ, ಮೇಲ್ಗಡೆಯಿಂದ ಬರುವ ದೈವೀ ಪ್ರಕಾಶ ಹಾಗೂ ದೈವೀ ಶಕ್ತಿ ಇವುಗಳನ್ನು ಕುರಿತು ಪ್ರತ್ಯೇಕವಾಗಿ ಏಕಾಗ್ರತೆ ವಹಿಸಿರಿ. ತಾನು ಬಯಸಿದ ರೀತಿಯಲ್ಲಿ ದೈವೀ ಪ್ರಭು ನಿಮ್ಮ ದೇಹಕ್ಕೆ ಅವಶ್ಯವಾದದ್ದನ್ನು ಕೈಕೊಳ್ಳಲಿ. ನಿಮ್ಮ ಭೌತಿಕ ಸತ್ತೆಯ ಇಡೀ ಜವಾಬ್ದಾರಿಯನ್ನು ಅವನ ಕೈಗಳಿಗೆ ಒಪ್ಪಿಸಿರಿ. ಚಿಕಿತ್ಸೆ ಇದೇ ಆಗಿದೆ.

ಆಶೀರ್ವಾದಗಳೊಂದಿಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/150 – ಶ್ರೀಮಾತೆ**

## <u>ಆಚರಣೆ</u>

### ದೈನಂದಿನ ಕಾರ್ಯಕ್ರಮ

ಸರಳನಾಗಿರು, ಸಂತೋಷದಿಂದಿರು, ಅಚಂಚಲನಾಗಿರು, ಸಾಧ್ಯವಿದ್ದಷ್ಟು ಒಳ್ಳೆಯ ರೀತಿಯಲ್ಲಿ ನಿನ್ನ ಕಾರ್ಯ ಮಾಡು, ಯಾವಾಗಲೂ ನನ್ನತ್ತ ನಿನ್ನನ್ನು ತೆರೆದಿರಿಸು. ನಿನ್ನಿಂದ ಕೇಳಲಾದ ಎಲ್ಲವೂ ಇದಿಷ್ಟೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/77 – ಶ್ರೀಮಾತೆ**

## ಪಟ್ಟು ಹಿಡಿ ಹಾಗೂ ಜಯ ಗಳಿಸು

ಇಂದು ನೀನು ಕೈಕೊಳ್ಳಲು ಶಕ್ತನಾಗದೆ ಇದ್ದುದನ್ನು ನಾಳೆ ಸಿದ್ಧಿಸಿಕೊಳ್ಳುವಿ.

ಪಟ್ಟು ಹಿಡಿ, ನೀನು ಜಯ ಗಳಿಸುವಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/163 – ಶ್ರೀಮಾತೆ**

## ದೈವೀ ಸಾಮರಸ್ಯ ಹಾಗೂ ದೈವೀ ಸರಳತೆ

ದೈವೀ ಸಾಮರಸ್ಯವನ್ನು ಅಭಿವ್ಯಕ್ತಗೊಳಿಸಲು ಎಲ್ಲ ವಿಷಯಗಳಲ್ಲಿ ದೈವೀ ಸರಳತೆ ಅತ್ಯಂತ ಒಳ್ಳೆಯದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/151 – ಶ್ರೀಮಾತೆ**

## ಪ್ರೇಮ ಹಾಗೂ ಪರಿಶುದ್ಧತೆ

ಪ್ರೇಮ ಲೈಂಗಿಕ ಸಂಭೋಗವಲ್ಲ. ಪ್ರೇಮ ಪ್ರಾಣಿಕ ಆಕರ್ಷಣೆ ಮತ್ತು ಆ ಆಕರ್ಷಣೆಯ ವಿನಿಮಯವಲ್ಲ. ಪ್ರೇಮ ಮಮತೆಗಾಗಿ ಇರುವ ಹೃದಯದ ಹಸಿವಲ್ಲ, ಪ್ರೇಮ ಏಕೈಕನಾದವನಿಂದ ನೇರವಾಗಿ ಬರುವ ಮಹಿಮಾನ್ವಿತ ಕಂಪನ ಮತ್ತು ಬಹಳ ಪರಿಶುದ್ಧರಾದವರು ಹಾಗೂ ಬಲಶಾಲಿಗಳು ಮಾತ್ರ ಆ ಕಂಪನವನ್ನು ಸ್ವೀಕರಿಸಲು ಹಾಗೂ ಪ್ರಕಟಗೊಳಿಸಲು ಕ್ಷಮತೆಯುಳ್ಳವರಾಗಿರುತ್ತಾರೆ.

ಪರಿಶುದ್ಧರಾಗಿರುವುದಕ್ಕೆ ಕೇವಲ ಪರಮೋಚ್ಚನ ಪ್ರಭಾವಕ್ಕೆ ತೆರೆದಿರಿಸಿ–ಕೊಂಡಿರಬೇಕು, ಬೇರಾವ ಪ್ರಭಾವಕ್ಕಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/125–26 – ಶ್ರೀಮಾತೆ**

## ನಿಜವಾದ ಪ್ರೇಮ

ನಿಜವಾದ ಪ್ರೇಮ ಎಂದರೇನು ಎಂಬುದು ನಿಮಗೆ ತಿಳಿದಿದೆಯೆ?

ನಿಜವಾದ ಪ್ರೇಮ ಏಕೈಕವಾಗಿದೆ, ಅದು ಭಗವಂತನಿಂದ ಬರುವ ಪ್ರೇಮ, ಅದು ಮಾನವ ಸತ್ತೆಗಳಲ್ಲಿ ಭಗವಂತನಿಗಾಗಿ ಇರುವ ಪ್ರೇಮದ ತಿರುವು ಪಡೆಯುತ್ತದೆ.

ಭಗವಂತನ ಸ್ವಭಾವ ದೈವೀ ಪ್ರೇಮವಾಗಿದೆ ಎಂದು ನಾವು ಹೇಳಬಹುದೆ?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/305 – ಶ್ರೀಮಾತೆ**

## ದೈವೀ ಪ್ರೇಮ ಎಲ್ಲರೊಂದಿಗೆ ಇದೆ

ಪ್ರತಿಯೊಬ್ಬನ ಪ್ರಗತಿಗಾಗಿ ಸಮನಾಗಿ ಕಾರ್ಯ ಕೈಕೊಳ್ಳುತ್ತ ದೈವೀ ಪ್ರೇಮ ಎಲ್ಲರೊಂದಿಗೆ ಇದೆ. – ಆದರೆ ಅದರತ್ತ ಗಮನ ಹರಿಸಿದವರಲ್ಲಿ ಅದು ಜಯ ಸಾಧಿಸುತ್ತದೆ.

ದೈವೀ ಪ್ರೇಮ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/272 – ಶ್ರೀಮಾತೆ**

## ನಾವು ಏನು ಕೈಕೊಳ್ಳುತ್ತೇವೆ ಎಂಬುದಕ್ಕಿಂತ ಹೇಗೆ ಕೈಕೊಳ್ಳುತ್ತೇವೆ ಎಂಬುದು ಮಹತ್ವದ್ದಾಗಿರುತ್ತದೆ

ಯೋಗದ ದೃಷ್ಟಿಕೋನದಿಂದ ನೀವು ಏನು ಕೈಕೊಳ್ಳುತ್ತೀರಿ ಎಂಬುದಕ್ಕಿಂತ ಅದನ್ನು ಹೇಗೆ ಕೈಕೊಳ್ಳುತ್ತೀರಿ ಎಂಬುದು ಅತ್ಯಂತ ಮಹತ್ವದ್ದಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/36 – ಶ್ರೀಮಾತೆ**

## ಭಗವಂತನಿಗೆ ಸೇವೆ ಸಲ್ಲಿಸುವುದರಿಂದ ಬರುವ ಸಂತೋಷ

ಭಗವಂತನಿಗೆ ಸೇವೆ ಸಲ್ಲಿಸುವುದರಿಂದ ಬರುವ ಸಂತೋಷಕ್ಕಿಂತ ಹೆಚ್ಚು ಶ್ರೇಷ್ಠವಾದ ಸಂತೋಷ ಬೇರೆ ಇನ್ನಾವುದರಿಂದಲೂ ಬರುವುದು ಸಾಧ್ಯವಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/104 – ಶ್ರೀಮಾತೆ**

ನಾವು ಎಲ್ಲ ಆದ್ಯತೆಗಳ ಮೇಲ್ಗಡೆಗಿದ್ದು ಭಗವಂತನಿಗೆ ಸೇವೆ ಸಲ್ಲಿಸುವುದನ್ನು ಬಯಸುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/104 – ಶ್ರೀಮಾತೆ**

## ದೈವೀ ಸತ್ಯಕ್ಕೆ ಸೇವೆ ಸಲ್ಲಿಸುವುದು

ದೈವೀ ಸತ್ಯಕ್ಕೆ ಸೇವೆ ಸಲ್ಲಿಸಲು ಜೀವಿಸುವವನು ಬಾಹ್ಯ ಪರಿಸ್ಥಿತಿಗಳಿಂದ ಉಂಟಾಗಬಹುದಾದ ಪರಿಣಾಮಗಳಿಗೆ ಒಳಗಾಗುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/232 – ಶ್ರೀಮಾತೆ**

## ದೈವೀ ಸತ್ಯಕ್ಕೆ ಹತ್ತಿರ ಬರುವುದು

ದೈವೀ ಸತ್ಯಕ್ಕೆ ಹೆಚ್ಚು ಹತ್ತಿರ ಬರಲು ಬಹಳಷ್ಟು ಸಲ ತಿಳಿದುಕೊಳ್ಳದೇ ಇರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/197 – ಶ್ರೀಮಾತೆ**

# ಶ್ರೀ ಅರವಿಂದರು

## ಪರಮೋಚ್ಚನಿಂದ ಬಂದ ನಿರ್ಧಾರಕ ಕ್ರಿಯೆ

ಜಗತ್ತಿನ ಇತಿಹಾಸದಲ್ಲಿ ಶ್ರೀ ಅರವಿಂದರು ಪ್ರತಿನಿಧಿಸುತ್ತಿರುವುದು ಒಂದು ಬೋಧನೆಯನ್ನಲ್ಲ, ಒಂದು ಜ್ಞಾನ ಪ್ರಕಾಶನವನ್ನೂ ಕೂಡ ಅಲ್ಲ, ಅದು ಪರಮೋಚ್ಚನಿಂದ ಬಂದ ನಿರ್ಧಾರಕ ಕ್ರಿಯೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/197 – ಶ್ರೀಮಾತೆ**

## ಶ್ರೀ ಅರವಿಂದರು ಸತತ ನಮ್ಮ ಮಧ್ಯದಲ್ಲಿರುತ್ತಾರೆ

ಶ್ರೀ ಅರವಿಂದರು ಸತತ ನಮ್ಮ ಮಧ್ಯದಲ್ಲಿರುತ್ತಾರೆ ಮತ್ತು ಅವರನ್ನು ನೋಡಲು ಹಾಗೂ ಅವರ ನುಡಿಯನ್ನು ಕೇಳಲು ತಯಾರಾದವರಿಗೆ ತಮ್ಮನ್ನು ತೆರೆದು ತೋರಿಸುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/11 – ಶ್ರೀಮಾತೆ**

## ಶ್ರೇಷ್ಠ ದೈವೀ ಆಶ್ವಾಸನ ಹಾಗೂ ದೈವೀ ಪ್ರಭುವಿನ ವಚನ ನೀಡುವಿಕೆ

ದೈವೀ ಪ್ರಭು, ಈ ದಿನ ಬೆಳಿಗ್ಗೆ ನೀನು ನನಗೆ ನೀಡಿದ ಆಶ್ವಾಸನೆ ಹೀಗಿದೆ: "ನನ್ನ ಕಾರ್ಯವನ್ನು ಸಿದ್ಧಿಸಿಕೊಳ್ಳುವವರೆಗೆ ನಾನು ಮಾರ್ಗದರ್ಶನ ಮಾಡುವ ಹಾಗೂ ಜ್ಞಾನೋದಯ ನೀಡುವ ರೂಪದಲ್ಲಷ್ಟೇ ಅಲ್ಲ, ಆದರೆ ಕಾರ್ಯದಲ್ಲಿ ಕ್ರಿಯಾಶೀಲ ದೈವೀ ಸಾನ್ನಿಧ್ಯದ ರೂಪದಲ್ಲಿಯೂ ಕೂಡ ನಿಮ್ಮ ಮಧ್ಯೆ ಇರುತ್ತೇನೆ." ಮತ್ತು "ನನ್ನೆಲ್ಲ ಸತ್ತೆಯೊಂದಿಗೆ ಪೃಥ್ವಿಯ ವಾತಾವರಣ ಪರಿವರ್ತನೆ ಹೊಂದುವವರೆಗೆ ಪೃಥ್ವಿಯನ್ನು ಬಿಟ್ಟು ಹೋಗುವುದಿಲ್ಲ" ಎಂದು ತಪ್ಪು ಅರ್ಥ ಮಾಡಿಕೊಳ್ಳಲು ಅವಕಾಶ ನೀಡದ ಶಬ್ದಗಳಲ್ಲಿ ವಚನ ನೀಡಿರುವಿ. ನಾವು ಈ ಅದ್ಭುತ ದೈವೀ ಸಾನ್ನಿಧ್ಯಕ್ಕೆ ಯೋಗ್ಯರಾಗುವಂತೆ ಮತ್ತು ಇನ್ನು ಮುಂದೆ ನಮ್ಮಲ್ಲಿರುವ ಎಲ್ಲವೂ ನಿನ್ನ ಘನತೆವೆತ್ತ ದೈವೀ ಕಾರ್ಯದ ನೆರವೇರಿಕೆಗಾಗಿ ಆ ಒಂದು ಸಂಕಲ್ಪದ ಮೇಲೆ ಹೆಚ್ಚು ಹೆಚ್ಚಾಗಿ ಏಕಾಗ್ರತೆಯಲ್ಲಿರುವಂತೆ ಅನುಗ್ರಹಿಸು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/6** **– ಶ್ರೀಮಾತೆ**

## 'ಸಾವಿತ್ರಿ' ಮಹಾಕಾವ್ಯ

ಮನುಷ್ಯನಿಗೆ ಶ್ರೀ ಅರವಿಂದರು ನೀಡಿದ ಮಹತ್ವದ ಕಾಣಿಕೆ 'ಸಾವಿತ್ರಿ'ಯ ಮಹತ್ವ ಅಗಾಧವಾಗಿದೆ. ಅದರ ವಿಷಯ ವಿಶ್ವಂಭರವಾದದ್ದು. ಅದರ ಸಾಕ್ಷಾತ್ಕಾರ ಪ್ರವಾದಿಯದು. ಅದರ ವಾತಾವರಣದಲ್ಲಿ ಕಳೆದ ಸಮಯ ವ್ಯರ್ಥವಾಗುವುದಿಲ್ಲ. ('ಸಾವಿತ್ರಿ' ಕುರಿತು ಇರುವ) ಪ್ರದರ್ಶವನ್ನು ನೋಡಲು ಎಲ್ಲ ಸಮಯವನ್ನೂ ವಿನಿಯೋಗಿಸಿರಿ. ಜನರು ಈಗ ತಾವು ಕೈಕೊಳ್ಳುವುದರಲ್ಲೆಲ್ಲ ಇರಿಸುವ ಉದ್ರಿಕ್ತ ಅವಸರಕ್ಕೆ ಅದು ಸಂತೋಷಕರ ಪರಿಹಾರ ಒದಗಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/26** **– ಶ್ರೀಮಾತೆ**

ದೋಷರಹಿತನಾದವನು ಇತರರ ಅಭಿಪ್ರಾಯ ಕುರಿತು ಕಾಳಜಿ ಮಾಡುವುದಿಲ್ಲ.

**– ಶ್ರೀಮಾತೆ**

## ಶ್ರೀಮಾತೆ

### ಅನಾದಿ ಕಾಲದಿಂದ ಶ್ರೀಮಾತೆಯವರು ಅಲ್ಲಿದ್ದಾರೆ

ಪೃಥ್ವಿಯ ಪ್ರಾರಂಭ ಕಾಲದಿಂದ ಯಾವ್ಯಾವ ಸ್ಥಳದಲ್ಲಿ ಹಾಗೂ ಯಾವ್ಯಾವ ಕಾಲದಲ್ಲಿ ದೈವೀ ಪ್ರಜ್ಞೆಯ ಒಂದು ಕಿರಣವನ್ನು ಪ್ರಕಟಿಸುವ ಸಾಧ್ಯತೆಯಿತ್ತೋ ಅಲ್ಲಿ ನಾನಿದ್ದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/37 – ಶ್ರೀಮಾತೆ**

### ಪರಮೋಚ್ಚ ಶರಣಾಗತಿ

ನಾನು ಯಾವುದೇ ದೇಶಕ್ಕೆ, ಯಾವುದೇ ಸಂಸ್ಕೃತಿಗೆ, ಯಾವುದೇ ಸಮಾಜಕ್ಕೆ, ಯಾವುದೇ ಕುಲಕ್ಕೆ ಸೇರಿದವಳಲ್ಲ, ಕೇವಲ ಭಗವಂತನಿಗೆ ಸೇರಿದವಳಾಗಿದ್ದೇನೆ.

ನಾನು ಯಾವ ಯಜಮಾನನಿಗೂ, ಯಾವ ರಾಜನಿಗೂ, ಯಾವುದೇ ಕಾಯ್ದೆಗೂ, ಯಾವುದೇ ಸಾಮಾಜಿಕ ಸಂಪ್ರದಾಯಕ್ಕೂ ವಿಧೇಯಳಾಗಿರುವುದಿಲ್ಲ, ಕೇವಲ ಭಗವಂತನಿಗೆ ವಿಧೇಯಳಾಗಿರುತ್ತೇನೆ.

ಭಗವಂತನಿಗೆ ನನ್ನ ಸಂಕಲ್ಪ, ಜೀವನ, ಆತ್ಮ ಹೀಗೆ ಎಲ್ಲವನ್ನೂ ಅರ್ಪಿಸಿದ್ದೇನೆ. ಅವನ ಸಂಕಲ್ಪ ನನ್ನ ರಕ್ತವನ್ನು ಹನಿ, ಹನಿಯಾಗಿ ಅವನಿಗೆ ಅರ್ಪಿಸಬೇಕೆಂದಿದ್ದರೆ, ಸಂಪೂರ್ಣ ಸಂತೋಷದಿಂದ ನಾನು ಕೊಡಲು ತಯಾರಾಗಿದ್ದೇನೆ. ಅವನ ಸೇವೆಯಲ್ಲಿ ಯಾವುದೂ ಬಲಿದಾನವಾಗದು, ಏಕೆಂದರೆ ಎಲ್ಲವೂ ಪರಿಪೂರ್ಣ ದಿವ್ಯಾನಂದವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/38 – ಶ್ರೀಮಾತೆ**

### ಅತಿಮಾನಸ ದೈವೀ ಶಕ್ತಿಗೆ ತೆರೆದಿರಿಸಿಕೊಳ್ಳುವುದರ ಕುರುಹು

ನಿಮ್ಮ ಹೃದಯದಲ್ಲಿ ಮತ್ತು ಯೋಚನೆಯಲ್ಲಿ ಶ್ರೀ ಅರವಿಂದರ ಹಾಗೂ ನನ್ನ ನಡುವೆ ಯಾವ ಭೇದಭಾವವನ್ನು ಮಾಡದೆ ಇದ್ದಾಗ, ಶ್ರೀ ಅರವಿಂದರನ್ನು ಕುರಿತು ಯೋಚಿಸುವುದು ನನ್ನನ್ನು ಕುರಿತು ಯೋಚಿಸಿದಂತಾದಾಗ, ನನ್ನನ್ನು ಕುರಿತು ಯೋಚಿಸುವುದು ಅನಿವಾರ್ಯವಾಗಿ ಶ್ರೀ ಅರವಿಂದರನ್ನು ಕುರಿತು ಯೋಚಿಸಿದಂತಾದಾಗ, ನಮ್ಮಿಬ್ಬರಲ್ಲಿ ಒಬ್ಬರನ್ನು ನೋಡುವುದರ ಅರ್ಥ ಏಕೈಕ

ವ್ಯಕ್ತಿಯನ್ನು ನೋಡಿದಂತಾದಾಗ – ನೀವು ಅತಿಮಾನಸ ಶಕ್ತಿ ಹಾಗೂ ಪ್ರಜ್ಞೆ ಇವುಗಳಿಗೆ ತೆರೆದುಕೊಳ್ಳಲು ಪ್ರಾರಂಭಿಸಿದ್ದೀರಿ ಎಂಬುದನ್ನು ತಿಳಿದುಕೊಳ್ಳುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/32 – ಶ್ರೀಮಾತೆ**

## ವಿಜಯ

### ನಿಮ್ಮನ್ನು ಭಗವಂತನ ಸಂಕಲ್ಪದ ಜೊತೆಗಿರಿಸಿರಿ

ಯಾವುದೇ ಮಾನವ ಸಂಕಲ್ಪ ಕೊನೆಗೆ ಭಗವಂತನ ಸಂಕಲ್ಪದ ವಿರುದ್ಧ ತನ್ನ ಪ್ರಾಬಲ್ಯ ಮೆರೆಸುವುದು ಸಾಧ್ಯವಿಲ್ಲ. ನಮ್ಮನ್ನು ಉದ್ದೇಶಪೂರ್ವಕವಾಗಿ ಮತ್ತು ಪ್ರತ್ಯೇಕವಾಗಿ ಭಗವಂತನ ಪಕ್ಕದಲ್ಲಿ ಇರಿಸೋಣ, ಮತ್ತು ಕೊನೆಯಲ್ಲಿ ಜಯ ನಿಶ್ಚಿತವಾಗಿ ದೊರಕುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/171 – ಶ್ರೀಮಾತೆ**

### ಪೃಥ್ವಿಯ ಮೇಲೆ ಅತಿಮಾನಸದ ಪ್ರಕಟಣೆ ಒಂದು ವಾಸ್ತವವಾಗಿದೆ

ಪೃಥ್ವಿಯ ಮೇಲೆ ಅತಿಮಾನಸದ ಪ್ರಕಟಣೆ ಇನ್ನು ಮುಂದೆ ಕೇವಲ ವಚನ ನೀಡುವಿಕೆಯಾಗಿ ಉಳಿದಿಲ್ಲ, ಆದರೆ ಅದು ಜೀವಂತ ವಾಸ್ತವತೆಯಾಗಿದೆ, ಒಂದು ನೈಜತೆಯಾಗಿದೆ.

ಅದು ಇಲ್ಲಿ ಕಾರ್ಯನಿರತವಾಗಿದೆ ಮತ್ತು ಒಂದು ದಿನ ಬರಲಿದೆ, ಆಗ ಅತ್ಯಂತ ಕುರುಡನಾದವನು, ಅಪ್ರಜ್ಞನಾದವನು, ತಿಳಿದುಕೊಳ್ಳಲು ಎಳ್ಳಷ್ಟೂ ಇಷ್ಟವಿಲ್ಲದವನು ಕೂಡ ಅದನ್ನು ಗುರುತಿಸುವ ನಿರ್ಬಂಧಕ್ಕೊಳಗಾಗುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/96 – ಶ್ರೀಮಾತೆ**

### ದೈವೀ ಕೃಪೆ ನಮಗೆ ವಿಫಲತೆಯನ್ನು ಎಂದಿಗೂ ತಂದುಕೊಡುವುದಿಲ್ಲ

ಪ್ರತಿಯೊಂದೂ ಕೆಟ್ಟದ್ದಾಗಿರುವುದಕ್ಕಿಂತ ಇನ್ನೂ ಹೆಚ್ಚು ಕೆಟ್ಟದ್ದಾಗುವುದರತ್ತ ಸಾಗಿ ಹೋಗುತ್ತಿದೆ ಎಂದು ಕಂಡು ಬಂದ ಕ್ಷಣದಲ್ಲಿಯೇ ನಾವು ನಂಬಿಕೆಯನ್ನಿರಿಸುವ ಪರಮೋಚ್ಚ ಕ್ರಿಯೆಯನ್ನು ಕೈಕೊಳ್ಳಬೇಕು ಮತ್ತು ದೈವೀ ಕೃಪೆ ನಮಗೆ ಎಂದಿಗೂ ವಿಫಲತೆ ತಂದುಕೊಡುವುದಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/169 – ಶ್ರೀಮಾತೆ**

# ದೈವೀ ಪ್ರಕಾಶದ ಎಳೆಗಳು

## ಸೂತ್ರಗಳು

1. ಯಾವ ಮಹತ್ವಾಕಾಂಕ್ಷೆಯನ್ನೂ ಹೊಂದಿರುವುದು ಬೇಡ, ಎಲ್ಲದಕ್ಕಿಂತಲೂ ಹೆಚ್ಚಾಗಿ ಯಾವುದರಲ್ಲೂ ಹಕ್ಕು ಸಾಧಿಸುವುದು ಬೇಡ, ಆದರೆ ಪ್ರತಿಯೊಂದು ಕ್ಷಣ, ನಿಮಗೆ ಸಾಧ್ಯವಿದ್ದಷ್ಟು ಗರಿಷ್ಠಮಿತಿ ತಲುಪಿರಿ. ಫೆ 25, 1957

2. ವಿಶ್ವಂಭರ ಪ್ರಕಟಣೆಯಲ್ಲಿ ನಿಮ್ಮ ಸ್ಥಾನ ಕುರಿತು ಹೇಳುವುದಾದರೆ ಪರಮೋಚ್ಚನು ಮಾತ್ರ ಅದನ್ನು ತೋರಿಸಿಕೊಡುವನು. ಮೇ 2, 1957

3. ಜಗತ್ತಿನಲ್ಲಿ ನೀವು ಯಾವ ಸ್ಥಾನದಲ್ಲಿ ಅನಿವಾರ್ಯವಾಗಿ ಇರಬೇಕೆಂಬುದನ್ನು ಪರಮೋಚ್ಚ ಪ್ರಭು ವಿಧಿಸಿದ್ದಾನೆ, ಆದರೆ ಆ ಸ್ಥಾನ ಯಾವುದೇ ಆಗಿರಲಿ, ಅತಿಮಾನಸದ ಸಿದ್ಧಿಯಷ್ಟು ಪರಮೋಚ್ಚ ಎತ್ತರಗಳವರೆಗೆ ಏರಿ ಹೋಗಲು ನಿಮಗೆ ಇತರರಿಗಿದ್ದಷ್ಟೇ ಹಕ್ಕಿರುತ್ತದೆ. ಮೇ 17, 1957

4. ನಿಮ್ಮ ಸತ್ತೆಯ ಸತ್ಯದಲ್ಲಿ ನೀವೇನಿರುವಿರಿ ಎಂಬುದನ್ನು ಅಪರಿಹಾರ್ಯವಾಗಿ ವಿಧಿಸಲಾಗಿದೆ ಮತ್ತು ನೀವು ಅದಾಗುವುದನ್ನು ಯಾವುದು, ಯಾರೂ ತಡೆಯಲಾರರು, ಆದರೆ ನೀವದನ್ನು ಸಿದ್ಧಿಸಿಕೊಳ್ಳಲು ಅನುಸರಿಸಬೇಕಾದ ಮಾರ್ಗವನ್ನು ನಿಮ್ಮ ಮುಕ್ತ ಆಯ್ಕೆಗೆ ಬಿಟ್ಟುಕೊಡಲಾಗಿದೆ. ಮೇ 19. 1957

5. ಆರೋಹಣ ಮಾಡುತ್ತಿರುವ ಉತ್ಕ್ರಾಂತಿಯ ಮಾರ್ಗದಲ್ಲಿ ಪ್ರತಿಯೊಬ್ಬನೂ ಅನುಸರಿಸಬೇಕಾದ ದಿಶೆಯನ್ನು ಆಯ್ದುಕೊಳ್ಳಲು ಸ್ವತಂತ್ರನಾಗಿರುತ್ತಾನೆ, ಆದು ಪರಮೋಚ್ಚ ಸಿದ್ಧಿಯಿರುವ ದೈವೀ ಸತ್ಯದ ಶಿಖರಗಳತ್ತ ತೀವ್ರಗತಿಯ, ಕಡಿದಾದ ಆರೋಹಣ ಮಾಡುವ ದಿಶೆಯಾಗಿರಬಹುದು ಇಲ್ಲವೆ ಆ ಶಿಖರಗಳಿಗೆ ಬೆನ್ನು ತಿರುಗಿಸಿ ಕೊನೆರಹಿತ ಮರು ಜನ್ಮಗಳ ನಿಂತುಹೋಗದ ಸುತ್ತು ಬಳಸಿನ ಹಾಗೂ ಸುಲಭವಾಗಿ ಕೆಳ ಸ್ತರಕ್ಕಿಳಿದು ಹೋಗುವ ದಿಶೆಯಾಗಿರಬಹುದು. ಮೇ 23, 1957

6. ಯುಗ ಯುಗಾಂತರಗಳಲ್ಲಿ ಇಲ್ಲವೆ ನಿಮ್ಮ ಸದ್ಯದ ಜೀವನಾವಧಿಯಲ್ಲಿಯೂ ಕೂಡ ನಿಮ್ಮ ಆಯ್ಕೆಯನ್ನು ಅಂತಿಮವಾಗಿ, ಮಾರ್ಪಡಿಸಲಾಗದಂತೆ ಮಾಡಿಕೊಳ್ಳಬಹುದು ಮತ್ತು ನಂತರ ಪ್ರತಿಯೊಂದು ಹೊಸ ಸಂದರ್ಭದಲ್ಲಿ ನೀವು ಕೇವಲ ಅದನ್ನು ದೃಢೀಕರಿಸಬೇಕು ಇಲ್ಲವೆ ಪ್ರಾರಂಭದಲ್ಲಿ ನೀವು

ಕೊನೆಯ ನಿರ್ಧಾರ ಮಾಡಿರದೇ ಇದ್ದಾಗ, ಪ್ರತಿ ಕ್ಷಣ ಮಿಥ್ಯೆ ಹಾಗೂ ಸತ್ಯಗಳ ನಡುವೆ ನೀವು ಹೊಸ ಆಯ್ಕೆ ಮಾಡಿಕೊಳ್ಳಬೇಕಾಗುವುದು. ಮೇ 23, 1957

7. ಆದರೆ ನೀವು ಪ್ರಾರಂಭದ ದೆಶೆಯಲ್ಲಿ ಮಾರ್ಪಡಿಸಲಾಗದ ನಿರ್ಧಾರವನ್ನು ಮಾಡಿಲ್ಲವೆಂದು ಭಾವಿಸಿದಾಗಲೂ ಕೂಡ, ವಿಶ್ವದ ಇತಿಹಾಸದಲ್ಲಿರುವ ಆ ಕೆಲವೊಂದು ಅಸಾಧಾರಣ ಕ್ಷಣಗಳಲ್ಲಿ ದೈವೀ ಕೃಪೆಯ ಸಾನ್ನಿಧ್ಯವಿದ್ದಾಗ, ಅದು ಪೃಥ್ವಿಯ ಮೇಲೆ ಅವತರಿಸಿದ್ದಾಗ, ನೀವು ಬದುಕಿರುವ ಸುದೈವ ನಿಮ್ಮದಾಗಿದ್ದರೆ, ಕೆಲವೊಂದು ಅಪರೂಪದ ಕ್ಷಣಗಳಲ್ಲಿ ನಿಮಗೆ ಕೊನೆಯ ಆಯ್ಕೆಯನ್ನು ಮಾಡಿಕೊಳ್ಳುವ ಸಾಧ್ಯತೆಯನ್ನು ಅದು ಒದಗಿಸುತ್ತದೆ, ಅದು ನಿಮ್ಮನ್ನು ನೇರವಾಗಿ ಗುರಿಯತ್ತ ಕರೆದೊಯ್ಯುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/349–350**

ಮೇ 23, 1957

8. ಸತ್ತೆಯಲ್ಲಿರುವ ವಿಭಜನೆ ಒಂದು ಕಪಟತನವಾಗಿರುತ್ತದೆ.

9. ಮನುಷ್ಯ ತನ್ನ ದೇಹ ಹಾಗೂ ತನ್ನ ಸತ್ತೆಯ ಸತ್ಯ ಇವುಗಳ ನಡುವೆ ಕಂದರವನ್ನು ಕೊರೆದು ತೆಗೆಯುವುದು ಅತ್ಯಂತ ಹೆಚ್ಚಿನ ಕಪಟತನವಾಗಿರುತ್ತದೆ.

10. ಕಂದರವೊಂದು ನಿಜವಾದ ಸತ್ತೆಯನ್ನು ಭೌತಿಕ ಸತ್ತೆಯಿಂದ ಬೇರ್ಪಡಿಸಿದಾಗ ಪ್ರಕೃತಿ ಕೂಡಲೆ ಆ ಕಂದರವನ್ನು ಎಲ್ಲ ವಿರೋಧೀ ಸೂಚನೆಗಳಿಂದ ತುಂಬಿ ಬಿಡುತ್ತದೆ, ಆ ಸೂಚನೆಗಳಲ್ಲಿ ಅತ್ಯಂತ ಮಾರಕ ಹಾಗೂ ಕೇಡುಂಟು ಮಾಡುವುದು ಸಂಶಯವಾಗಿರುತ್ತದೆ.

11. ನಿಮ್ಮ ಸತ್ತೆಯ ಸತ್ಯವನ್ನು ನಿರಾಕರಿಸುವುದಕ್ಕೆ ಯಾವುದಕ್ಕೂ, ಎಲ್ಲಿಯೂ ಅನುವು ಮಾಡಿಕೊಡದೆ ಇರುವುದು ನಿಷ್ಕಾಪಟ್ಯವಾಗಿರುತ್ತದೆ.

**– ಶ್ರೀಮಾತೆ**

## ಶ್ರೀ ಅರವಿಂದರ
# ವಾಮದೇವನ "ಅಗ್ನಿ ಸೂಕ್ತಗಳು"

**ಮೂಲ ಇಂಗ್ಲೀಷ್: ಶ್ರೀ ಅರವಿಂದರು**
**ಕನ್ನಡ: ಪುಟ್ಟು ಕುಲಕರ್ಣಿ**

ವರ್ತಮಾನದ ಪಾಂಡಿತ್ಯ ಪ್ರಪಂಚದ ಎದುರಿಗೆ ಇರುವ ಒಂದು ಮುಖ್ಯ ಪ್ರಶ್ನೆ – ಅದರಲ್ಲೂ ಅತ್ಯಂತ ಕಠಿಣಮಯವಾದ ಮತ್ತು ವಿವಾದಗ್ರಸ್ತವಾಗಿರುವ ವಿಷಯವೆಂದರೆ – ಋಗ್ವೇದವನ್ನು ವ್ಯಾಖ್ಯಾನಿಸುವದು ಹೇಗೆ? ಇಂತಹ ಸಂಕೀರ್ಣಮಯ ವಿಷಯವನ್ನು, ಸಂದರ್ಭವನ್ನು ನಿರ್ವಹಿಸಲೇಬೇಕಾಗಿದೆ. ಈ ಸಂದಿಗ್ಧತೆ ಮತ್ತು ವಿವಾದಗಳು ಕೇವಲ ವರ್ತಮಾನದ ಟೀಕೆಗಳಿಂದ ಸೃಷ್ಟಿಯಾದುದಲ್ಲ; ಪ್ರಾಚೀನ ಕಾಲದಿಂದಲೂ ಈ ತೆರನಾದ ವಾತಾವರಣವು, ಹಲವು ವಿಧಗಳಲ್ಲಿ ಜರುಗುತ್ತಲೆ ಬಂದಿವೆ. ಹಾಗಾದರೆ ಇಲ್ಲಿರುವ ಶಂಕೆಯಾದರೂ ಏನು?

ಯಾವುದೇ ಸಂಶಯಕ್ಕೂ ಆಸ್ಪದವಿಲ್ಲದಂತೆ, ಕೆಲ ಅಂಶಗಳಿಂದ, ಇದು ಭಾಷೆಯ ಆರ್ಯ(ಪ್ರಾಚೀನತೆಯ) ಗುಣದಿಂದ ಉದ್ಭವಿಸಿದೆ. ಏಕೆಂದರೆ ಋಗ್ವೇದದ ಹಲವಾರು ಶಬ್ದಗಳು ವರ್ತಮಾನದಲ್ಲಿ ವ್ಯವಹಾರಾತೀತ ಗುಣಗಳಿಂದಾಗಿ, ವೇದದಲ್ಲಿ ಪ್ರಯೋಗಿಸಲ್ಪಟ್ಟ ಶಬ್ದಗಳಿಗೆ ಹಲವಾರು ಅರ್ಥಗಳನ್ನು ಅಡಕಗೊಳಿಸಿಕೊಳ್ಳುವ ಶಕ್ತಿ ಪ್ರಾಚೀನ ಸಂಸ್ಕೃತಕ್ಕೆ ಇತ್ತು. ಅದರಲ್ಲೂ ಪ್ರಾಥಮಿಕ ಹಂತದಲ್ಲಿ ಭಾರತದ ಪ್ರಾಚೀನ ಪಂಡಿತರು ವೇದದ ಸಂಪ್ರದಾಯಬದ್ಧ ಕಲಿಕೆಯನ್ನು ಸುವ್ಯವಸ್ಥಿತಗೊಳಿಸಲು ಯತ್ನಿಸಿದರೂ ಸಹಿತ, ವೇದದ ತುಂಬೆಲ್ಲ ಇರುವ ಸಂಕೇತಗಳು/ಪ್ರತಿಮೆಗಳು/ಪ್ರತೀಕಗಳು/ಚಿಹ್ನೆಗಳು/ರೂಪಕಗಳು ಯಾವುದೇ ಸಂದೇಹಕ್ಕೂ ಆಸ್ಪದವಿರದ ಹಾಗೆಯೇ ಸಂಯೋಜಿಸಲ್ಪಟ್ಟಿದ್ದರೂ ಸಹಿತ, ಅವು ಏನನ್ನು ಸಂಕೇತಿಸುತ್ತವೆ? ಎನ್ನುವದರ ಬಗೆಗೆ ಸೂಕ್ತ ನಿರ್ಣಯವನ್ನು ನಿರೂಪಿಸಲು ಅವರಿಗೆ ಸಾಧ್ಯವಾಗಲಿಲ್ಲ. ಅದು ಪ್ರಶ್ನೆಯಾಗಿಯೇ ಉಳಿಯಿತು. ಇಲ್ಲಿರುವ ಸಂಕೇತಗಳು/ಪ್ರತಿಮೆಗಳಿಗೆ ಇರುವ ಅರ್ಥ ಕೇವಲ ಧಾರ್ಮಿಕ ಹಿನ್ನೆಲೆಯದು ಮಾತ್ರವೇ? ಅಥವಾ ಬೇರೆ ಏನನ್ನೋ ಈ ರೀತಿಯಾಗಿ ಹೇಳುತ್ತಿದ್ದಾರೆಯೋ? ಇಲ್ಲವೇ ಇವು ಯಾವುದೇ ಗೂಢಾರ್ಥವನ್ನೂ ಹೊಂದಿರದ ಪುರಾಣ ಪ್ರತಿಮೆಗಳೆ? ಅಥವಾ ಪ್ರಾಚೀನ ಕಾಲದ ನಿಸರ್ಗಾರಾಧಕರಿಂದ

ಅಭಿವ್ಯಕ್ತಗೊಂಡ ಕಾವ್ಯಾತ್ಮವಾಗಿ ಹೊರಹೊಮ್ಮಿದ ಉದ್ಘೋಷಗಳೋ? ಜ್ಯೋತಿಷ್ಯಾರಾಧಕರಿಂದ ಹೆಣೆಯಲ್ಲಪಟ್ಟ ಸಂಕೇತಗಳೋ? ಪ್ರಕೃತಿವಾದದ ಯಥಾಸ್ಥಿತಿಯನ್ನು ತಿಳಿಸುವ ಉದ್ಗಾರಗಳೋ? ಇಲ್ಲವೇ ದೇವಗಣಗಳ ಕರ್ಮ–ಕರ್ತವ್ಯದಿಂದ ರೂಪುಗೊಂಡಿರುವ ಭೌತಿಕ–ತತ್ತ್ವಗಳನ್ನು ರೂಪಿಸುತ್ತಿರುವ ಸೂತ್ರಗಳೋ? ಅದೆಲ್ಲಕ್ಕೂ ಮಿಗಿಲಾಗಿ ಮತ್ತೂ ಗೂಢವಾದ–ಗುಹ್ಯವಾದ ಅರ್ಥವನ್ನು ಅಡಗಿಸಿಕೊಂಡಿರುವ ಬೆಡಗುಗಳೋ?

ಈ ಎಲ್ಲ ಪ್ರಶ್ನೆಗಳೂ ಅಸಂದಿಗ್ಧ ಪ್ರಮಾಣಗಳೊಡನೆ ಉತ್ತರಿಸಲ್ಪಟ್ಟಲ್ಲಿ, ಆಗ ಈ ಭಾಷಾ ಸಮಸ್ಯೆಯು ಅಂತಹ ದೊಡ್ಡ ಅಡೆ–ತಡೆ ಒಡ್ಡುವದಿಲ್ಲ ಅದರಲ್ಲೂ ಕೆಲವೊಂದು ಸ್ತೋತ್ರಗಳು ಮತ್ತು ಕಾವ್ಯಾತ್ಮಕ ಸಾಲುಗಳು ಮತ್ತೂ ಗಡುಚಾಗಿಯೇ ಇರಬಹುದಾದ ಸಂದರ್ಭಗಳೂ ಇವೆ. ಮತ್ತೆ ಕೆಲವೊಂದು ಸ್ತೋತ್ರಗಳು ಮತ್ತು ವಿವರಗಳು ಗುಹ್ಯವಾಗಿಯೇ ಉಳಿಯಬಹುದು. ಆದರೆ ಅವುಗಳ ಸಾಮಾನ್ಯ ಅರ್ಥ, ಆಕಾಂಕ್ಷೆ, ಅಭಿಪ್ರಾಯಗಳು ಸುಲಭದಲ್ಲಿ ತೆರೆದುಕೊಳ್ಳುತ್ತವೆ. ಆದರೆ ಯಾವುದೆ ಕಾರಣಕ್ಕೂ ವೇದದ ಏಕಮುಖೀ ವ್ಯಾಖ್ಯಾನವು ಎಂದಿಗೂ ಸಮಸ್ಯೆಗೆ ಪರಿಹಾರ ಒದಗಿಸುವದಿಲ್ಲ. ಕನಿಷ್ಠ ಪಕ್ಷ ಇದರ ಪರಿಹಾರಕ್ಕೆ ಆವರ್ತಮಾನ ಕಾಲ(Hither to) ವಾದದ ತೆರದಲ್ಲಿ ಅನುಷ್ಠಾನಿಸುವಂತೆ ಅನ್ವಯಿಸಲ್ಪಟ್ಟರೆ, ಆಗ ಮಾತ್ರ ಒಂದು ಸುನಿಶ್ಚಿತ ಮತ್ತು ಸಮರ್ಥನೀಯ ಹಾಗೂ ಸರ್ವಸಮ್ಮತವಾಗ–ಬಹುದಾದ ಸಂತೃಪ್ತಿ ದೊರೆಯಬಹುದು.

ಒಂದು ವೇಳೆ ಸ್ತೋತ್ರಗಳು ಮತ್ತೂ ಗೊಂದಲಮಯವಾಗಿ, ವಿಲಕ್ಷಣವಾಗಿ, ಅಸಂಗತವಾಗಿ ಜೊತೆಗೆ ಈ ಅಸಮಂಜಸ ಗುಣವೇ ಸ್ತೋತ್ರಗಳ ಮೂಲ ಗುಣವೆನ್ನುವ ಹಾಗೂ ಇದರಿಂದಾಗಿಯೇ ಇವು ಮೌಲ್ಯರಹಿತವಾಗಿವೆ ಎನ್ನುವ ಭಾವನೆಯಲ್ಲಿಯೇ ಸಂಶೋಧನಾ ವಲಯವೂ ಸಹಿತ ಕಲ್ಪನಾ ಪ್ರಪಂಚದಲ್ಲಿಯೇ ತಮ್ಮ ಲಹರಿಗಳನ್ನು ನಿಗದಿಗೊಳಿಸಿಕೊಂಡು ಮತ್ತೂ ಮೇಲಾಗಿ ಅವುಗಳ ಅಂತರಾರ್ಥದ ಬಗೆಗೆ ನಿಷ್ಕಾಳಜಿಯನ್ನೂ ಸೇರಿಸಿಕೊಂಡು ತಿರಸ್ಕಾರವನ್ನು ತೋರಿಸುತ್ತ ತಮ್ಮ ಅಭಿವ್ಯಕ್ತಿಗಳನ್ನು ವ್ಯಕ್ತಪಡಿಸಿದರೂ ಸಹಿತ, ವೇದದ ಅಂತರಾರ್ಥಕ್ಕೆ ಯಾವುದೆ ಧಕ್ಕೆಯಂತೂ ಬರುವದಿಲ್ಲ. ಇವೆಲ್ಲ ಗೊಂದಲಗಳಿಂದ ನಾವು ಹೊರಬರುವ ತನಕ, ಭ್ರಮಾಪೂರಿತವಾದ ಸಂಶಯಗಳನ್ನು ನಿವಾರಿಸಕೊಳ್ಳದ ತನಕ, ಈ ತೆರನಾದ ಗೊಂದಲಮಯ ಪ್ರಶ್ನೆ ಮತ್ತೂ ವಿಫಲ ಮಥನಗಳು ಉತ್ತರವನ್ನು ಕೊಡಲು ಅಸಮರ್ಥವಾಗುತ್ತವೆ.

ಕೆಲವು ವರ್ಷಗಳ ಹಿಂದೆ ನಾನು (ಶ್ರೀ ಅರವಿಂದರು) ಈ ವಿಷಯವಾಗಿ ಹಲವಾರು ಲೇಖನಗಳನ್ನು ಬರೆದು, ಅದರಲ್ಲಿ, ವೇದದ ಅವ್ಯಕ್ತ ಅರ್ಥದ ಬಗೆಗೆ ವಿವರಗಳನ್ನು ಒದಗಿಸಿದ್ದೇನೆ. ಅದರಲ್ಲಿ – ಈ ಋಗ್ವೇದದ ಋಕ್ಕುಗಳ (ಅಗ್ನಿಸೂಕ್ತದ ಋಕ್ಕುಗಳ) ಆಂತರ್ಯವನ್ನು ಅರಿಯಲೆತ್ನಿಸಿದಾಗ, ಆ ಋಕ್ಕುಗಳು ನಿರ್ಮಾಣಗೊಂಡ ಅವಧಿಯ ಸಾಂಸ್ಕೃತಿಕ–ವೈಚಾರಿಕ ಹಿನ್ನೆಲೆಯಲ್ಲಿ ರಚಿಸಲ್ಪಟ್ಟಿವೆ ಎಂದು ಅಭಿಪ್ರಾಯ ಪಟ್ಟಿದ್ದೆ. ಇದೇ ತೆರನಾದ ಸಾಂಸ್ಕೃತಿಕ–ವೈಚಾರಿಕ ವಾತಾವರಣವು ಗ್ರೀಸ್ ಮತ್ತು ಇತರೇ ಪ್ರಾಚೀನ ಸಂಸ್ಕೃತಿಗಳಲ್ಲಿಯೂ ಸಮಾನ ಅಂಶ ಹೊಂದಿರುವದನ್ನು ಕಾಣಬಹುದು. ಹಾಗೆಂದು, ಆ ಸಂಸ್ಕೃತಿಗಳು ಮತ್ತು ಭಾರತೀಯ ಸಂಸ್ಕೃತಿಯು ಆಚಾರ–ವಿಚಾರಗಳಲ್ಲಿ ಏಕಕಾಲೀನ ಅಥವಾ ಸಮಕಾಲೀನವಾಗಿದ್ದವು ಎಂದು ಹೇಳುತ್ತಿಲ್ಲ. ಆದರೆ ಮುಖ್ಯವಾಗಿ, ಅಲ್ಲಿ ಆಗ ಸಮಾಜದ ವ್ಯವಸ್ಥೆಗೆ "ದ್ವಿಮುಖ"ವಾದ ವೈಚಾರಿಕ ವ್ಯವಸ್ಥೆ ಇತ್ತು ಎನ್ನುವದನ್ನು ಪುರಾವಿಸುತ್ತದೆ. ಮೊದಲನೆಯದಾಗಿ, "ಬದುಕಿಗಾಗಿ ಸರ್ವೇ ಸಾಮಾನ್ಯರಿಗೂ" (Profanum vulgus) ಹಾಗೂ ಎರಡನೇಯದಾಗಿ "ಸಮಾಜದಿಂದ ದೂರವೇ ಇದ್ದು (Odi Profanum vulgus) ಗೂಢ ಅಥವಾ ಗುಹ್ಯ ವಿದ್ಯೆಯನ್ನು – ಜ್ಞಾನವನ್ನು ಅರಸುವ–ಉಪಕ್ರಮಿಸುವ ಹಂತದ ಮಾರ್ಗ–ವ್ಯವಸ್ಥೆ ಇತ್ತು. ಇದು ಗಹನಾತಿಗಹನವಾದ ನಿಗೂಢವಾದ ಜ್ಞಾನವನ್ನು ಅರಸಲು ಪ್ರಾರಂಭಗೊಳಿಸಿದ ಅವಧಿಯಲ್ಲಿ ಈ ವ್ಯವಸ್ಥೆ ಇತ್ತು. ಹೀಗಾಗಿ ವೇದಕಾಲದ ಋಷಿಗಳು ಜನಸಮುದಾಯದಿಂದ ದೂರವೇ ಇದ್ದು, ತಮ್ಮ ಅಂತರ್ದೃಷ್ಟಿಯ ಮೂಲಕ ಈ ನಿಗೂಢಗಳನ್ನು ಹಾಗೂ ಅವುಗಳ ಅರ್ಥವನ್ನೂ ದೃಷ್ಟ ಮಾಡಿಕೊಳ್ಳುವ ಸಲುವಾಗಿ ತಮ್ಮ ಬದುಕನ್ನು ನಿಗದಿಪಡಿಸಿಕೊಂಡಿದ್ದರು.

ಈ ರೀತಿಯಾಗಿ ಲಭ್ಯವಾದ ಜ್ಞಾನವನ್ನು ಕೇವಲ ಬಾಹ್ಯ ರೂಪದ ಅಕ್ಷರಗಳಲ್ಲಿ ವಿರೂಪಗೊಳಿಸುವ ಮೂಲಕ ರಕ್ಷಿಸಲು ಇಚ್ಚಿಸಲಿಲ್ಲ. ಅದರಲ್ಲೂ ಅವರ ಅಕ್ಷರಗಳ ಆಕಾರಗಳಲ್ಲಿ ನಿರೂಪಿವಾಗುವ ಅರ್ಥ ವ್ಯತ್ಯಾಸದಿಂದಾಗಿ ಉದ್ಭವವಾಗುವ ಜ್ಞಾನ ಪತನವನ್ನು ಅವರು ಒಪ್ಪಿರಲಿಲ್ಲ. ಅದಕ್ಕಿಂತ ಮಿಗಿಲಾಗಿ ದರ್ಶನದ ಮೂಲ ಪರಿಕಲ್ಪನೆ ಇಲ್ಲದೇ, ಕೇವಲ ಶಾಬ್ದಿಕ ವಿನ್ಯಾಸದಲ್ಲಿ ಅದನ್ನು ಅರ್ಥೈಸಿಕೊಳ್ಳಲು ಸಾಧ್ಯವೂ ಇಲ್ಲ ಎಂದು ವಿಶ್ವಾಸದಿಂದಲೇ ಅದಕ್ಕೊಂದು ಸಂಕೇತಾಕ್ಷರಗಳಲ್ಲಿ ಅಭಿವ್ಯಕ್ತಗೊಳಿಸುವ ವಿಧಾನವನ್ನು ರೂಢಿಸಿದರು. ಒಮ್ಮೆ ಈ ಸಂಕೇತ/ಪ್ರತಿಮೆಗಳ ಆಂತರ್ಯ ಪ್ರಕಾಶನಗೊಂಡರೆ, ಆಗ ಜ್ಞಾನದ ಹರಿವು ಸಹಜವೆಂದು ಅವರ ಅನುಭವವೂ ಆಗಿದ್ದಿತು.

# ಶ್ರೀ ಅರವಿಂದರ
# 'ತ್ರಾಟಕ ಸೂರ್ಯ'

## 8

**– ಪುಟ್ಟು ಕುಲಕರ್ಣಿ**

ಈ ದಿನದ ಯೋಗದ ಅನುಷ್ಠಾನಕ್ಕಾಗಿ ಸಿದ್ಧನಾದೆ. ಈ ನಿಮಂತ್ರಣವಾದರೂ ಎಲ್ಲಿಂದ ಬರುತ್ತಿದೆ? ನನಗೊಬ್ಬನಿಗೇ ಮಾತ್ರ ಇದು ರೂಪಿತವಾಗಿದೆಯೇ? ನಮ್ಮ ಚಿಂತನಗಳಿಗೂ ನಮ್ಮ ಸುತ್ತಲೂ ಇರುವ ಪ್ರಕೃತಿಯ ಸೂಕ್ಷ್ಮಾತಿಸೂಕ್ಷ್ಮ ಘಟನೆಗಳಿಗೂ ಅವಿನಾಭಾವ ಸಂಬಂಧ ಇದೆ ಎನ್ನುವದನ್ನು ಯೋಗ ಸುಲಭದಲ್ಲಿ ಮನದಟ್ಟು ಮಾಡುತ್ತಿದೆ. ಈ ಅನುಭವವೇ ನನಗೆ ಅಲೀಪರ ಸೆರೆಮನೆಯಲ್ಲಿ ಮರ–ಗಿಡ–ಬಳ್ಳಿ–ಹಕ್ಕಿ–ಸೆರೆಮನೆಯಲ್ಲಿದ್ದ ಇತರರು, ಜೊತೆಗೆ ಕಾವಲು ಕಾಯುತ್ತಿದ್ದ ವ್ಯಕ್ತಿ, ಎಲ್ಲರೂ ಕೃಷ್ಣನಂತೆಯೇ ಕಂಡದ್ದು, ಮತ್ತೆ ಸ್ಮರಣೆಗೆ ಬಂದಿತು. ನನ್ನನ್ನು ವಿರೋಧಿಸುತ್ತಿದ್ದ ಸರಕಾರೀ ನ್ಯಾಯವಾದಿ, ನನ್ನ ವಿಚಾರಣೆ ನಡಿಸುತ್ತಿದ್ದ ನ್ಯಾಯಾಧೀಶ, ನನ್ನ ಪರವಾಗಿ ವಾದಿಸಲು ಬಂದ ರಾನಡೆ ಎಲ್ಲರೂ ಎಲ್ಲರೂ ಕೃಷ್ಣರೇ. ಅಂದರೆ ನಾನೂ ಸಹಿತ ಕೃಷ್ಣನೇ? ಎನ್ನುವ ಹಾಸವೂ ಒಂದು ಕ್ಷಣ ಮಿಂಚಿತು. ನನ್ನ ಕಲ್ಪನೆಗೆ ನನಗೇ ನಗು ಬಂದಂತಾಯಿತು. ತಕ್ಷಣ ಸುಧಾರಿಸಿಕೊಂಡು, ಧ್ಯಾನಕ್ಕೆ ಸಿದ್ಧನಾದೆ. ಅಂದರೆ, ಈಗ ಅನುಷ್ಠಾನಿಸುತ್ತಿರುವ ಸಾಧನಾ ಪಥದಲ್ಲಿ, ಇದೀಗ ಸ್ಪಷ್ಟವಾಗುತ್ತಿರುವ ವಿಷಯ, ನಾನು ಕಾಣಬೇಕೆಂದಿರುವ ಆ ಜಗತ್ತನ್ನು ನನ್ನಲ್ಲಿಯೇ ದೃಷ್ಟಿಸಿಕೊಳ್ಳಬೇಕಿದೆ.

ಆದರೆ ಮುಖ್ಯವಾಗಿ ಮೂವರು ದೇವತಾ ಸ್ವರೂಪದ ದಿವ್ಯಸ್ತ್ರೀ ಮಂಡಳವು ನನ್ನನ್ನು ಪಕ್ವಗೊಳಿಸಲು ಸದಾ ಸಿದ್ಧರಿದ್ದಾರೆ. ಇದನ್ನು ಮಂಡಳ ಎಂದು ಕರೆಯುತ್ತಿರುವದಕ್ಕೆ ಕಾರಣ ಈ ಮೂವರ ಮೂಲ ತ್ರಿಗುಣ ತತ್ತ್ವವಾಗಿ ಆತ್ಮಾಭಿಮಾನದ ಬಲ ತೇಜ ಸತ್ಯವಾಗಿ ದುರ್ಗಾ ಇದ್ದರೆ, ಸೌಭಾಗ್ಯದೊಡತಿಯಾಗಿ ಮಂಗಳದ ಧನ್ಯತೆಗೆ ಸಿರಿಲಕ್ಷ್ಮಿ ಮತ್ತು ಪ್ರಳಯಮುಖಿಯಾಗಿರುವ, ರುದ್ರ ತಾಂಡವದ ನೃತ್ಯ ಗೈಯುವ ಕಾಳಿ ಇದ್ದಾಳೆ. ಇವರೆಲ್ಲರ ಕೃಪೆ ನನಗಿರುವಲ್ಲಿ ಅಲ್ಲಿ ಯಾತನೆಯ ಘಾತ ಬರದು, ಹಿಂಸೆಯ ಗಾಳಿ ಬೀಸದು. ಪ್ರತಿಯೊಂದು ತಾರೆಯೂ ರಕ್ಷಣೆಗೆ ಬೆಳಕೀಯುತ್ತದೆ. ಏಕೆಂದರೆ ಅಲ್ಲಿಯೂ ಇರುವದು ಈ ಕಾಳಿ, ಅಲ್ಲಿ ಅಶುಭವೆಂದಿಗೂ ಬರುವದಿಲ್ಲ. ಕಪಟ ನಾಟಕದ ವಿದ್ರೋಹಗಳಿಗೆ

ಅವಕಾಶವಾಗುವದಿಲ್ಲ. ಮೇಲ್ತೋರಿಕೆಯ ಪ್ರೇಮದ ಹಿಂದೆ ಅಡಗಿರುವ ಕ್ರೂರ ಹಗೆತನದ ದ್ವೇಷ ಅಲ್ಲಿ ಉಳಿಯಲು ಸಾಧ್ಯವಿಲ್ಲ. ಇಂತಹ ಪ್ರೇಮಪೂರ್ಣವಾದ ಮಧುರತೆಯ ಬೀಜವನ್ನು ನನ್ನ ಹೃದಯದಲ್ಲಿ ಶಾಶ್ವತಗೊಳಿಸಿಕೊಳ್ಳಬೇಕಿದೆ. ಅದಕ್ಕಾಗಿಯೇ ನನಗೆ ನಿಮಂತ್ರಣವನ್ನು ಇತ್ತು ಶ್ರೀಮಾತೆ ಕರೆಸಿಕೊಂಡಿದ್ದಾಳೆ ಎನ್ನುವದೂ ಅರಿವಾಯಿತು. ಈ ಜಡದ ಸತತ ಸಾಂಗತ್ಯದಲ್ಲಿ ಸಿಲುಕಿಕೊಂಡಿರುವದಕ್ಕಿಂತ, ಕೇವಲ ಅನ್ನಮಯ, ಪ್ರಾಣಮಯ ಮತ್ತು ಮನೋಮಯ ಹಂತದಲ್ಲಿಯೇ ಉಳಿಯುದಕ್ಕಿಂತ, ಮತ್ತೂ ಆರೋಹಗೊಂಡು ವಿಜ್ಞಾನಮಯ ಕೋಶವನ್ನು ತಲುಪಬೇಕಾಗಿದೆ. ಅದರಾಚೆ ಇರುವ ಆನಂದಮಯ ಮತ್ತು ಚಿನ್ಮಯ ಕೋಶದ ಜೊತೆಗೆ ಸ್ಪಂದಗೊಳ್ಳಬೇಕಿದೆ. ಮನುಕುಲದ ಪ್ರಚಲಿತ ವಿಕಾಸವನ್ನು ನೋಡಿದರೆ, "ಮನೋಮಯಃ ಪ್ರಾಣ ಶರೀರ ನೇತಾ" ಎನ್ನುವ ಉಪನಿಷತ್ ವಾಣಿಯ ಸಾಕ್ಷಾತ್ಕಾರವಾಗುತ್ತದೆ.

ಮೊದಲನೇ ದೇವತೆ ನಿಯತಿ (ವಿಶ್ವ ನಿಯಮ) ಅದು ಸುಸ್ಪಷ್ಟವಾದ ದೃಷ್ಟಿಯನ್ನು ಅಂದರೆ ಕಾಣ್ಕೆಯ ಹಂತದಲ್ಲಿಯೇ ಇದೆ ಜೊತೆಗೆ ಪರಮ ಶೀತದ ಸ್ವಭಾವದಲ್ಲಿ ಬಹುತೇಕವಾಗಿ ಎಲ್ಲರೂ ದೂರವಿರಿಸುವ ಸ್ವಭಾವದಲ್ಲಿದ್ದರೂ, ಅವಳದೇ ನಿಗದಿತ ಅವಕಾಶದಲ್ಲಿ ಪರಮ ಶಕ್ತಿದಾಯಕಳಾಗಿದ್ದಾಳೆ, ಅಭಿಮಾನಧನಳಾಗಿದ್ದಾಳೆ ಅಷ್ಟೇ ದಿಟ್ಟತನದಿಂದಲೂ ಸ್ಥಿತಳಿದ್ದಾಳೆ. ಇನ್ನು ಎರಡನೆಯವಳೋ, ಉತ್ಸಾಹದ ಉಜ್ಜ್ವಲತೆಯ ಕಾಂತಿಯಲ್ಲಿ ಮಿನುಗುತ್ತಿದ್ದಾಳೆ, ಅವಳ ಹೃದಯದಲ್ಲಿ ಅಗ್ನಿ ಜ್ವಾಲೆ ಸದಾ ಪ್ರಜ್ವಲಿಸುತ್ತಿದೆ, ಆದರೆ ಅವಳ ಭ್ರಕುಟಿಗಳ ಸುತ್ತ ಆ ತಮವು ಆವರಿಸುತ್ತಿದೆ, ಆದರೆ ಕ್ರಮೇಣ ಕ್ರಮೇಣ ಮುಂದೆ ಸಾಗುತ್ತಿದ್ದಂತೆಯೇ ಅದು ಕಳಾಹೀನವಾಗತೊಡಗಿತು. ಅದರ ಪರಿಶೋಧಾತ್ಮಕವಾದ ಅನಿಮೇಷ ದೃಷ್ಟಿಯನ್ನು ಎದುರಿಸುವ ಸಾಮರ್ಥ್ಯ ಅವಳಲ್ಲಿ ಇಲ್ಲ. ಈ ಎಲ್ಲ ಚಿಂತನಗಳನ್ನೂ ಹುಟ್ಟು ಹಾಕಿದ ಆ ಪರಮಾತಿ ಪರಮ ಶೀತ ಪವನದ ಬಲವೂ ಅಲ್ಲಿಲ್ಲ. ನಮ್ಮ ಮನಸ್ಸುಗಳ ಮಜಲುಗಳನ್ನು ಪಾಲನೆ–ಪೋಷಣೆ ಮಾಡುತ್ತಿದ್ದರೂ, ಮಾನವನ ಹೃದಯಗಳನ್ನು ಕಲ್ಲಿನಂತೆ ಕಠಿಣಗೊಳಸುತ್ತಿದ್ದಾಳೆ. ಇದಕ್ಕೆ 'ವಿಜ್ಞಾನ'ವೆಂದು ಅವಳ ಹೆಸರನ್ನು ಕೊಟ್ಟುಕೊಂಡಿದ್ದೇವೆ. ಇದನ್ನೇ ಇನ್ನುಳಿದವರು 'ಮತ' ಎಂದು ಕರೆಯುತ್ತಿದ್ದಾರೆ. ತದನಂತರದಲ್ಲಿ ಬರುವ ಮೂರನೇವಳು ಎಂದರೆ, ಸಂಪೂರ್ಣವಾಗಿ ಗವಸಿನಲ್ಲಿಯೇ ಇದ್ದು, ಅಸ್ಪಷ್ಟತೆಯಲ್ಲಿಯೇ ಇದ್ದು, ದೂರ ದೂರದಲ್ಲಿ ದೃಷ್ಟಿಗೆ ಅಗೋಚರವಾಗಿ ಇದ್ದುಕೊಂಡು, ಈ ಜಗತ್ತಿನ ಮೇಲೆ

ಯಾವುದೇ ರೀತಿಯ ಹಕ್ಕೂ ಇಲ್ಲದ ರೀತಿಯಲ್ಲಿ ನೆಲೆಸಿದ್ದಾಳೆ. ಆದರೆ ಯಾವಾಗಲೂ ತನ್ನದೇ ಸ್ವಯಂಪ್ರಕಾಶದಲ್ಲಿಯೇ ಸ್ಥಿತಗೊಂಡಿರುತ್ತಾಳೆ.

ಈ ಪಂಚ ಭೂತಗಳು ಬ್ರಹ್ಮಾಂಡದ ವ್ಯಾಕರಣದ ಸೂತ್ರ, ಇದರಲ್ಲೇನೂ ಸಂಶಯವಿಲ್ಲ. ಅವು ವೈಶ್ವಿಕ ಅಕ್ಷರಗಳೂ ಹೌದು. ಇದನ್ನೆಲ್ಲ ಅರಿತುಕೊಳ್ಳಬೇಕೆಂದರೆ, ಊರ್ಧ್ವಾತಿ ಊರ್ಧ್ವದ ಯಾನ ಅವಶ್ಯವಾಗಿದೆ. ಈ ಪಂಚ ಭೂತಗಳು ವಿಶ್ವಾತ್ಮಕವಾಗಿದ್ದರೂ, ಭೂಮಿಗೆ ಅವತರಣಗೊಂಡು ಆಗಮಿಸುತ್ತವೆ, ಏಕೆ? ಆದರೆ ಇಲ್ಲಿಗೆ ಬಂದ ಮೇಲೆ ಆಕಾರ ತಳೆದುಕೊಳ್ಳುತ್ತವೆ ಎಂದರೆ, ಅವಕಾಶದಲ್ಲಿ ಅವುಗಳ ಸ್ವರೂಪ ಯಾವ ರೀತಿ ಇರಬಹುದು? ಅಲ್ಲಿ 'ಏಕ'ವಾಗಿವೆಯೇ? ಅಲ್ಲಿಂದ ವಿಘಟನೆಗೊಳ್ಳುತ್ತಾ ವಿಘಟನೆಗೊಳ್ಳುತ್ತಾ ನಿಯತಿಯ ಗತಿಯಲ್ಲಿ ಸಾಗುತ್ತಿವೆ. ಆಯಾ ಸ್ಥಾನದಲ್ಲಿ, ತಮಗೆ ಒದಗುವ ಆಕಾರವನ್ನು ಪಡೆದುಕೊಂಡು ಜೀವ–ವಿಕಾಸಕ್ಕೆ ಕಾರಣವಾಗಿವೆ. ವಿಶ್ವದಲ್ಲಿ ಏಕವಾಗಿದ್ದ ವಾಯು, ದೇಹಕ್ಕೆ ಪ್ರವೇಶಿಸುತ್ತಲೇ ಪ್ರಾಣಾಪಾನ–ವ್ಯಾನೋದಾನ–ಸಮಾನ ಎಂದು ರೂಪಾಂತರಣಗೊಳ್ಳುತ್ತಿದೆ. ಅಂದರೆ ಹೃದಯಲ್ಲಿ ಚೇತನ ಸ್ವರೂಪದಲ್ಲಿ ಸ್ಥಿತಗೊಂಡ ಅಗ್ನಿ ತತ್ತ್ವವು, ಉಳಿದಂತೆ ಭೂಮಿ, ಜಲ ಮತ್ತು ತನ್ನ ಮೂಲ ನೆಲೆಯಾಗಿರುವ ಆಕಾಶದಲ್ಲಿಯೂ ನಿಯತಿಗೊಂಡಿದೆ. ಇದೆಲ್ಲವನ್ನು ಈ ಗುರುತ್ವದ ಬಲೆಯಲ್ಲಿ ಸಿಲುಕಿಕೊಂಡು ಇರುವ ಬದುಕು ಕಾಣಲು ಸಾಧ್ಯವಿಲ್ಲವಾಗಿದೆಯೇ? ಊರ್ಧ್ವಮುಖೀ ಗಮನದಲ್ಲಿ, ಈ ಗುರುತ್ವವನ್ನು ಮೀರುವದು ಹೇಗೆ ಎಂದೇ ಯೋಗದ ಪ್ರಾರಂಭದ ಪಥವಿದೆ. ಸಶರೀರವಾಗಿಯೇ ಆ ರಹಸ್ಯವನ್ನು ಕರಗತ ಮಾಡಿಕೊಳ್ಳಲು ಸಾಧ್ಯವಿಲ್ಲವೇ ಎಂದು ಆಧುನಿಕ ವಿಜ್ಞಾನ ಪ್ರಶ್ನೆ ಕೇಳುತ್ತಿದೆ. ಯೋಗ ಶಾಸ್ತ್ರದಲ್ಲೇನೋ ಅಣಿಮಾದಿ ಅಷ್ಟಸಿದ್ಧಿಗಳನ್ನು ರೂಪಿಸಿದೆ. ವೈಜ್ಞಾನಿಕ ಆವಿಷ್ಕಾರಗಳ ಮೂಲಕ ಈ ಗುರುತ್ವವನ್ನು ಮೀರಿ ಸಾಗಬಹುದಾದ ದಿನಗಳು ಸಮೀಪಿಸುತ್ತಿವೆ.

ನಮ್ಮ ಭೌತಿಕದ ಅಕ್ಷಿಗಳು ಕಾಣಲು ಸಾಧ್ಯವಿಲ್ಲದ ದೂರದ ಸಂಗತಿಗಳನ್ನು, ಇದೀಗ ಇಲ್ಲಿಯೇ ಲಭ್ಯವಿರುವ ಪೀನ ಮತ್ತು ನಿಮ್ನ ಗಾಜಿನ ಸೂಕ್ತ ಹೊಂದಾಣಿಕೆಯ ದೂರದರ್ಶಕದ ಮೂಲಕ ಕಾಣುವದು ಈಗಾಗಲೇ ಸಾಧ್ಯವಾಗಿದೆ. ಅಂದರೆ ನಮ್ಮ ಮೃಣ್ಮಯದ ಚಕ್ಷು ಅಥವಾ ನಮ್ಮ ಮನಸ್ಸು ಆರೋಹಣಕ್ಕೆ ಇನ್ನೂ ಸಮರ್ಥವಾಗಿಲ್ಲ ಎಂದಾಯಿತು. ಆದರೆ, ಈಗಾಗಲೇ ಇಲ್ಲಿಗೆ ವ್ಯಾಹೃತಿಗಳ ಮೂಲಕ ತೇಜತ್ವವನ್ನು ಅಥವಾ ಪುರುಷ ತತ್ತ್ವವನ್ನು ಹಾಗೂ ಬೀಜಮಂತ್ರಗಳ ಮೂಲಕ ಶಕ್ತಿ ತತ್ತ್ವದ ಅವತರಣಗಳ ಮೂಲಕ ವಿಕಾಸಗೊಂಡು ಸಾಗುತ್ತಿರುವ

ಜಗತ್ತು–ಜ್ಞಾನ–ಸಾಹಿತ್ಯ–ಪರಂಪರೆಯನ್ನು ಗುರುತಿಸುವಲ್ಲಿ ನಾವೀಗಾಗಲೇ ಸಮರ್ಥರಾಗಿದ್ದೇವೆ. ಮುಖ್ಯವಾಗಿ ಇವೆಲ್ಲವೂ "ಆ ಊರ್ಧ್ವದಿಂದ ಅವತರಣಗೊಂಡು" ಆಗಮಿಸಿವೆ. ಇದೀಗ ಆರೋಹಣದ ಹೆಜ್ಜೆ ಪ್ರಾರಂಭವಾಗಬೇಕಿದೆ.

ನಾನೀಗ ಸಾಧನೆಗೆ ಆಯ್ಕೆ ಮಾಡಿಕೊಂಡಿರುವದು 'ಮಹಾಕಾಳೀ' ಸ್ವರೂಪವನ್ನು. ಅದನ್ನು ಈ ವ್ಯಾಹೃತಿಗಳ ಮೂಲಕವೇ ಅನುಭಾವಿಸಬೇಕಿದೆ. ಆಗಮೋಕ್ತವೂ ಸಹಿತ ಇದರ ಬಗೆಗೆ ವಿಧಾಯಕ ವಿಷಯಗಳಲ್ಲಿಯೇ ಅಧ್ಯಯನ ಪಥ ರೂಪಿಸಿದೆ. ಇಲ್ಲಿಯವರೆಗೂ ವಿಕಾಸದ ಹಂತದಲ್ಲಿ ಲಭ್ಯಗೊಳಿಸಿಕೊಂಡಿರುವ ಶಕ್ತಿ ಎಲ್ಲವೂ ಅವರೋಹಣದಲ್ಲಿ ಬಂದ ಪುರುಷ ಸ್ವರೂಪದಲ್ಲಿಯೇ ಇದೆ. ಆದರೆ ಇದೀಗ ಅಧಿರೋಹಣದ ಅವಧಿಯ ಉಷಾ ಕಾಲ. ಈ ಅಧಿರೋಹಣದಲ್ಲಿ ಶಕ್ತಿಯು ಮತ್ತೆ ತನ್ನ ಮೂಲ ಸ್ವರೂಪದ ಸ್ತ್ರೀತ್ವವನ್ನೇ ಪಡೆದುಕೊಳ್ಳುತ್ತಾಳೆ. ಎಲ್ಲಿವರೆಗೂ ಸೃಷ್ಟಿ ಮತ್ತು ಪ್ರಳಯಗಳ ಆವರ್ತನ ಇರುತ್ತದೆಯೋ ಅಲ್ಲಿಯವರೆಗೂ 'ಮಹಾಕಾಳೀ' ಸ್ವರೂಪವು ಇರುತ್ತದೆ. ವ್ಯಾಹೃತಿಗಳಾಗಲೀ ಅಥವಾ ಬೀಜಮಂತ್ರಗಳಾಗಲೀ ಇವು ಮೂಲ ವಿಷಯದ ಸೂತ್ರವಾಗಿ ಆದಿಮ ಸ್ವರೂಪದ ಸಂಕೇತವಾಗುತ್ತವೆ.

'ಬಾಲಾ ತ್ರಿಪುರ ಸುಂದರೀ' ಎನ್ನುವ ಮೂರು ಅಕ್ಷರಗಳ ಮಂತ್ರವೂ ಇದೆ. ಇದನ್ನು ಶ್ರೀವಿದ್ಯಾ ಎಂದೂ ಕರೆಯುತ್ತಾರೆ. ಪೂರ್ವ ಭಾರತದಲ್ಲಿ ಒಂಬತ್ತು ಅಕ್ಷರಗಳ 'ನವಾಕ್ಷರೀ' ವಿಧಾನವಿದೆ. ಕಳಿಂಗ ದೇಶವೂ ಇದನ್ನು ಆರಾಧಿಸುತ್ತಿದೆ. ಬಂಗಾಲ, (ಪ್ರಾಗ್ಜ್ಯೋತಿಷ್ಯ ಪುರ) ಆಸಾಮದಲ್ಲೀ ಇದೇ ಪ್ರಚಲಿತವಿದೆ. ಆಯಾ ಭಾಗದ ವಾತಾವರಣವನ್ನು ಆಧಾರಿಸಿಕೊಂಡು ಹದಿಮೂರು ಅಕ್ಷರಗಳನ್ನು ಆಧಾರಿಸಿದ 'ಪರಾಷೋಡಶೀ', ಹದಿನೈದು ಅಕ್ಷರದ 'ಶ್ರೀವಿದ್ಯಾ', ಹದಿನಾರು ಅಕ್ಷರದ 'ಷೋಡಶಾಕ್ಷರೀ' ಮತ್ತೆ ಇಪ್ಪತ್ತೆಂಟು ಅಕ್ಷರಗಳ 'ಮಹಾಷೋಡಶೀ' ಎಲ್ಲ ಅನುಷ್ಠಾನದಲ್ಲಿವೆ. ಆದರೆ ನಾನು ಇದೀಗ ನವಾಕ್ಷರೀ ವಿಧಾನದಲ್ಲಿಯೇ ಪ್ರಥಮ ಹೆಜ್ಜೆ ಇಡುತ್ತಿದ್ದೇನೆ.

ಪ್ರಾಕೃತಿಕವಾಗಿರುವ ಧಾತುವೊಂದು ಆಧಾರವಾಗಿ ಶಬ್ದವಾಗುವ ವಿಧಾನವು ಹೇಗೆ ಮನುಷ್ಯನ ಮಾನಸಿಕ ಹಂತದಲ್ಲಿ ಆಯಾಮಗಳನ್ನು ರೂಪಿಸುತ್ತಿದೆ, ತನ್ನ ಅಸ್ತಿತ್ವಕ್ಕೆ ಕೊಂಚವೂ ವಿಚಲನೆ ಆಗದ ಹಾಗೆ, ಮನಸ್ಸನ್ನು ಪ್ರಜ್ಞಾ ಹಂತಕ್ಕೆ ಏರಿಸಿ, ಚಿತ್–ಸ್ವರೂಪವನ್ನು ದರ್ಶಿಸಲು ಮಾರ್ಗದರ್ಶನ ಮಾಡುತ್ತಿದೆ, ಎಲ್ಲವೂ ಪ್ರಶ್ನೆಗಳೇ.

ಆದರೆ ಈ 'ತ್ರಾಟಕ ಸೂರ್ಯ'ದ ದರ್ಶನ ಮಾತ್ರ ಈ ರಹಸ್ಯದ ಹೆಬ್ಬಾಗಿಲು ತೆರೆಯುತ್ತದೆ. ಬೀಜಮಂತ್ರಗಳಾಗಲೀ ಅಥವಾ ವ್ಯಾಹೃತಿಗಳೇ ಆಗಲಿ ಅಸ್ತಿತ್ವ ಪಡೆದಿರುವ ಹಂತದಲ್ಲಿ ಭಾಷಾ ಸ್ವರೂಪದಲ್ಲಿ ಧ್ವನಿಯಾಗಿದ್ದರೂ, ನಾದದೊಡನೇ ಸ್ಪಂದನವನ್ನು ಹೇಗೆ ಇರಿಸಿಕೊಂಡೇ ಇರುತ್ತದೆ. ಇವೆಲ್ಲಕ್ಕೂ ಪರಿಹಾರವನ್ನು ಕಾಣಬೇಕೆಂದರೆ, ಒಂದು ನವ ನವೀನ ಮಾರ್ಗವನ್ನು ಅರಸಲೇಬೇಕಾಗಿದೆ. ಈಗ ಪ್ರಚಲಿತದಲ್ಲಿರುವ ಸಂಸ್ಕೃತಕ್ಕೂ ಮೂಲದಲ್ಲಿ 'ದೇವ ಭಾಷೆ' ಎನ್ನುವದು ಒಂದು ಇತ್ತೇ? ಅದು ಈ ಎಲ್ಲ ಪೂರ್ಣತೆಯ ಆಯಾಮಗಳನ್ನು ಹೊಂದಿತ್ತೇ? ಇಲ್ಲಿ ಏನನ್ನೇ ಅನುಭವಿಸಿಕೊಂಡು ಅಭಿವ್ಯಕ್ತಿಸಿದರೂ, ಅಲ್ಲಿ ವಾದಗಳ ಉದ್ಭವವಂತೂ ಇದ್ದೇ ಇರುತ್ತದೆ. ತಕರಾರುಗಳ ಸಂಭಾವ್ಯತೆಗಳೇ ಅಧಿಕವಾಗುತ್ತವೆ. ಇವೆಲ್ಲವನ್ನೂ ತಾತ್ಕಾಲಿಕವಾಗಿ ದೂರವಿಟ್ಟುಕೊಂಡು, ಸಂಪೂರ್ಣ ಏಕಾಂತದ ಮೌನದಲ್ಲಿಯೇ ಅನುಸಂಧಾನಿಸಬೇಕಿದೆ. ಇದನ್ನೇ ವಾಸುದೇವ ನನಗೆ ಅಲೀಪುರದ ಉಳಿಯ ಪೆಟ್ಟಿನ ಮೂಲಕ ಶಿಲ್ಪಗೊಳಿಸಿದನೇ? ದೇವರೆಂದರೆ ಯಾರು? ಏನು? "ದೇವರಾದರೂ ಸಹಿತ, ಇಲ್ಲಿ ಕೇವಲ ಚಿಂತನವನ್ನು ಮಾತ್ರವೇ ಮಾಡಿಕೊಂಡಿರಲು, ಎಲ್ಲವನ್ನೂ ತತ್ತ್ವಜ್ಞಾನದಲ್ಲಿ ಹುದುಗಿಸಿ ಇಡಲು, ಪೌರಾಣಿಕ ಕಲ್ಪನೆಗಳ ಮೂಲಕ ವ್ಯವಸ್ಥೆಯನ್ನು ರೂಪಿಸಲು, ಕೇವಲ ಶಾಬ್ದಿಕ ಜಾಲದಲ್ಲಿ, ತರ್ಕ–ಜಿಜ್ಞಾಸೆಯಲ್ಲಿ ಆಟವಾಡಲೆಂದು ನನ್ನನ್ನು ಸೃಷ್ಟಿಸಿಲ್ಲ. ಆದರೆ ನೇರವಾಗಿ ಪ್ರೇಮ, ಜ್ಞಾನದೊಡನೆ ಕ್ರಿಯಾ ಪ್ರವೃತ್ತನಾಗಲೆಂದು ಸೃಷ್ಟಿಸಿದ್ದಾನೆ. ಹೀಗಾಗಿ ಈ ದಿವ್ಯತ್ವದ ಹಿನ್ನೆಲೆಯಲ್ಲಿಯೇ ನಾನು ಕ್ರಿಯಾ ಪ್ರವೃತ್ತನಾಗಬೇಕಿದೆ. ಇದರಿಂದ ನಾನೂ ಸಹಿತ ಆ ದಿವ್ಯ ಸತ್ತೆ ಹಾಗೂ ಅದರ ಆತ್ಮಾಭಿವ್ಯಕ್ತಿಯಲ್ಲಿಯೇ ದಿವ್ಯವಾಗಿ ಬಿಡುವೆ; ನಾನು ಖಂಡಿತವಾಗಿಯೂ ದೇವರನ್ನು ಕೇವಲ ದೇವರೆಂದು ಮಾತ್ರವೇ ಪ್ರೀತಿಸುವದಕ್ಕಿಂತ, ಇಡೀ ವಿಶ್ವದ ಜೀವಿಗಳಲ್ಲಿ, ದೃಶ್ಯಗಳಲ್ಲಿ, ಅಧಿಕರಣಗಳಲ್ಲಿ, ಸುಭೋಗಗಳಲ್ಲಿ, ಘಟನಾವಳಿಗಳಲ್ಲಿ – ಇವುಗಳನ್ನು ಇತರರು ಒಳ್ಳೆಯವೆಂದೋ ಅಥವಾ ಕೆಟ್ಟ ಸಂಗತಿಗಳೆಂದು ಪರಿಗಣಿಸಿದರೂ ಸಹಿತ ಮತ್ತು ಅವು ನೈಜವಾಗಿಯೂ ಅಸ್ತಿತ್ವದಲ್ಲಿವೆಯೇ ಅಥವಾ ಕಾಲ್ಪನಿಕವಾಗಿವೆಯೇ, ಅದೃಷ್ಟ ರೂಪದಲ್ಲಿವೆಯೇ ಅಥವಾ ವಿಪತ್ಕಾರಕವಾಗಿವೆಯೋ ಎಂದೆಲ್ಲಾ ಏನೇ ಅಭಿಪ್ರಾಯವಿದ್ದರೂ ಸಹಿತ – ಇವೆಲ್ಲವುಗಳ ಜೊತೆಗೇ ನಾನು ಕಡ್ಡಾಯವಾಗಿ ದೇವರನ್ನು ಅರ್ಥೈಸಿಕೊಳ್ಳಬೇಕಾಗಿದೆ. ಆ ಸಂದರ್ಭದಲ್ಲಿ ಈ ದೇವರು ಸರ್ವ ಸಮತಾಭಾವದ ದಿವ್ಯತ್ವದ ಮತ್ತು ಸುವ್ಯವಸ್ಥೆಯ ಪರಿಪಕ್ವತೆಯ ಹಿನ್ನೆಲೆಯಲ್ಲಿಯೇ ಇದ್ದು, ಆಗ ಪರಿಪೂರ್ಣ, ಪರಿಶುದ್ಧ ಮತ್ತು ಅಗಾಧ ಅನಂತತೆಯಲ್ಲಿಯೇ ನಾನೂ ಸಹಿತ ದೇವನೂ

ಮೆಚ್ಚುವಂತಹ ಮತ್ತು ಒಂದಿಲ್ಲೊಂದು ದಿನ ಈ ಎಲ್ಲ ಮನುಕುಲವೂ ದೇವರೇ ಆಗಿಬಿಡುವಂತೆಯೇ ಪ್ರೇಮಿಸುತ್ತ ಕಾರ್ಯಪ್ರವೃತ್ತನಾಗಬೇಕಿದೆ.

ಆರೋಹಣದ ಪ್ರಪ್ರಥಮ ಹೆಜ್ಜೆಯಲ್ಲಿದ್ದೇನೆ. ಇಲ್ಲಿ ಸ್ವರೂಪಗೊಳ್ಳುವ ಲೋಕಗಳು, ಆಯಾ ಹಂತದಲ್ಲಿ ಇರಬಹುದಾದ ತಮದ ಪ್ರಭಾವವನ್ನು ಮತ್ತು ಅಡೆತಡೆಗಳನ್ನು ಮೀರಿ ಚಲಿಸಬೇಕಿದೆ. ಆ ಭೂಮಾತಿಭೂಮವಾಗಿರುವ ಅವಕಾಶದಲ್ಲಿ, ಬೇರೆ ಯಾರೂ ಇರುವದಿಲ್ಲ, ಏಕಾಕಿಯಾಗಿಯೇ ಸಾಗಬೇಕಿದೆ, ಇವೆಲ್ಲ ಸವಾಲುಗಳನ್ನು ಎದುರಿಸಲು ಅವಶ್ಯವಿರುವ ಮನೋಸಾಮರ್ಥ್ಯ, ಆತ್ಮವಿಶ್ವಾಸ ಹಾಗೂ ಇದೆಲ್ಲವೂ ಹೃದಯಪೂರ್ವಕವಾಗಿಯೇ ಸ್ಪಂದಗೊಳ್ಳಬೇಕಿದೆ. ಇದಕ್ಕೆ ಬೇಕಾದದ್ದು ಜ್ಞಾನ ಯೋಗ. ಈ ಜ್ಞಾನ ಯೋಗವನ್ನು ಬದುಕಿನಲ್ಲಿ ಸಹಜವಾಗಿಯೇ ಅನುಷ್ಠಾನಗೊಳಿಸಲೇಬೇಕಾದ ಕರ್ಮ ಯೋಗದ ಮೂಲಕವೇ ಪಡೆದುಕೊಳ್ಳಬೇಕಿದೆ. ವಿಶ್ವಾಸಪೂರ್ಣವಾದ ಕರ್ಮ ಯೋಗದ ಹೆಜ್ಜೆಗಳು ಇಲ್ಲಿ ಮಾರ್ಗದರ್ಶಿಯಾಗುತ್ತವೆ. ಇದಕ್ಕೆ ಭಕ್ತಿ ಯೋಗದ ತನ್ಮಯತೆಯೂ ರಕ್ಷಾ ಕವಚವನ್ನು ಒದಗಿಸುತ್ತದೆ.

ಆದರೆ ಇವೆಲ್ಲವನ್ನೂ ಸದ್ಯ ನಮಗಿರುವ ಮೃಣ್ಮಯದ ಶರೀರದ ಸೀಮಿತ ವ್ಯವಸ್ಥೆಯಲ್ಲಿ ಪಡೆಯುವದು – ಅದೂ ಈಗಿರುವ ದೈಹಿಕ ವ್ಯವಸ್ಥೆಯಲ್ಲಿಯೇ ಪಡೆಯುವದು ಅಸಾಧ್ಯದ ಮಾತಾಗಿದೆ. ಈ ವ್ಯವಸ್ಥೆಯಲ್ಲಿ ಊಹಾತೀತ ಸಾಮರ್ಥ್ಯ ಹೊಂದಿರುವ ಮನಸ್ಸು ಒಂದಿದೆ. ಅದರ ಮೂಲಕವೇ ನಾವು ಆರೋಹಣದಲ್ಲಿ ಯಾನವನ್ನು ಕೈಕೊಳ್ಳಬೇಕಿದೆ. ಎಲ್ಲ ಆಯಾಮಗಳನ್ನೂ ದರ್ಶನಗೊಳ್ಳಲು ಸಾಧ್ಯವಿದೆ. ಇಲ್ಲಿರುವ ಅನ್ನ–ಪ್ರಾಣ–ಮನೋಮಯ ಹಂತದಲ್ಲಿ ಈ ಅನುಭವವು 'ವೈಖರೀ ಮತ್ತು ಮಧ್ಯಮಾ' ಹಂತದಲ್ಲಿ ಸ್ಪಂದಗೊಳ್ಳುತ್ತ ಇರುತ್ತದೆ. ಅನ್ನ–ಪ್ರಾಣ–ಮನ–ವಿಜ್ಞಾನ–ಆನಂದ–ಚಿತ್ ಮತ್ತು ಸತ್ ಈ ಏಳೂ ಹಂತಗಳಲ್ಲಿ, ಮಂತ್ರವೂ ಸಹಿತ ವೈಖರೀ–ಮಧ್ಯಮಾ–ಪಶ್ಯಂತೀ–ಪರಾ–ಸಂವಿತ್–ಸೂಕ್ಷ್ಮ–ಶೂನ್ಯ ಎನ್ನುವ ಏಳು ಹಂತದಲ್ಲಿಯೇ ಇದೆ. ಇದು ನಿಯತಿಯೂ ಆಗಿದೆ. ಇದನ್ನೇ ಮಾನವ ಕುಲವು ಶಬ್ದ–ಧ್ವನಿ–ನಿನಾದ–ಸುನಾದ–ನಾದ–ವಾಕ್–ವಾಣಿ ಎಂದು ಏಳು ಹಂತಗಳಲ್ಲಿ ಅನುಷ್ಠಾನಗೊಳಿಸಿಕೊಂಡಿದೆ.

ಲೌಕಿಕ ಬದುಕಿನ ಮೂಲ ಏಕೆ ಈ ರೀತಿಯ ವ್ಯವಸ್ಥೆಯಿಂದ ದೂರ ಉಳಿಯಿತು ಎನ್ನುವ ಪ್ರಶ್ನೆ ಉದ್ಭವಸಿತು. ಅಧ್ಯಾತ್ಮದ ಅಥವಾ ಈ ರೀತಿಯ ಜ್ಞಾನ

ಮಾರ್ಗದ ಅನ್ವೇಷಣೆಗೆ ಸದ್ಯದ ಮಾನವನ ಸ್ವರೂಪ ಸೂಕ್ತವಾಗಿಲ್ಲವೇ? ಅಥವಾ ಆ ಅನುಭವಗಳನ್ನು ಸ್ವೀಕರಿಸಿ ಅನುಷ್ಠಾನಿಸಲು ಬೇಕಾದ ವ್ಯವಸ್ಥೆಯು ದೈವದತ್ತವಾಗಿ ಕೊಡಲ್ಪಟ್ಟಿದ್ದರೂ, ಅದರ ಸಂವೇದನೆ ಇಲ್ಲದೇ ಬದುಕು ನಡೆದಿದೆಯೇ? ಏನೆಲ್ಲಾ ಪ್ರಶ್ನೆಗಳು... ಅಲೀಪುರ ಸೆರೆಮನೆಯಲ್ಲಿ ಆದ ವಾಸುದೇವನ ದರ್ಶನವನ್ನು ನಾನಿನ್ನೂ ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಸಾಧನೆ ಮಾಡಬೇಕಾಗಿದೆ. ಅದರ ಮೂಲ ಪಾಠವನ್ನು ಆಶೀರ್ವದಿಸುವ ಸಲುವಾಗಿ ಕಾಳೀ ಮಾತೆಯೇ ನನ್ನನ್ನು ಇಲ್ಲಿಗೆ ಬರುವಂತೆ ಮಾಡಿದಳೇ..? ದೈವೀ ಸಾಕ್ಷಾತ್ಕಾರ ಎಂದರೆ, ನಮ್ಮ ಅಂತರಂಗ ಪ್ರಕೃತಿದತ್ತವಾಗಿಯೇ ಹೊಂದಿರುವ ಅಪಾರ ಪ್ರಮಾಣದ ಸಾಮರ್ಥ್ಯವನ್ನು ದೃಷ್ಟಿಸುವ ಹಂತವಾಗಿದೆ ಎಂದು ಈ ಮರ್ನಾಲ್ಕು ದಿನದ ಯೋಗ ಸಾಧನೆ ತೋರಿಸಿದೆ. ಅಪರಾರ್ಧದ ಹಂತದವರೆಗಿನ ಸದ್ಯದ ಮಾನವನ ಶರೀರ ವ್ಯವಸ್ಥೆಯಲ್ಲಿ ಈ ರೀತಿಯ ಅಲೌಕಿಕ ಸಾಧ್ಯತೆಗಳು ಕಡಿಮೆ ಎನ್ನುವದನ್ನು ಒಪ್ಪಿಕೊಂಡೇ ಎಲ್ಲರೂ ಸಾಧನಾ ಪಥದಲ್ಲಿ ಮುಂದೆ ಸಾಗಿದ್ದಾರೆ. ಈಗಿರುವ ಪ್ರಜ್ಞಾವಂತ ಮನದ ವಿಕಸನವು ಪರಿಶುದ್ಧತೆಯ ಪಾರಮ್ಯವನ್ನೂ ಹೊಂದಿದೆ. ಈ ಹಂತದಲ್ಲಿಯೇ ಅಲ್ಲವೇ ವೇದದ ಋಕ್ಕುಗಳು ಗೋಚರಿಸಿವೆ.

ಸ್ಟೀಮರ್ ಪ್ರಯಾಣದಲ್ಲಿಯೇ ಮತ್ತೆ ಬರಿಸಾಲ ಕಡೆಗೆ ಹೋಗಬೇಕಾಗಿದೆ. ಯಾವ ಉದ್ದೇಶಕ್ಕಾಗಿ ಈ ರೀತಿಯ ಪರ್ಯಟನೆ, ನನ್ನೊಳಗಿನ ನನ್ನನ್ನು ಅರಿತುಕೊಳ್ಳಲೋ ಅಥವಾ ಭವಾನೀ ಭಾರತಿಯ ಹೃದಯಾಭಿಲಾಶೆಯ ಸ್ವಾತಂತ್ರ್ಯದ ಮತ್ತು ಸ್ವರಾಜ್ಯದ ಸ್ಥಾಪನೆಯ ಸಲುವಾಗಿ ಈ ಯಾನವೋ ಎಂದು ದಾರಿಯುದ್ದಕ್ಕೂ ಯೋಚನೆ ತುಂಬಿಕೊಂಡಿತ್ತು.

ಇಂದು ಶುಕ್ರವಾರ. ಮತ್ತೆ ಬರಿಸಾಲ ಕಡೆಗೆ ಪ್ರಯಾಣ ಮಾಡಬೇಕಿದೆ. ಅದೇ ಸ್ಟೀಮರ್‌ದಲ್ಲಿಯೇ ಸಾಗಬೇಕು. ನದಿಯ ಅಲೆಯಗುಂಟ ಸಾಗುತ್ತಿರುವದು ನಮ್ಮ ಜೀವನದ ಪ್ರತಿಬಿಂಬವೋ ಎನಿಸಿತು. ಅಲೆಯ ಮೇಲೆ ನಿಧಾನವಾಗಿ, ಹುಟ್ಟು ಹಾಕುತ್ತಾ, ಅಲೆಯಲೆಯ ತರಂಗಗಳಿಂದ ಉದಿಸುವ ತಾಳಬದ್ಧ ಸಂಗತಿದೊಡನೆ, ತೊಟ್ಟಿಲಿನ ತೂಗುವಿಕೆಯಂತೆಯೇ ಸಾಗುತ್ತಿದ್ದ ಜೀವನ ಇದೀಗ, ನೆಲದೊಡಲನ್ನು ಬಗೆದು ತೆಗೆದ ರಸದಿಂದ, ಸದಾ ಹೊಗೆಯುಕ್ಕಿಸುತ್ತ, ಕರ್ಕಶದ ಶಬ್ದದ ಅಪ್ಪಳಿಕೆಯಲ್ಲಿ ಸಾಗಬೇಕಾದ ಇದನ್ನು ಪ್ರಗತಿ ಎನ್ನಬೇಕೋ ಅಥವಾ ವಿಚಲನೆಗೊಳ್ಳುತ್ತಿರುವ ವಿಕಾಸವೆನ್ನಬೇಕೋ... ಎಲ್ಲ ಯೋಚನೆಗಳ ಮಧ್ಯೆಯೇ ಬರಿಸಾಲ ತಲುಪಿದೆ. ನನ್ನ ಧ್ಯಾನದ ಮುಂದಿನ ಹಂತದಲ್ಲಿ ಸಾಗಬೇಕಿದೆ. ತ್ರಾಟಕ ಸೂರ್ಯ ನನ್ನ ಗಮ್ಯ.

ಭ್ರೂಮಧ್ಯದಲ್ಲಿರುವ ಜ್ಞಾನ ನೇತ್ರವನ್ನು ಸ್ವಯಂದರ್ಶನಗೊಳ್ಳುವದೇ ತ್ರಾಟಕ ಸೂರ್ಯನ ಹಂತವೆನ್ನುವದು ಗೋಚರವಾಗುತ್ತಿದೆ. ಅದೋ ಅಲ್ಲಿಯೇ ಸೂಕ್ಷ್ಮ– ರೂಪದಲ್ಲಿ ಅಂಡಾಕಾರದ ಸ್ವರೂಪದಲ್ಲಿ ಸೂರ್ಯನ ನೀಲ ವರ್ಣದ ಕಾಂತಿ ಗೋಚರಿಸುತ್ತಿದೆ. ಅದರ ಹಿಂದುಗಡೆಗೆ ತಿಳಿಹಳದಿ ವರ್ಣದ ಆವರಣದಲ್ಲಿ ರಕ್ತ ವರ್ಣದ ಬಾಗುರೇಖೆಗಳು. ನೀಲಲೋಹಿತ ಖಡ್ಗವೊಂದಿದೆ. ಅದೂ ಸಹಿತ ರಕ್ತರಂಜಿತ ವರ್ಣದಲ್ಲಿದೆ. ಇಲ್ಲಿಯೇ ಚಿತ್ತದ ಹಂತದಿಂದಲೇ ಮಸ್ತಿಷ್ಕದಲ್ಲಿ ಧ್ವನಿಯೊಂದು ಉದಿಸಿದೆ. ಕಾಮಾನಂದವು ತಂತಾನೆ ತಾನು ಪ್ರಗತಿಯಲ್ಲಿದೆ, ಜೊತೆಗಿದೋ ಹೌದು ಜೊತೆಗಿದೋ ಕ್ಷಣಾರ್ಧವೊಂದರಲ್ಲಿ ಅದೊಂದು ಚಿಂತನವಾಗಿ ರೂಪ ಪಡೆದುಕೊಂಡಿತು. ಆದರೆ ಅದು ಮೆದುಳಿನಲ್ಲಿ ಮಾತ್ರ. ಉಳಿದಂತೆಲ್ಲ ಇಡೀ ದೇಹವನ್ನು ವ್ಯಾಪಿಸಿದಂತಾದರೂ, ಅವೆಲ್ಲವೂ ಕೇವಲ ಅಂತಿಮದ ಕೆಲವೇ ಕೆಲವು ಕ್ಷಣಗಳಲಿ ಮಾತ್ರ.

ದೈನಂದಿನ ಪದ್ಧತಿಯಂತೆಯೇ ಜ್ಯೋತಿಯನ್ನು ಬೆಳಗಿಸಿ, ನಿಗದಿತ ದೂರದಲ್ಲಿ ಇಟ್ಟುಕೊಂಡು ಧ್ಯಾನಕ್ಕೆ ತೊಡಗಿದೆ. ಪ್ರಯಾಣದುದ್ದಕ್ಕೂ ಉಕ್ಕುಕ್ಕಿ ಬರುತ್ತಿದ್ದ ತೆರೆಗಳ ಜೊತೆಯಲ್ಲಿಯೇ ಕುಣಿಯುತ್ತಿದ್ದ ವಿಚಾರಗಳು ಒಂದೊಂದಾಗಿ ತಹಬಂದಿಗೆ ಬರತೊಡಗಿದವು. ಮನಸ್ಸಿನ ಹಂತದಿಂದ ಮೇಲೇರಿ, ಚಿತ್ತದ ದ್ವಾರವನ್ನು ತಲುಪುತ್ತಿರುವಂತೆಯೇ ತೆರೆಗಳು ನಿಧಾನವಾಗಿ ನಿಧಾನವಾಗಿ ಮಾಯವಾಗತೊಡಗಿದವು. ನದಿಯ ಮೇಲ್ಭಾಗವೂ ತೆರೆಗಳಿಲ್ಲದ ಸ್ಥಿತಿಯನ್ನು ತಲುಪಿ, ಆಕಾಶವನ್ನೂ ಜೊತೆಗೆ ಸುತ್ತಲೂ ಇದ್ದ ಪ್ರಕೃತಿಯನ್ನು ಪ್ರತಿಬಿಂಬ–ಗೊಳಿಸತೊಡಗಿತು. ಪ್ರತಿಬಿಂಬವೂ ಸಹಿತ ಸ್ಫುಟವಾಗುತ್ತಿದ್ದಂತೆಯೇ, ದೇವರೆಂದರೆ ಯಾರು? ಎನ್ನುವ ಪ್ರಶ್ನೆಗೆ ಉತ್ತರದ ಸ್ವರೂಪದ ವಾತಾವರಣ ಕಾಣತೊಡಗಿತು. ವಿದ್ಯುತ್–ಮಾನವನ ಎದೆ ಭಾಗ ಮಾತ್ರ ಕಾಣುತ್ತಿದೆ. ಚಂದ್ರನು ಈ ವಿದ್ಯುತ್ತನ್ನು ಭರಣಗೊಳಿಸುತ್ತಿದ್ದಾನೆ. ಅಲ್ಲಿರುವ ದೇಹ ಒಮ್ಮೆ ಕಂಡು ಸಂಚಲನಗೊಳುವಂತೆ ಭಾಸವಾಗುತ್ತಿದೆ. ಅಲ್ಲಿ ಅದೆಲ್ಲವೂ ಸದಾ ಸ್ಥಿತವಿದ್ದರೂ, ಸದಾ ಕಾಲವೂ ಗಮನಕ್ಕೆ ಸಿಗುತ್ತಿಲ್ಲ. ಅದೇ ವಿದ್ಯುನ್ಮಂಡಲವಾಗಿದೆ. ಮಿಂಚು ಕಾಂತಿಯಲ್ಲಿ ಸ್ಫುಲಿಂಗಗಳು ಅಲ್ಲಿವೆ – ಇವೇ ವಿಜಸ್. ಕೆಂಪು ವರ್ಣದ ಹಿನ್ನೆಲೆ, ಅದು ರಕ್ತ ವರ್ಣವೋ ಅಥವಾ ಪಿಂಗಳದ ಅಂಶದ ಕೆಂಪು ಎನಿಸುತ್ತಿದೆ. ವಿಶಾಲವಾದ ಸ್ವರ್ಣ ವರ್ಣದ ಆವರಣದೊಳಗೆ ಸೂರ್ಯನು ಕಂದುಗೊಳ್ಳುತ್ತಿದ್ದಾನೆ. ಸ್ವರ್ಣಮಿಶ್ರಿತ ಕೆಂಪು ವರ್ಣದ ಚಂದ್ರಹಾಸ(ಬಾಗು ಖಡ್ಗ)ವೊಂದು ಸತ್ವ ಮತ್ತು ರಜಸ್ ಪ್ರತೀಕವಾಗಿ

ಕಾಣುತ್ತಿದೆ. ವಾಸುದೇವನ ಸಾಕ್ಷಾತ್ಕಾರ! ಅಗ್ನಿಯ, ಜಲದ, ಪೃಥ್ವಿಯ ವಿಜಸ್(ಸ್ಫುಲಿಂಗಗಳು) ಬಾಹ್ಯದಲ್ಲಿ ಅವಿರತವಾಗಿ ಗೋಚರಿಸುತ್ತಲಿವೆ. ಜೊತೆ ಜೊತೆಗೆ ಛಾಯಾಪುರುಷನ ಎದ ೆಭಾಗ ಸಹಿತ ಅಲ್ಲಿ ಕಾಣುತ್ತಿದೆ. ಸ್ವರೂಪವೂ ಸಹಿತ ಕೆಂಪು ವರ್ಣದಲ್ಲಿದೆ. ಯು.ಆರ್. ಕಾಮಾನಂದದ ಜೊತೆಯಲ್ಲಿ ಕಾರ್ಯಪ್ರವೃತ್ತವಾಗಿದೆ. ಪೃಥ್ವಿಯ ಸುದೀರ್ಘವಾದ ತಂತು, ಮಿಂಚು ಕಾಂತಿಯಲ್ಲಿ ಕುಂಡಲಿಯ ಆಕಾರದಲ್ಲಿ ವಾಯು ಮಂಡಲದಲ್ಲಿದೆ. ಉಜ್ವಲದ ಉದಿತವಲ್ಲಿದೆ. ಕಾಳಿಯ ನೀಲಮೇಘ ವರ್ಣದ ಮೇಲ್ಭಾಗ ಸೂರ್ಯನಿಂದ ಮುಕುಟಧಾರಿಯಾಗಿದೆ. ಇದೇ ಶಕ್ತಿಯು ಬುದ್ಧಿಯನ್ನು ಜಾಗ್ರತಿಗೊಳಿಸದೆ–ಆದರೆ ಅದು ಉಗ್ರವಲ್ಲ, ಅತಿ ಸರಳವಾದ ಆವರಣವಾಗಿದೆ. ಇವೆಲ್ಲವೂ ಸವಿಕಲ್ಪ, ಸವಿಚಾರ ಮತ್ತು ಅವಿಚಾರ ಸಮಾಧಿಯ ಹಂತವಾಗಿವೆ, ಅತ್ಯಂತ ಸಂಕ್ಷಿಪ್ತವಾಗಿದ್ದಂತೆ ಕಂಡುಬಂದರೂ ಕರ್ಣಗಳಿಗೆ ಮಾತ್ರ ಕೇವಲ ಅಬ್ಬರದ ಜೋರು ಶಬ್ದವಾಗಿರದೇ ಅತ್ಯಂತ ಗಂಭೀರವಾಗಿದೆ. ಆ ತೇಜಪೂರ್ಣತೆಯ ಶೀತ ವಾಯುವಿದ್ದರೂ ಶೀತವೆನಿತೂ ಇಲ್ಲ. ಶೀತದ ಸಂವೇದನೆಯೂ ಇಲ್ಲದ ಸಮರ್ಥಪೂರ್ಣ ತೇಜವದು. ಅಪ್ಯಾಯಮಾನವಾದ ಆಹ್ಲಾದಮಯದಿಂದ ಕೂಡಿರುವ ಸುಖೋಷ್ಣತೆಯ ಅನುಭೂತಿ, ಅಲ್ಲಿರುವದೆಲ್ಲ ಕೇವಲ ಅಲ್ಲಿಯೇ ಸಾಂದ್ರಗೊಂಡಿರುವ ಪೇಲವದ ಹಸಿರು ವರ್ಣ. ಇದೇ ಸರೂಪ ಧ್ಯಾನ, ಆದರೆ ಅಂತರ್ದರ್ಶಿಯಾಗಿದೆ. ಅಲ್ಲಿ ಜಗತ್ತಿನ ಒಡೆಯನ(ಶಾ ಅಲಮ್) ಮುಖ ಕಾಣುತ್ತಿದೆ, ಕುಮುದಿನಿಯ ವದನವೂ ಕಾಣುತ್ತಿದೆ, ಭಾವದಲ್ಲಿ ಕಾಮಾನಂದವು ಹುದುಗಿದಂತೆ ತೋರುತ್ತಿದ್ದರೂ – ಕೊಂಚ ಗಾಬರಿಗೊಳ್ಳುವಂತಿದ್ದರೂ – ವ್ಯಾಪಕವಿದ್ದಂತೆ ತೋರುತ್ತಿತ್ತು. ಅಲ್ಲಿದ್ದ ಹತ್ತಿಯ ಹಾಸಿಗೆಯ ಮೇಲೆ ಇಡಲಾಗಿದ್ದ ದ್ರಾಕ್ಷಿ ತುಂಬಿರುವ ಬುಟ್ಟಿ ಕಾಣುತ್ತಿತ್ತು.

ಎಷ್ಟು ಸಮಯ ಈ ತಲ್ಲೀನತೆಯಲ್ಲಿ ಇದ್ದೇನೋ ಅರಿಯೆ. ಎಚ್ಚರಾದಾಗ ಮತ್ತೆ ಮನಸ್ಸಿನಲ್ಲಿ ಚಿಂತನವು ಪ್ರಾರಂಭಗೊಂಡಿತು, ಈ ಎಲ್ಲ ಸಂಕೇತಗಳು ನನ್ನನ್ನು ಯಾವ ಯಾನಕ್ಕೆ ತೊಡಗಿಸಲು ನಿಯತಿಗೊಂಡಿವೆ? ಇವುಗಳು ಬಿಡಿಬಿಡಿಯಾಗಿ ಕಂಡರೂ ಅಂತರಂಗದಲ್ಲಿ ಸೂತ್ರಬದ್ಧತೆಯಲ್ಲಿಯೇ ಪೋಣಿಸಲ್ಪಟ್ಟಿವೆ. ನಿಯತಿಯ ಯಾವ ಸೂತ್ರದ ಕುರಿತು ನಾನು ಪಾತ್ರ ವಹಿಸಬೇಕಾಗಿದೆ? ಪರಿವರ್ತನೆಯ ಪ್ರಕೃತಿ ಸಹಜ ಕ್ರಿಯೆಗಳೆಲ್ಲವೂ ದೈವ ನಿರ್ಮಿತವಾಗಿ, ಸೂತ್ರಬಂಧಿತವಾಗಿ ಇದ್ದಲ್ಲಿ, ಮಾನವನ ಪಾತ್ರವಾದರೂ ಏನು? ತನಗೆ ಒದಗಿ ಬಂದ ಪಾತ್ರವನ್ನು ಆ

ಸೂತ್ರಧಾರ ಯೋಜಿಸಿದ ರೀತಿಯಲ್ಲಿ ಅನುಷ್ಠಾನಗೊಳಿಸುವಲ್ಲಿ ಮಾತ್ರ ಸೀಮಿತವೇ? ಏಕೆ ಈ ಪ್ರಕೃತಿ ಹೀಗೆ ಗುಹ್ಯವಾಗಿ ಇರಲು ಅಪೇಕ್ಷಿಸುತ್ತಿದೆ? ಮಾನವನ ದುರಾಸೆಯ ಕುರಿತು ಎಚ್ಚರಿಕೆಯ ವಿಧಾನವೇ ಇದು? ಏನೆಲ್ಲಾ ಪ್ರಶ್ನೆಗಳು ಉದಿಸತೊಡಗಿದವು. ಆ ಗೂಢವನ್ನೇ ನಾವು ದೇವರು ಎಂದುಕೊಳ್ಳುತ್ತಿದ್ದೇವೆಯೇ? ಹಾಗಾದರೆ ದೇವರೆಂದರೆ ಯಾರು? ಏನು? ಆ ದೇವರಾದರೂ ಸಹಿತ, ಇಲ್ಲಿ ಕೇವಲ ಚಿಂತನವನ್ನು ಮಾತ್ರವೇ ಮಾಡಿಕೊಂಡಿರಲು, ಎಲ್ಲವನ್ನೂ ತತ್ತ್ವ ಜ್ಞಾನದಲ್ಲಿ ಹುದುಗಿಸಿ ಇಡಲು, ಪೌರಾಣಿಕ ಕಲ್ಪನೆಗಳ ಮೂಲಕ ವ್ಯವಸ್ಥೆಯನ್ನು ರೂಪಿಸಲು, ಕೇವಲ ಶಾಬ್ದಿಕ ಜಾಲದಲ್ಲಿ, ತರ್ಕ–ಜಿಜ್ಞಾಸೆಯಲ್ಲಿ ಆಟವಾಡಲೆಂದು ನನ್ನನ್ನು ಸೃಷ್ಟಿಸಿಲ್ಲ. ಆದರೆ ನೇರವಾಗಿ ಪ್ರೇಮ, ತಿಳುವಳಿಕೆ(ಜ್ಞಾನದೊಡನೆ)ಯೊಡನೆ ಕ್ರಿಯಾ ಪ್ರವೃತ್ತನಾಗಲೆಂದು ಸೃಷ್ಟಿಸಿದ್ದಾನೆ ಎನ್ನುವದು ನನಗೀಗ ದೃಷ್ಟಾಂತವಾಗುತ್ತಿದೆ.

ಅದಕ್ಕಾಗಿಯೇ ಇವೆಲ್ಲ ಅನುಭವಗಳ ಮೆಟ್ಟಿಲುಗಳನ್ನು ಹತ್ತಲೇಬೇಕಾಗಿದೆ. ಆದರೆ ಮುಖ್ಯವಾಗಿ, ಈ ದಿವ್ಯತ್ವದ ಹಿನ್ನೆಲೆಯಲ್ಲಿಯೇ ನಾನು ಕ್ರಿಯಾ ಪ್ರವೃತ್ತನಾಗಬೇಕಿದೆ. ಇದರಿಂದ ನಾನೂ ಸಹಿತ ಆ ದಿವ್ಯ ಸತ್ತೆ ಹಾಗೂ ಅದರ ಆತ್ಮಾಭಿವ್ಯಕ್ತಿಯಲ್ಲಿಯೇ ದಿವ್ಯವಾಗಿ ಬಿಡುವೆ; ನಾನು ಖಂಡಿತವಾಗಿಯೂ ದೇವರನ್ನು ಕೇವಲ ದೇವರೆಂದು ಮಾತ್ರವೇ ಪ್ರೀತಿಸುವದಕ್ಕಿಂತ, ಇಡೀ ವಿಶ್ವದ ಜೀವಿಗಳಲ್ಲಿ, ದೃಶ್ಯಗಳಲ್ಲಿ, ಅಧಿಕರಣಗಳಲ್ಲಿ, ಸುಭೋಗಗಳಲ್ಲಿ, ಘಟನಾವಳಿಗಳಲ್ಲಿ – ಇವುಗಳನ್ನು ಇತರರು ಒಳ್ಳೆಯವೆಂದೋ ಅಥವಾ ಕೆಟ್ಟ ಸಂಗತಿಗಳೆಂದು ಪರಿಗಣಿಸಿದರೂ ಸಹಿತ ಮತ್ತು ಅವು ನೈಜವಾಗಿಯೂ ಅಸ್ತಿತ್ವದಲ್ಲಿವೆಯೇ ಅಥವಾ ಕಾಲ್ಪನಿಕವಾಗಿವೆಯೇ, ಅದೃಷ್ಟ ರೂಪದಲ್ಲಿವೆಯೇ ಅಥವಾ ವಿಪತ್ಕಾರಕವಾಗಿವೆಯೋ ಎಂದೆಲ್ಲಾ ಏನೇ ಅಭಿಪ್ರಾಯವಿದ್ದರೂ ಸಹಿತ – ಇವೆಲ್ಲವುಗಳ ಜೊತೆಗೇ ನಾನು ಕಡ್ಡಾಯವಾಗಿ ದೇವರನ್ನು ಅರ್ಥೈಸಿಕೊಳ್ಳಬೇಕಾಗಿದೆ. ಆ ಸಂದರ್ಭದಲ್ಲಿ ಈ ದೇವರು ಸರ್ವ ಸಮತಾಭಾವದ ದಿವ್ಯತ್ವದ ಮತ್ತು ಸುವ್ಯವಸ್ಥೆಯ ಪರಿಪಕ್ವತೆಯ ಹಿನ್ನೆಲೆಯಲ್ಲಿಯೇ ಇದ್ದು, ಆಗ ಪರಿಪೂರ್ಣ, ಪರಿಶುದ್ಧ ಮತ್ತು ಅಗಾಧ ಅನಂತತೆಯಲ್ಲಿಯೇ ನಾನೂ ಸಹಿತ ದೇವನನ್ನು ಮೆಚ್ಚುವಂತಹ ಮತ್ತು ಒಂದಿಲ್ಲೊಂದು ದಿನ ಈ ಎಲ್ಲ ಮನುಕುಲವೂ ದೇವರೇ ಆಗಿಬಿಡುವಂತೆಯೇ ಪ್ರೇಮಿಸುತ್ತ ಕಾರ್ಯಪ್ರವೃತ್ತನಾಗಬೇಕಿದೆ. ಇದೇ ತ್ರಾಟಕ ಸೂರ್ಯದ ಮುಕ್ತಾಫಲವೂ ಹೌದು.

(ಸಶೇಷ)

# ಚಿನ್ಮಯದ ಅಗ್ನಿಜ್ವಾಲೆ

ಚಿನ್ಮಯದ ಅಗ್ನಿಜ್ವಾಲೆಯದು ಇಂತು ಆಗಮಿಸಿತಿಲ್ಲಿ ಒಳಗೆ
ಈಗಿದೋ ದಹಿಸಿ ತಮದ–ಹೃದಯವನು, ಪರಿಪೂರ್ಣಗೊಳಿಸಿ ಬೆಳಗೆ;
ಧೂಸರದ ಛಾಯೆಯಾವರಿತ ಮನದ ನಿರ್ವಾತತತ್ತ್ವವೀಗ
ಸ್ವಪ್ನವನು ತಾನು ರೂಪಿಸುವ ಕ್ರಿಯೆಯಲೀಗಿದವು ಆದಿಯಾಗಿ;

ಅಚೇತನದ ಆತ್ಮಚೇತನವು ತಾ ಚೈತನ್ಯ ಪ್ರಗತಿಯೊಳಗೆ
ತಮವಿದೋ ಹೀಗೆ ಅನುಭೂತಿ ಮತ್ತೆ ಚಿಂತನದಿ ಪೂರ್ಣ ಜೊತೆಗೆ.
ಇಲ್ಲಿಹುದು ದೇವಗಣಗಳಾ ಉಷೆಯ ಪ್ರತ್ಯೂಷ–ತೋಷ ಘೋಷ;
ಪಾರಲೌಕಿಕದ ಸರಣಿ– ಸರಣಿಗಳು ಕರಣವನು ಬೆಳಗಿ ತೇಲಿ

ಸುಪ್ತಿಯೊಳಗೀಗ ಉದಿತಗೊಂಡಿರುವ ಅವುಗಳಾ ರೂಪಗಳಲಿ
ಪರಮನಾ ದೀರ್ಘ ದೀರ್ಘಾತಿ–ತಮದ ರಾತ್ರಿಗಳು ಕರಗುತಿಲ್ಲಿ
ಈಗಿದೋ ಮತ್ತೆ ನ್ಯಾಯಸಂಗತದಿ ಅವು ಉಷೆಯ ಬೆಳಗಿನಲ್ಲಿ.
ಸಹನಗೊಂಡೀಗ ಭಾವದಾವೇಗವೊಂದೀಗ ತಾನು ಇಲ್ಲಿ
ಮತ್ತಿದೋ ಜೊತೆಗೆ ನವ–ಜನ್ಮವೀಗ ವೈಭವದಿ ಸ್ಪಂದದಲ್ಲಿ

ವರ್ಣ–ವರ್ಣಗಳ–ರೆಕ್ಕೆಯಲಿ ಕಾಣ್ಕೆ ಕಾಣ್ಕೆಗಳು ಸಾಲುಗೊಂಡು
ಕಣ್ಣೆವೆಗಳೀಚೆ ಅಲೆ–ಅಲೆಯಲೀಗ ಅಲೆದಾಟದೊಳಗೆ ಸಂದು,
ಸ್ವರ್ಗೀಯ–ನಾದ ಪತಣದಲಿ ರಾಯಭಾರಿಗಳು ನಿನದಲಿಂದು
ನಿಮೀಲಿತಗೊಂಡ ಅವಕಾಶದಕ್ಷಿಗಳನೀಗ ಜಾಗೃತಿಗೆ ತಂದು,

ಸ್ವಪ್ನದಲಿ ಮಗ್ನರಾಗಿದ್ದ ದೇವಕುಲವೀಗ ಅವಲೋಕಗೊಂಡು
ದೃಷ್ಟದಾ ಆಚೆ ಆಚೆಯಾ ನೆಲೆಯ ತದುತ್ತರದಾಚೆ ಕಂಡು
ಅವರ ಚಿಂತನದ ಶ್ರೇಣಿಗಳಲೀಗ ಭೂಷಣವಗೊಳಿಸಿಕೊಂಡು
ಆ ದಿವ್ಯ ಭವ್ಯ ಚಿಲ್ಲೋಕಗಳನು ಚಿನ್ಮೂಲ ಸ್ಪಂದದಿಂದು

ಪರಿಮಾಣವಿರದ ಆ ಒಂದು ಕ್ಷಣದಿ, ಅಭಿಲಾಶೆ ತಾನು ಹೀಗೆ
ಉದ್ಭೂತಗೊಂಡು ಅಂಕುರಿಸಿತೀಗ ವಿಕಸನಕೆ ಮಾರ್ಗವಾಗೆ,
ತಳವಿರದ ಆಳ ಅತಳದಾ ಕೆಲವು ಹೃದಯದಲಿ ಒಮ್ಮೆ ಅದನು
ಅದು ಹೀಗೆ ಅಲ್ಲಿ ತಳವೂರಲೆಂದು ನೆಲೆಗೊಳಿಸೆ ಸಲಿಸಿ ಇದನು.

**ಸಾವಿತ್ರಿ; ದಳ 10 ರೇಣು 1 ಪುಟ 601–02**

# "ಪರಾ ವೃಕ್ಷೇಷು ಸಂಜಾತಾ.."

**– ಅನು: ಪುಟ್ಟು ಕುಲಕರ್ಣಿ**

**ಶೂನ್ಯ–ಸೂಕ್ಷ್ಮ–ಸಂವಿತ್ ಹಂತದಾ ಊರ್ಧ್ವ ತಾಣದಲ್ಲಿ**
**ತನ್ಮಗ್ನದೈಕ್ಯ ಸ್ಥಿತಿಯಲ್ಲಿ ಚಕ್ಷು ಜಾಗ್ರತದಿ ಉದಿತವಲ್ಲಿ**

**(ಸಾವಿತ್ರಿ: ದಳ 1 ರೇಣು 3 ಪುಟ 39)**

ಮಂತ್ರದ ಕುರಿತು ಶ್ರೀ ಅರವಿಂದರು ರೂಪಿಸಿದ ವಿವರಗಳನ್ನು ಸಮಗ್ರೀಕರಿಸಿ ಶ್ರೀ ಎಂ.ಪಿ. ಪಂಡಿತರು ಅದಕ್ಕೊಂದು ಸೂತ್ರರೂಪದ ಸಂಕ್ಷಿಪ್ತ ಸೂತ್ರಗಳನ್ನು ತಮ್ಮ 'ವೇದದ ಪ್ರತಿಮಾ ತತ್ತ್ವ(ವೇದಿಕ್ ಸಿಂಬಾಲಿಜಮ್)ದಲ್ಲಿ ಕೊಟ್ಟಿದ್ದಾರೆ.

"ಪರಾ ವೃಕ್ಷೇಷು ಸಂಜಾತಾ.." ಎನ್ನುವದನ್ನು ಕೇವಲ ವಾಚ್ಯಾರ್ಥವಾಗಿ ಗಮನಿಸಲು ಬರುವದಿಲ್ಲ. ಧ್ವನಿಯು ರೂಪುಗೊಂಡು ವೈಖರಿಯಾಗುವ ಹಂತದಲ್ಲಿ ಸಾಗುವ ಮಾರ್ಗದಲ್ಲಿ ಇರುವ ಷಟ್–ಚಕ್ರಗಳ ವಿನ್ಯಾಸ, ಹಾಗೂ ಈ ಚಕ್ರಗಳ ಮೂಲಕವೇ ಪ್ರವಹಿಸುವ ಆಯಾ ಹಂತದ ಧ್ವನಿ–ಶಬ್ದ–ಜ್ಞಾನ–ಸರಸ್ವತಿಯ ವಿನ್ಯಾಸ ವೃಕ್ಷ ರೂಪದಲ್ಲಿ ಇರುತ್ತದೆ ಎನ್ನುವದು ಒಂದು ಪ್ರತಿಮಾ ವಿಧಾನ. ಇದು ಪರಾ ಹಂತದಿಂದ ಚಲಿಸುವಾಗ ಸರ್ಪದ ಚಲನೆಯಂತೆ ಇರುತ್ತದೆ ಎನ್ನುವದೂ ಸಿದ್ಧಾಂತ. ಇದನ್ನೇ ಆದಿಶಂಕರರೂ ಸಹಿತ ತಮ್ಮ ಸೌಂದರ್ಯ ಲಹರಿಯಲ್ಲಿ "ಸುತ್ತಿ ಸುಳಿದು ಒಳಗೊಳಗೆ ಬೆಳೆವ ಷಟ್–ಚಕ್ರ ಸರ್ಪದಂತೆ/ಯೋಗ ನಿದ್ರೆಯಲಿ ದೇವಿ ಕುಹರಿಣಿಯು ಚಕ್ರಸೂಕ್ಷ್ಮದಾತ್ಮದಂತೆ" ಎಂದು ದಾಖಲಿಸಿದ್ದಾರೆ. ಇದನ್ನು ಸರ್ಪದ ಧ್ವನಿಯೆಂದು ಗುರುತಿಸಲಾಗುತ್ತದೆ. ಮೂಲಾಧಾರದಿಂದ ಮೇಲ್ಮುಖವಾಗಿ ಚಲಿಸಿ, ಹೃದಯದ ಮೂಲಕ, ಕಂಠದ ಮೂಲಕ ತಲೆ ಬುರುಡೆಯನ್ನು ಅಪ್ಪಳಿಸಿ ಅಲ್ಲಿಂದ ಪ್ರತಿಧ್ವನಿಯಾಗಿ ಮತ್ತೆ ಕಂಠದ ಮೂಲಕವೇ ಪ್ರಕಟಗೊಳ್ಳುವ ಮುನ್ನದ ಸ್ಥಿತಿ ಶಬ್ದವಿದೆ ಇನ್ನೂ ಧ್ವನಿಯಾಗಿಲ್ಲ ಎನ್ನುವ ಹಂತ. ಇದು ಪಶು ಸ್ಥಿತಿ. ಪಶು ಚತುಷ್ಪಾದಿಯೂ ಹೌದು, ಈ ಹಂತದಲ್ಲಿ ಧ್ವನಿಯು ನಾಲ್ಕೂ ಹಂತದ ಸಂಪರ್ಕಕ್ಕೆ ಬಂದಿರುತ್ತದೆ. ಇಲ್ಲಿಂದ ಮುಂದೆ ಪ್ರತಿಧ್ವನಿಯ ಪ್ರಕಟಣೆ ಮಾತ್ರ, ಅದಕ್ಕೆ ಸಹಾಯಕವಾಗಿ ತುಟಿ–ದಂತ ಮುಂತಾದವುಗಳು ಸಿದ್ಧವಾಗಿರುತ್ತವೆ. ಇದು ವೈಖರೀ ಹಂತ.

ಇಲ್ಲಿ ವೈಖರಿಯಾಗಿ ಪ್ರಕಟಗೊಳ್ಳುವ ಮುನ್ನ ಇದು ನಾದಮಯವಾಗಿ ಇಡೀ ಶರೀರವನ್ನು ಆವರಿಸಿಕೊಂಡಿರುತ್ತದೆ. ಈ ಸ್ಥಿತಿ ಮಧ್ಯಮಾ. ಇತ್ತ ಸಂಪೂರ್ಣ

ಧ್ವನಿಯಾಗದ ಅತ್ತ ಪಶ್ಯಂತಿಯಿಂದ ಮುಂದೆ ಬಂದ ಸ್ಥಿತಿಯೇ "ಪಶು ಹಂತದ ಸಂಕೇತ".

ಹೀಗಾಗಿ ಧ್ವನಿಯ(ಶಬ್ದದ) ಏಳೂ ಹಂತಗಳನ್ನು ಕಂಡವನು ಸೃಷ್ಟಾರ. ನಾಲ್ಕು ಹಂತಗಳನ್ನು ಕಂಡವನು ದೃಷ್ಟಾರ.

ವೈಖರೀ ಹಂತವನ್ನು ಅರಿತವನು – ಮನುಷ್ಯ.
ವೈಖರೀ ಮತ್ತು ಮಧ್ಯಮಾ ಹಂತವನ್ನು ಅರಿತವನು – ಬ್ರಾಹ್ಮಣ (ಬ್ರಹ್ಮಜ್ಞಾನಿ).
ವೈಖರೀ, ಮಧ್ಯಮಾ ಮತ್ತು ಪಶ್ಯಂತಿ ಹಂತವನ್ನು ಅರಿತವನು – ಮನೀಷಿ.
ವೈಖರೀ, ಮಧ್ಯಮಾ, ಪಶ್ಯಂತೀ ಮತ್ತು ಪರಾ ಹಂತವನ್ನು ಅರಿತವನು – ದೃಷ್ಟಾರ.

ಮೇಲ್ಕಂಡ ನಾಲ್ಕು ಮತ್ತೆ ಶೂನ್ಯ ಸೂಕ್ಷ್ಮ ಸಂವಿತ್ ಹಂತವನ್ನು ಅರಿತವನು – ಸೃಷ್ಟಾರ.

ಹಾಗಾದರೆ ಈ ಮೂಲದ ಮೂರು ಹಂತಗಳು ದೇಹದಲ್ಲಿ ಎಲ್ಲಿ ನಿರ್ಣಿತವಾಗುತ್ತವೆ ಎನ್ನುವದನ್ನು ನೋಡಿದಾಗ ಸೋಜಿಗದ ಸಂಗತಿಯೊಂದು ಗೋಚರಿಸುತ್ತದೆ. ಮಗುವೊಂದು ಭ್ರೂಣಾವಸ್ಥೆಯಲ್ಲಿದ್ದಾಗ ಅದರ ದೇಹ ರಚನೆಯಲ್ಲಿ ಹೃದಯದ ರಚನೆಯ ಅಂಕುರವಾದ ಮೇಲೆ, ಮೊದಲು ಮೂಡುವದು ಮಿದುಳು ತದನಂತರದಲ್ಲಿ ಕಿವಿ. ಭ್ರೂಣಾವಸ್ಥೆಯಲ್ಲಿಯೇ ಆಲಿಸಲ್ಪಡುವ "ಶಬ್ದ" ಅಥವಾ "ಧ್ವನಿ"ಯ ಮೂಲಕವೇ ಆ ಮಗುವಿನ/ಜನನದ ನಂತರದ ವ್ಯಕ್ತಿಯ ಶ್ರಾವ್ಯ ಶಕ್ತಿ/ಧ್ವನಿಯ ಶಕ್ತಿಯು ನಿರ್ಮಾಣಗೊಳ್ಳುವ ವಿವರಗಳನ್ನು ಪರಾ ಹಂತಕ್ಕಿಂತ ಮೂಲದಲ್ಲಿಯೇ ಹೇಳಲಾಗಿದೆಯೇ ಎನ್ನುವದನ್ನು ಅರಿತುಕೊಳ್ಳಬೇಕಿದೆ.

ಅದರ ಹಿನ್ನೆಲೆಯಲ್ಲಿ, 'ಮಂತ್ರ'ದ ಸಿದ್ಧಾಂತವೆಂದರೆ, "ಇದು ಅತ್ಯಂತ ರಹಸ್ಯಮಯವಾಗಿಯೇ ಅಂತರಾಳದಾಂತರ್ಯದಲ್ಲಿಯೇ ಇರುವ ನಮ್ಮದೇ ಚೈತನ್ಯದಿಂದ ಹೊರಹೊಮ್ಮಿದ್ದು, ಅದು ಮನೋಚೇತನಕ್ಕಿಂತಲೂ ಆಳವಾದ ಚೇತನ ಮೂಲದಿಂದಲೇ ಅಂಕುರಗೊಂಡಿರುತ್ತದೆ. ಮತ್ತೆ ಇದು ಹೃದಯದಲ್ಲಿ ಸಾರೂಪ್ಯಗೊಂಡಿರುತ್ತದೆ. ಹಾಗೆಂದು ಇದು ಬುದ್ಧಿಯ ಮೂಲಕವಾಗಿ ಸಂರಚನೆಗೊಂಡಿರುವದಿಲ್ಲ. ಮನೋಪಾತಳಿಯಲ್ಲಿಯೇ ಇದ್ದರೂ, ಅದು ಮತ್ತೆ ಜಾಗ್ರತಿಗೊಂಡ ಮನೋಚೇತನದ ಮೂಲಕವೇ ರೂಪುಗೊಂಡಿರುತ್ತದೆ; ಕೇಂದ್ರೀಕೃತವಾಗಿರುತ್ತದೆ. ತದನಂತರದಲ್ಲಿ ಅದು ಅಷ್ಟೇ ಮೌನದಲ್ಲಿಯೇ ಅಥವಾ

ಪ್ರಶಾಂತವಾಗಿಯೋ ಅಥವಾ ಶಾಬ್ದಿಕ ಸ್ವರೂಪದಲ್ಲಿಯೋ ಹೊರಹೊಮ್ಮಲ್ಪಡುತ್ತದೆ. ಇಲ್ಲಿ ಘನಶಾಂತ ಮೌನದ ಸ್ತರವು (ಜಗತ್ತು) ಶಬ್ದದಲ್ಲಿ ಹೊರಹೊಮ್ಮುವ ಹಂತಕ್ಕಿಂತಲೂ ತುಂಬ ಸಮರ್ಥಪೂರ್ಣವಾಗಿಯೇ ಶಕ್ತಿಯುತವಾಗಿರುತ್ತದೆ. ಅದರಲ್ಲೂ ಇದು ಸೃಷ್ಟಿಯ ಕ್ರಿಯೆಗಳಿಗಾಗಿ ಅತ್ಯಂತ ಮಹತ್ವದ ಅಂಶವೂ ಆಗಿರುತ್ತದೆ.

ಹಾಗೆಂದು ಕೇವಲ "ಮಂತ್ರವೇ" ನಮ್ಮಲ್ಲಿ ನವೀನ ಪ್ರತ್ಯಕ್ – ವೃತ್ತಗಳ (ವಸ್ತುನಿಷ್ಠ) ಹಂತಗಳನ್ನು ಸೃಷ್ಟಿಸುವದಿಲ್ಲ. ನಮ್ಮ ಭೌತಿಕ ಅಸ್ತಿತ್ವವನ್ನು ಪರಿವರ್ತಗೊಳಿಸುವದಿಲ್ಲ. ನಾವು ಪ್ರಕ್ರಿಯೆಗೆ ಒಳಪಡಿಸದೇ ಇದ್ದಲ್ಲಿ, ನಮ್ಮ ಜ್ಞಾನ ಮತ್ತು ಜ್ಞಾನ ವೃತ್ತಿಗಳನ್ನು ಸಹಿತ ಆವಿಷ್ಕಾರಗೊಳಿಸಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಅನ್ಯರ ಮನೋಭೂಮಿಕೆಗಳಲ್ಲೂ ಪರಿಣಾಮಗಳನ್ನು ರೂಪಿಸಲು ಸಾಧ್ಯವಾಗುವದಿಲ್ಲ. ಆದರೆ ಅವುಗಳನ್ನು ಬಳಸಿಕೊಳ್ಳುವವನು ಕೇವಲ ಸ್ಪಂದನಗಳನ್ನು ಮಾತ್ರವೇ, ಮನೋಸ್ತರದಲ್ಲಿ ಹಾಗೂ ಪ್ರಾಣಿಕ–ವ್ಯವಸ್ಥೆಯಲ್ಲಿ – ಅವುಗಳ ಪರಿಣಾಮದ ಫಲಿತಾಂಶದಂತೆ ರೂಪುಗೊಳಿಸಬಹುದು. ಅದೂ ಕ್ರಿಯೆಗಳಲ್ಲಿ (ಕರ್ಮಗಳಲ್ಲಿ) ಮತ್ತೂ ಭೌತಿಕ ಸ್ತರದಲ್ಲಿ ಈ ಜಡದ (ಮೆಟೀರಿಯಲ್) ಅಥವಾ ಲೌಕಿಕದ ರೂಪಗಳನ್ನು ಮಾತ್ರವೇ ಉತ್ಪತ್ತಿ ಮಾಡಲು ಸಾಧ್ಯವಾಗುತ್ತದೆ.

ಇನ್ನು ಅನುಭಾವ ಅಥವಾ ಅತೀಂದ್ರಿಯದ ಹಂತದಲ್ಲಿ – ಅದರಲ್ಲು ಭಾರತೀಯ ಯೋಗ ಶಾಸ್ತ್ರದಲ್ಲಿ ಮಾತ್ರ ಈಗಲೂ ಆಂಶಿಕವಾಗಿ ಉಳಿದುಕೊಂಡು ಬಂದಿರುವ – ಈ ಅನುಭೂತಿಯ ಹಂತದಲ್ಲಿ, ಈ "ಶಬ್ದ"ವು (ಧ್ವನಿಯು) ಒಂದು "ಶಕ್ತಿ"ಯಾಗಿದೆ. ಅಂದರೆ ಧ್ವನಿಯು ಸೃಷ್ಟಿಸಬಲ್ಲುದು. ಸೃಷ್ಟಿಗೊಂಡಿರುವದೆಲ್ಲವೂ ಅಭಿವ್ಯಕ್ತಿಯೇ ಆಗಿರುತ್ತವೆ. ಅಸ್ತಿತ್ವದಲ್ಲಿ ಇರುವ ಎಲ್ಲವೂ ಈ "ಅನಂತಾನಂತದ ರಹಸ್ಯ ಕೋಶ"ದಲ್ಲಿ ಗುಹ್ಯವಾಗಿದ್ದುದೇ ಆಗಿದೆ. ಅದನ್ನೇ 'ಗುಹಾಹಿತಮ್' ಎಂದು ಹೇಳುತ್ತಾರೆ. ಇದನ್ನು ಕ್ರಿಯಾಪ್ರವೃತ್ತ ಚೇತನದಿಂದ ಮಾತ್ರ ಈಗ ತೋರುತ್ತಿರುವ (ಕಾಣುತ್ತಿರುವ) ರೂಪಗಳಲ್ಲಿ ತರಲು ಸಾಧ್ಯವಾಗುತ್ತದೆ.

ಮತ್ತೆ ಕೆಲವು ವೈದಿಕ ಚಿಂತನಗಳ ಪ್ರಕಾರವಾಗಿ, ಇವೆಲ್ಲ ಜಗತ್ತು (ಲೋಕಗಳು) 'ನಾದ ಶಕ್ತಿ'ಯಿಂದಲೇ ಅಂದರೆ "ಧ್ವನಿ'ಯ ದೇವತೆಯಿಂದಲೇ ಸೃಷ್ಟಿಸಲ್ಪಟ್ಟಿವೆ. ಅದೂ "ಈಥರ್" (ಸಂಸ್ಕೃತದಲ್ಲಿ ಇದಕ್ಕೆ ತಾರಾ ಎಂದು ಹೆಸರಿದೆ) ವಲಯದ ಸ್ಪಂದನದಿಂದಲೇ ಈ ರೂಪಾಂತರಣವು ಪ್ರಾರಂಭಗೊಂಡಿದೆ. ವೇದದಲ್ಲಿಯೂ ಸಹಿತ ರೀತಿಯಲ್ಲಿಯೇ ಅಭಿವ್ಯಕ್ತಗೊಂಡ ಪವಿತ್ರ ಮಂತ್ರಗಳ ಕಾವ್ಯಾತ್ಮಕವಾದ

ಮಾನಕಗಳಿವೆ. ಅವುಗಳನ್ನು ಅನುಷ್ಟುಪ್–ತ್ರಿಷ್ಟುಪ್–ಜಗತೀ–ಗಾಯತ್ರೀ ಎಂದು ಸಂಕೇತಾರ್ಥದಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಈ ನಾದಮಯತೆಯಿಂದಲೇ (ಧ್ವನಿಪೂರ್ಣತೆಯಿಂದಲೇ) ಈ ವೈಶ್ವಿಕ ಚಲನೆಯು ನಿರಂತರವಾಗಿರುವದನ್ನು ಹಾಗೂ ವಸ್ತು–ವಿಷಯಗಳು ಅಚ್ಚೊತ್ತಲ್ಪಡುತ್ತಿರುವದನ್ನು ಸಂಕೇತಿಸಲಾಗಿದೆ.

ಈ ರೀತಿಯ "ಅಭಿವ್ಯಕ್ತಿಯ ವಿಶೇಷತೆಯಿಂದಲೇ" ನಾವು ಸೃಷ್ಟಿಸಬಹುದಾಗಿದೆ. ಅದರಂತೆಯೇ ಮಾನವರು ತಮ್ಮ ಸಲುವಾಗಿಯೇ "ದೇವರನ್ನೂ ಸೃಷ್ಟಿಸಿಕೊಂಡು" – ಅದೂ "ಮಂತ್ರದ" ಮೂಲಕವೇ ಸೃಷ್ಟಿಸಿಕೊಂಡಿದ್ದಾರೆ – ಅದರ ಮೂಲಕವೇ ತಮ್ಮದೇ "ವಾಕ್" (ಧ್ವನಿ/ನಾದ/ಶಬ್ದ) ಮೂಲಕವೇ ಚೈತನ್ಯವನ್ನೂ ಹಾಗು ಅದಕ್ಕೊಂದು ಸ್ವರೂಪವನ್ನು ಸೃಷ್ಟಿಸಿಕೊಂಡಿದ್ದಾರೆ. ಈ ರೀತಿಯಲ್ಲಿ ಸೃಷ್ಟಿಸಿಕೊಂಡಿರುವ "ಧ್ವನಿ"(ನಾದ)ವನ್ನು ಸಹಿತ ತಮ್ಮದೇ ಆದ ಅಂಗವೆಂದು (ಅಂಶವೆಂದು) ಅರಿತು, ಅದು ಕೇವಲ ಅಂತರಂಗಿಕವಾಗಿ ಮಾತ್ರ ಪರಿಣಾಮಕಾರಿಯಾಗಿರುವದಷ್ಟೇ ಅಲ್ಲ, ಲೌಕಿಕ ಬದುಕಿನಲ್ಲಿಯೂ ಅದನ್ನು "ಶಬ್ದ"ದ ರೂಪದಲ್ಲಿ ಅಳವಡಿಸಿಕೊಂಡರು. ಈ ಮೂಲಕ ಅಭಿವ್ಯಕಗೊಂಡಿರುವ ಒಂದು ಅಭಿವಚನದಂತೆಯೇ ಸ್ಥಾಪಿಸಿಕೊಳ್ಳಲಾಗಿದೆ. ಇದರಿಂದಾಗಿ, ಈ ಅಭಿವ್ಯಕ್ತಿಯ ಶಕ್ತಿ(ಸತ್ವ)ವಾಗಿ ಈ "ಧ್ವನಿ"ಯನ್ನು (ನಾದವನ್ನು) 'ವಚಸ್' ಎಂದು ಕರೆಯಲಾಗಿದೆ. ಇದು ಪ್ರತಿಜ್ಞಾನದ ಶಕ್ತಿಯಾಗಿ ಸ್ತೋಮದಂತೆ ಅನುಸರಿಸಿದ್ದೇವೆ.

ಒಟ್ಟಿನಲ್ಲಿ ಯಾವುದೇ ರೀತಿಯಿಂದಲೂ ಸಹಿತ ಅದನ್ನು "ಮನ್ಮಾ" ಅಥವಾ 'ಮಂತ್ರ'ವೆಂದೂ, ಮನೋಪಾತಳಿಯಲ್ಲಿ ಅಭಿವ್ಯಕ್ತಗೊಂಡ ಚಿಂತನವೆಂದೂ ಮತ್ತೂ ಮುಖ್ಯವಾಗಿ 'ಬ್ರಹ್ಮನ್' ಎಂದು ಹೃದಯದಲ್ಲಿ ಅಥವಾ ಆತ್ಮಿಕವಾಗಿ ಆರಾಧಿಸುತ್ತೇವೆ.

ಹೀಗಾಗಿ ಶ್ರೀ ಅರವಿಂದರನ್ನು ಅಧ್ಯಯನ ಮಾಡುವಲ್ಲಿ ಪ್ರಾರಂಭದ ಹಂತದಲ್ಲಿ "ಶಬ್ದವನ್ನು" ಸಗುಣ ಬ್ರಹ್ಮನಿಗೆ ಅನ್ವಯಿಸಿಕೊಂಡು ತದನಂತರದಲ್ಲಿ – ಅಂದರೆ ಅತಿಮಾನವ ಹಂತದಲ್ಲಿ ಪರಮ – ಆತ್ಮ ಅಥವಾ ನಿರ್ಗುಣ ಬ್ರಹ್ಮದಲ್ಲಿ – "ಋತ–ಚೇತನ"ದ ಹಂತದಲ್ಲಿ ಅನ್ವಯಿಸಕೊಳ್ಳಬೇಕಾಗಿದೆ.

# ಶ್ರೀ ಅರವಿಂದರ
# 'ಊರ್ವಶಿ'

– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ

## ಪೀಠಿಕೆ

ಯಾವುದೇ ಒಬ್ಬ ದಾರ್ಶನೀಕನು ತನ್ನ ಸಾಧನೆಯ ಹಂತದಲ್ಲಿಯೇ ದರ್ಶನಗಳ ಫಲವನ್ನು ಪಡೆಯುತ್ತಾನೆ ಎಂಬುದು ಸರ್ವವಿದಿತ. ಆದರೆ, ಆ ದಾರ್ಶನಿಕನು ಜನ್ಮತಃ ಓರ್ವ ವಿಭೂತಿಯಾಗಿರುವದರಿಂದ ಅವನು ಬಾಲ್ಯದಿಂದಲೇ ದರ್ಶನಗಳ ಸಾಮರ್ಥ್ಯವನ್ನು ಪಡೆಯುತ್ತಾ ಸಾಗಿರುತ್ತಾನೆ. ಈ ಸಾಕ್ಷಾತ್ಕಾರವೇ ಅವನನ್ನು ತನ್ನ ನಿರ್ಮಾಯಘನದ ಮೂಲದೆಡೆಗೆ ಸೆಳೆಯುತ್ತಿರುತ್ತದೆ. ಹಾಗಾಗಿ ಯಾವುದೋ ಒಂದು ಅವ್ಯಕ್ತ ಶಕ್ತಿಯ ಸಂಪರ್ಕಕ್ಕೆ ಒಳಗಾಗುವ ಆ ವ್ಯಕ್ತಿಯು ಆ ಚೈತನ್ಯದ ಪರಿಧಿಯೆಡೆಗೆ ಚರಿಸಲೆಂದು ತಾನೇ ಮುಂದಾಗಿ ಸಾಧನೆಯಲ್ಲಿ ತೊಡಗುತ್ತಾನೆ. ಜೊತೆಗೆ ಪ್ರಕೃತಿಯೂ ಸಹ ಅವನ ಪ್ರಜ್ಞಾ ಪಯಣಕ್ಕೆ ಸಹಕಾರಿಯಾಗಿ ಅವನನ್ನು ಅವನ ಸಮಾಧಿ ಸ್ಥಿತಿಗೆ ಕೊಂಡೊಯ್ಯಲು ಪ್ರೇರೇಪಿಸುತ್ತದೆ. ಇಲ್ಲಿ ಸಾಧನೆಯ ಶಿಖರದೆಡೆಗೆ, ಅದರ ಔನ್ನತ್ಯದ ಆಯಾಮದೆಡೆಗೆ ಅಧಿರೋಹಿಸಬಲ್ಲ ದ್ರಷ್ಟಾರನು ಅವತಾರಿ ಅಥವಾ ವಿಭೂತಿಯಾಗಿ ಜನ್ಮ ತಳೆದಿರುತ್ತಾನೆ. ಇಲ್ಲಿ ಅವತಾರಿಯೆಂದರೆ, ಅಮರ್ತ್ಯದ ಸೂಕ್ಷ್ಮ ಸ್ತರವೊಂದರಿಂದ ಉದಿತಗೊಂಡ ದಿವ್ಯ ಚೈತನ್ಯವೊಂದು ಮರ್ತ್ಯದ ಸ್ಥೂಲಪಾತಳಿಯೆಡೆಗೆ ಅವತರಣಗೊಂಡು ಬಂದು ಮನುಷ್ಯ ರೂಪದಲ್ಲಿ ಜನ್ಮ ಪಡೆದಿರುತ್ತದೆ. ಈ ಆತ್ಮದ ಅವರೋಹಣಕ್ಕೆ ಆ ಆತ್ಮವು ಹಿಂದಿನ ಭವಗಳಲ್ಲಿ ಪಡೆದ ಪುಣ್ಯ ಕರ್ಮಗಳ ಬಲವಿರುತ್ತದೆ, ಮೂಲೋಕ ದೇವತೆಗಳ ಒಲವಿರುತ್ತದೆ; ಇನ್ನು ವಿಭೂತಿಯೆಂದರೆ, ಮರ್ತ್ಯದಲ್ಲಿ ಎಲ್ಲರೊಡನೊಂದಾಗಿ ಜನಿಸಿ–ಜೀವಿಸಿದ ವ್ಯಕ್ತಿಯೋರ್ವ ಸಾಧನೆಯ ಪಥದಲ್ಲಿ ತನ್ನ ಸ್ವಂತ ಸಿದ್ಧಿಯ ಮೂಲಕ ಅಧಿಲೋಕಗಳೆಡೆ ಚರಿಸಿ ಆನಂದಮಯದ ಅನುಭೂತಿಯನ್ನು ಪಡೆಯುತ್ತಾನೆ. ಈ ವಿಭೂತಿಯ ಪ್ರಜ್ಞಾ ಪಯಣಕ್ಕೆ ಅವನ ಹಿಂದಿನ ಕರ್ಮಗಳ ಕಥೆಯಾಗಲೀ, ಕಿರು ದೇವತೆಗಳ ಜೊತೆಯಾಗಲೀ ಇರುವದಿಲ್ಲ. ಅಥವಾ ಅದು ಆ ಮರ್ತ್ಯನ ಪ್ರಥಮ ಭವವೂ ಆಗಿರಬಹುದು. ಆದರೆ, ಅವತಾರಿಯ ವಿಷಯದಲ್ಲಿ ಆ ಚೈತನ್ಯವು ಈ ಹಿಂದೆ ವಿಶ್ವದ ಯಾವುದೋ ಒಂದು ಆಯಾಮದಲ್ಲಿ ದಿವ್ಯ ಜೀವನವನ್ನು ಪಡೆದುಕೊಂಡಿರುತ್ತದೆ; ಇದನ್ನು ಇನ್ನೂ ಸರಳವಾಗಿ ಹೇಳಬೇಕಾದರೆ, ಮಾನವತ್ವದಿಂದ ದೈವತ್ವದೆಡೆಗೇರಿ ಆ ದೈವದ ಶಕ್ತಿಯನ್ನು ಕೆಳಗಿಳಿಸಿ ತರುವವನು

ವಿಭೂತಿಯಾದರೆ, ಆ ದಿವ್ಯತೆಯ ಪೂರ್ಣ ಶಕ್ತಿಯನ್ನು ತನ್ನೊಳಗೆ ಧಾರಣೆ ಮಾಡಿಕೊಂಡೇ ಜನಿಸಿ ಬಂದು ಅದನ್ನು ಮರ್ತ್ಯದಲ್ಲಿ ಸ್ಥಾಪಿಸುವವನು ಅವತಾರಿಯಾಗಿರುತ್ತಾನೆ! ಅಲ್ಲದೆ, ಇನ್ನೊಂದು ವಿಧದಲ್ಲಿ ನೋಡುವುದಾದರೆ, ಪ್ರತಿಯೋರ್ವ ಅವತಾರಿಯೂ ವಿಭೂತಿ ತತ್ತ್ವವನ್ನು ಪಡೆದುಕೊಂಡೆ ಬಂದಿರುತ್ತಾನೆ. ಆದರೆ ಪ್ರತಿಯೋರ್ವ ವಿಭೂತಿಯು ಅವತರಣದಿಂದ ಜನಿಸಿ ಬರಬೇಕೆಂಬ ನಿಯಮವಿಲ್ಲ. ಹಾಗಾಗಿಯೇ "ಎಲ್ಲ ಅವತಾರಿಗಳೂ ವಿಭೂತಿಗಳೇ ಹೌದು! ಆದರೆ, ಎಲ್ಲ ವಿಭೂತಿಗಳೂ ಅವತಾರಿಗಳಲ್ಲ!" ಎಂಬ ನುಡಿಯು ಜನಜನಿತವಾಗಿರುವುದು. ಈ ಅವತಾರಿ ಮತ್ತು ವಿಭೂತಿ ತತ್ತ್ವವನ್ನು ಪ್ರತಿಮಾ ಸೂಚಕವಾಗಿ ಆರೋಪಿಸುವದಾದರೆ, ಇಲ್ಲಿ ಪರಶುರಾಮನು ಅವತಾರಿಯಾದರೆ, ವಿಶ್ವಾಮಿತ್ರನು ವಿಭೂತಿಯಾಗಿಹನು. ಏಕೆಂದರೆ, ಆ ಯುಗದ ಚಕ್ರ ಪ್ರವರ್ತನೆಗಾಗಿ ಬ್ರಾಹ್ಮ ಗರ್ಭದಲಿ ಕ್ಷಾತ್ರ ತೇಜವಿರುವ ಪುರುಷನೋರ್ವ ಜನಿಸಿ ಬರಬೇಕೆಂಬುದು ವಿಶ್ವದ ಒತ್ತಾಸೆಯಾಗಿತ್ತು. ಹಾಗಾಗಿಯೇ ಪರಶುರಾಮನ ಜನನವಾಯಿತು. ಆದರೆ, ವಿಧಿ ಲಿಖಿತದಂತೆ ಕ್ಷಾತ್ರ ಗರ್ಭದಲ್ಲಿ ಬ್ರಹ್ಮ ಪಿಂಡವಾಗುತ ಒಗೆ ತಂದ ವಿಶ್ವಾಮಿತ್ರರು ನೃಪನಾಗಿ ಬದುಕಿ, ಕೊನೆಗೊಮ್ಮೆ ತನ್ನ ದೈವದ ನಿಯತಿಯ ಕರೆಗೆ ಓಗೊಟ್ಟು ಬ್ರಹ್ಮರ್ಷಿ ಪದ ಸಂಪದರಾದರು.

ಅದೇ ರೀತಿ ಶ್ರೀ ಅರವಿಂದರೂ ಸಹ 1900 ಸುಮಾರಿಗೆ ಪಾಂಡಿಚೇರಿಗೆ ಬಂದ ನಂತರ ಅವರ ಸಾಧನೆಯಿಂದ ಅವರ ಮುಂದೆ ದರ್ಶನದ ಪಟಲಗಳು ತೆರೆಯುತ್ತಾ ಹೋದವು. ಆದರೆ, ಅವರಿಗೆ ಬಾಲ್ಯದಿಂದಲೂ ಅದಾವುದೋ ಅವ್ಯಕ್ತ ಸನ್ನಿಧಿಯ ಆಕರ್ಷಣೆಯು ಕೈ ಮಾಡಿ ಕರೆಯುತ್ತಿತ್ತು ಎಂಬುದು ಸುಳ್ಳಲ್ಲ. ಅದನ್ನೇ ಅವರು ತನ್ನ 'ತ್ರಾಟಕ ಸೂರ್ಯ'ದಲ್ಲಿ ವಿವರಿಸುತ್ತಾರೆ. ಅವರು ಅಲೀಪುರದ ಜೈಲಿನಲ್ಲಿದ್ದಾಗಲೇ ಕೃಷ್ಣ ಮತ್ತು ಭವಾನಿ ಭಾರತಿಯರ ದರ್ಶನವನ್ನು ಪಡೆದುಕೊಂಡಿದ್ದರು. ಹಾಗೆಯೇ ಅವರಲ್ಲಿ ನಿಧಾನವಾಗಿ ದ್ರಷ್ಟಾರ ಭಾವನೆಯು ಜಾಗೃತರವಾಗುತ್ತಾ ಬಂದಿತ್ತು. ಈ ಹಂತದಲ್ಲಿಯೇ ಅವರಿಂದ ಹಲವಾರು ಆರಂಭಿಕ ಬರಹಗಳು ರಚನೆಯಾದವು. ಆ ಆರಂಭಿಕ ಬರಹಗಳಲ್ಲೇ ಅತಿ ಹೆಚ್ಚು ಚರ್ಚೆಗೆ ಗ್ರಾಸವಾಗಿರುವ ಭಾಗವೆಂದರೆ ಅವರ ಆರಂಭಿಕ ಕಿರು ಕಾವ್ಯಗಳು. ಅವರು ಬರೋಡಾದ ಗಾಯಕ್ವಾಡ ಸಂಸ್ಥಾನದಲ್ಲಿ ಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿಯೇ ಅವರು ಸರಿಸುಮಾರು ತಮ್ಮೆಲ್ಲ ಕಿರು ಕಾವ್ಯಗಳನ್ನು ರಚಿಸಿದರು. ಅದರಲ್ಲೂ ಕೆಲವು ಕಾವ್ಯಗಳನ್ನು ಅವರು ಒಟ್ಟೊಟ್ಟಿಗೆ ಬರೆಯುತ್ತಿದ್ದರು. ಆ ಕಿರು ಕಾವ್ಯಗಳಲ್ಲಿ **ಲವ್ ಆ್ಯಂಡ್ ಡೆತ್, ಉರ್ವಶಿ, ಉಲೂಪಿ,**

**ಚಿತ್ರಾಂಗದಾ, ಋಷಿ, ಅಹಾನಾ, ಈಲಿಯನ್, ನಳ ಚರಿತ್ರೆ, ಬಾಜಿ ಪ್ರಭು** ಮುಂತಾದವು ಅತಿ ಪ್ರಮುಖವಾದವುಗಳು. ಅವುಗಳಲ್ಲಿ **ಲವ್ ಆ್ಯಂಡ್ ಡೆತ್**ನ ನಂತರದ ಅಗ್ರಮಾನ್ಯ ಸ್ಥಾನವನ್ನು ಪಡೆದಿರುವ ಕಾವ್ಯವೇ **ಉರ್ವಶಿ.**

ಶ್ರೀ ಅರವಿಂದರು ಉರ್ವಶಿ–ಪುರೂರವರ ಕಥಾನಕದ ಮೇಲೆ ಒಟ್ಟು ಐದು ರೀತಿಯಾದ ಕೆಲಸಗಳನ್ನು ಮಾಡಿದ್ದಾರೆ. ಆರಂಭದಲ್ಲಿ ಶ್ರೀ ಅರವಿಂದರಿನ್ನೂ ಬರೋಡಾದಲ್ಲಿದ್ದಾಗಲೇ **ಉರ್ವಶಿ** ಎಂಬ ಕಿರು ಕಾವ್ಯವನ್ನು ರಚಿಸಿದರು. ಶ್ರೀ ಅರವಿಂದರೇ ಹೇಳುವಂತೆ ಅವರು ಉರ್ವಶಿ ಕಾವ್ಯವನ್ನು ನಂತರದಲ್ಲೂ ಲವ್ ಆ್ಯಂಡ್ ಡೆತ್‌ಕ್ಕಿಂತ ಪೂರ್ವದಲ್ಲೂ ರಚಿಸಿದ್ದಾರೆ. ಇಲ್ಲಿ Songs to Myrtilla 1898 ರಲ್ಲಿ ಪ್ರಕಟವಾಯಿತು. ಇನ್ನು ಲವ್ ಆ್ಯಂಡ್ ಡೆತ್ 1899 ರಲ್ಲಿ ಪ್ರಕಟವಾಯಿತು. ಹಾಗಾಗಿ ಉರ್ವಶಿ ಕಾವ್ಯವನ್ನು ಸರಿಸುಮಾರು 1898–99 ರ ಮಧ್ಯದಲ್ಲಿ ರಚಿಸಿರಬಹುದು ಎಂದು ಅಂದಾಜಿಸಬಹುದು. ಈ ಕಿರು ಕಾವ್ಯವು ಮೊದಲಬಾರಿಗೆ ಬರೋಡಾದ ವಾಣಿವಿಲಾಸ ಪ್ರೆಸ್‌ನ ಮೂಲಕ ಪ್ರಕಟವಾದ ಒಂದು ಸಣ್ಣ ಪುಸ್ತಕದಲ್ಲಿ ಕಾಣಿಸಿಕೊಂಡಿತು. ಆನಂತರ ಆಗಿನ ಬಾಂಬೆಯ Caxton works ದವರು ಹೊರತಂದ ಶ್ರೀ ಅರವಿಂದರ ಮೊದಲ ಸಮಗ್ರ ಸಾಹಿತ್ಯದ ಆವೃತ್ತಿಯಲ್ಲಿ ಈ ಕಿರು ಕಾವ್ಯವನ್ನು ಪುನರ್‌ಮುದ್ರಣ ಮಾಡಲಾಯಿತು.

ಆನಂತರ 1898–99 ರಲ್ಲಿ ರಚನೆಯಾದ ಉರ್ವಶಿ ಕಿರು ಕಾವ್ಯಕ್ಕೆ ಪೂರಕವೆಂಬಂತೆ, ಅದರ ಆರಂಭಿಕ ಸಾಲುಗಳನ್ನು ಪುನರ್ ಪರಿಷ್ಕರಿಸಲೆಂಬಂತೆ ಶ್ರೀ ಅರವಿಂದರು 1933 ರಲ್ಲಿ 'ಪುರೂರವಸ್' ಎಂಬ ಕಿರು ಕವನವೊಂದನ್ನು ರಚಿಸಿದರು. ಹಾಗೆ ನೋಡಿದರೆ ಶ್ರೀ ಅರವಿಂದರು ಈ ಕವನಕ್ಕೆ ಹೆಸರನ್ನೇ ಇಟ್ಟಿರಲಿಲ್ಲ. 1950 ರಲ್ಲಿ ಅವರು ಮಹಾಸಮಾಧಿಯಾದ ನಂತರ ಅವರ ಬರಹಗಳ ರಾಶಿಯನ್ನು ಕೆದಕುತ್ತಿದ್ದಾಗ ಒಂದು ಚಿಕ್ಕ ನೋಟ್ ಪುಸ್ತಿಕೆಯಲ್ಲಿ ಈ ಕವನವು ಕಂಡುಬಂದಿತು. ಆ ಪುಸ್ತಿಕೆಯಲ್ಲಿ ಇನ್ನೂ ಅನೇಕ ಕಿರು ಕವನಗಳು ಕಂಡುಬಂದವು ಮುಂದೆ ಆ ಎಲ್ಲ ಕವನಗಳನ್ನು 'ಕಿರು ಕವನಗಳು–ಬಿಡಿ ಕವನಗಳು' ಎಂಬ ಸಾಲಿಗೆ ಸೇರಿಸಲಾಯಿತು. ಹಾಗೂ ಈ ಕಿರು ಕವನದ ಪರಿಚಯಾತ್ಮಕವಾಗಿ, **"**ಈ ಬರಹವು ವಿಭಿನ್ನ ಮಾರ್ಗದಿಂದ ರಚನೆಯಾಗುತ್ತಾ ಸಾಗುತ್ತಿರುವಾಗಲೇ ಶ್ರೀ ಅರವಿಂದರು ಕಾರಣಾಂತರಗಳಿಂದ ಈ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿದರು**"** ಎಂಬ ಅಡಿಟಿಪ್ಪಣಿಯನ್ನು ನೀಡಿದರು. ಹಾಗೂ ಹೆಸರಿಡದ ಈ ಕವನಕ್ಕೆ ಆರಂಭದಲ್ಲಿ ಉರ್ವಶಿ ಎಂದು ನಾಮಕರಣ ಮಾಡಿ ಮುದ್ರಿಸಲಾಯಿತು. ಆದರೆ ಆನಂತರಲ್ಲಿ

ಬಂದ ಶ್ರೀ ಅರವಿಂದರ ಸಮಗ್ರ ಸಾಹಿತ್ಯದ ಸಂಪುಟಗಳಲ್ಲಿ ಈ ಕಿರು ಕವನವನ್ನು **ಪುರುರವಸ್** ಎಂದು ಪುನರ್ ನಾಮಕರಣ ಮಾಡಿ 'ಪೂರ್ತಿಗೊಳ್ಳದ ಕವನಗಳು' ಆವೃತ್ತಿಯಲ್ಲಿ ಸೇರಿಸಲಾಯಿತು. ಹಾಗೆ ನೋಡಿದರೆ ಈ ಕವನವು 'ಕಿರು ಕವನಗಳು, ಬಿಡಿ ಕವನಗಳು' ಅಥವಾ 'ಪೂರ್ತಿಗೊಳ್ಳದ ಕವನಗಳ' ಸಾಲಿಗೆ ಸೇರುವುದೇ ಇಲ್ಲ. ಏಕೆಂದರೆ, ಈ ಕವನವನ್ನು ಉರ್ವಶೀ ಕಾವ್ಯದ ಆರಂಭಿಕ ಸಾಲುಗಳಿಗೆ ಪೂರಕವಾಗುವಂತೆ ಬರೆಯಲಾಗಿದ್ದು, ಅದು ತನ್ನ ಕೆಲಸವನ್ನು ಪೂರೈಸಿಯೇ ಅಂತ್ಯವನ್ನು ಕಂಡಿತ್ತು. ಹಾಗಾಗಿ ಈ ಕವನವನ್ನು ಒಂದು ಪೂರ್ಣರೂಪದ ಕವನ ಎಂದು ಹೇಳಬಹುದು. ಹಾಗೂ ಈ ಕವನಕ್ಕೆ **ಉರ್ವಶಿ** ನಾಮದ ಬದಲಿಗೆ **ಪುರೂರವಸ್** ನಾಮವೇ ಸೂಕ್ತವಾಗಿದೆ. ಏಕೆಂದರೆ, ಈ ಕವನದಲ್ಲಿ ಎಲ್ಲಿಯೂ ಉರ್ವಶಿಯು ಕಂಡುಬರುವುದಿಲ್ಲ. ಇದು ಏಕಪಾತ್ರದ ಕವನವಾಗಿದ್ದು, ಕವನದುದ್ದಕ್ಕೂ ಪುರುರವಸ್ಸನೊಬ್ಬನೇ ಕಂಡುಬರುತ್ತಾನೆ. ಈಗಲೂ ಕೆಲವೊಂದು ಹಳೆಯ ಆವೃತ್ತಿಗಳಲ್ಲಿ ಈ ಕವನಕ್ಕೆ **ಉರ್ವಶಿ** ನಾಮವಿರುವದನ್ನು ಗಮನಿಸಬಹುದು. ಹಾಗೂ ಅಧ್ಯಯನದ ಪೂರ್ಣ ದೃಷ್ಟಿಯಿಂದ ನೋಡುವುದಾದರೆ, ನಾವು ಶ್ರೀ ಅರವಿಂದರು 1933 ರಲ್ಲಿ ಬರೆದ ಪುರುರವಸ್ ಕಿರು ಕವನವನ್ನು ಅಭ್ಯಶಿಸಿ ಆನಂತರದಲ್ಲಿ 1898–99ರಲ್ಲಿ ರಚನೆಯಾದ ಉರ್ವಶಿ ಕಿರು ಕಾವ್ಯವನ್ನು ಅಭ್ಯಶಿಸುವುದು ಸೂಕ್ತ. ಇದು ಶ್ರೀ ಅರವಿಂದರ ಧ್ಯೇಯವೂ ಹೌದು. ಪ್ರಸ್ತುತ ಅನುಸ್ಪಂದನದ ಸಮಯದಲ್ಲೂ ಇದೇ ಮಾರ್ಗವನ್ನು ಅನುಸರಿಸಲಾಗಿದೆ.

ಆನಂತರ 1898 ರಿಂದ 1903 ರ ಮಧ್ಯದಲ್ಲಿ ಶ್ರೀ ಅರವಿಂದರು, **ಕಾಳಿದಾಸನ ವಿಕ್ರಮೋರ್ವಶಿಯ** ನಾಟಕದ ಮೇಲೆ ಉರ್ವಶಿ–ಪುರೂರವಸ್ಸನಿಗೆ ಸಂಬಂಧಿಸಿದ ಒಟ್ಟು ಮೂರು ಕೃತಿಗಳನ್ನು ರಚಿಸಿದರು. ಅದರಲ್ಲಿ ಮೊದಲನೆಯದು 1898–99 ರ ಮಧ್ಯೆ ರಚಿಸಿದ ವಿಕ್ರಮೋರ್ವಶೀ: ಪಾತ್ರಗಳು. ಈ ಕೃತಿಯು ವಿಕ್ರಮೋರ್ವಶೀಯ ನಾಟಕದಲ್ಲಿ ಬರುವ ಪಾತ್ರಗಳ ಕುರಿತು ವಿಮರ್ಶಾತ್ಮಕವಾಗಿ ರಚಿಸಲಾದ ಪ್ರಬುದ್ಧ ಬರಹವಾಗಿದೆ; ಆನಂತರ 1898–1902 ರ ಮಧ್ಯದಲ್ಲಿ ಶ್ರೀ ಅರವಿಂದರು ಕಾಳಿದಾಸನ ವಿಕ್ರಮೋರ್ವಶಿಯ ಇಡೀ ನಾಟಕವನ್ನೇ ಆಂಗ್ಲ ಭಾಷೆಗೆ ವಿಕ್ರಮೋರ್ವಶೀ – ದಿ ಹೀರೋ ಮತ್ತು ನಿಂಫ್ ಎಂಬ ಹೆಸರಿನಲ್ಲಿ ಅನುವಾದಿಸಿದರು. ಕೊನೆಗೆ 1900–1903 ರಲ್ಲಿ ವಿಕ್ರಮೋರ್ವಶೀ – ದಿ ಪ್ಲೇ ಎಂಬ ಕಿರು ಲೇಖನವೊಂದನ್ನು ರಚಿಸಿದರು. ಕಾಳಿದಾಸನ ವಿಕ್ರಮೋರ್ವಶಿಯ ನಾಟಕದ ಮೇಲೆ ಶ್ರೀ ಅರವಿಂದರು ಕೈಗೊಂಡ ಕಾರ್ಯವು ಈ ಅನುವಾದದ

ವೇದಿಕೆಯಲ್ಲೇ ಅಪ್ರಮಿತ ಮೈಲಿಗಲ್ಲಾಗಿ ನಿಲ್ಲುತ್ತದೆ. ಶ್ರೀ ಅರವಿಂದರು ಅದನ್ನು ನೇರ ಸಂಸ್ಕೃತದಿಂದಲೇ ಆಂಗ್ಲ ಭಾಷೆಗೆ ಅನುವಾದ ಮಾಡಿರುವದರಿಂದ ಕಾಳಿದಾಸನ ಕಾವ್ಯದ ನೇರ ಅನುಭೂತಿಯನ್ನು ನಾವಿಲ್ಲಿ ಪಡೆಯಬಹುದು. ಹಾಗೂ ಅಧ್ಯಯನದ ದೃಷ್ಟಿಯಿಂದ ನಾವು ಮೊದಲು ವಿಕ್ರಮೋರ್ವಶೀ – ದಿ ಪ್ಲೇ ಎಂಬ ಕಿರು ಲೇಖನವನ್ನು ಓದಿ, ಆನಂತರ ವಿಕ್ರಮೋರ್ವಶೀ – ಪಾತ್ರಗಳು ನ್ನು ಅಭ್ಯಸಿಸಿ, ಕೊನೆಗೆ ಕ್ರಮೋರ್ವಶೀ – ದಿ ಹೀರೋ ಮತ್ತು ನಿಂಫ್ ನಾಟಕದ ಅನುವಾದವನ್ನು ಅಧ್ಯಯನ ಮಾಡಬೇಕಾಗುತ್ತದೆ. ಈ ಸರಣಿಯಲ್ಲಿಯೇ ಅದರ ಪೂರ್ಣರಸದ ಅಸ್ವಾದನೆಯನ್ನು ಅನುಭವಿಸಬಹುದು.

ಇಲ್ಲಿಯವರೆಗೆ ಶ್ರೀ ಅರವಿಂದರು ಉರ್ವಶಿ–ಪುರೂರವಸ್‌ರ ಕಥಾನಕದ ಮೇಲೆ ರಚಿಸಿದ ಕೃತಿಗಳ ಕುರಿತು ಚರ್ಚಿಸಲಾಯಿತು. ಆದರೆ, ಶ್ರೀ ಅರವಿಂದರು ಈ **ಉರ್ವಶಿ–ಪುರೂರವಸ್‌**ರ ಕಥೆಯನ್ನೇ ಕಾವ್ಯ ರಚನೆಯ ವಸ್ತುವಾಗಿ ಏಕೆ ಆಯ್ದುಕೊಂಡರು ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ಶ್ರೀ ಅರವಿಂದರ ಪೂರ್ಣ ಯೋಗದ ಮೂಲತತ್ತ್ವವೆಂದರೆ, “ಮಾನವತ್ವವವು ದೈವತ್ವದೆಡೆಗೇರಬೇಕು, ಆ ದೈವದ ಶಕ್ತಿಯು ಕೆಳಗಿಳಿದು ಬರಬೇಕು” ಎಂಬುದಾಗಿದೆ. ಈ ಧ್ಯೇಯವನ್ನು ಸಹಸ್ರಾರು ಸಂವತ್ಸರಗಳ ಹಿಂದೆಯೇ (ಸುಮಾರು ಕ್ರಿ.ಪೂ. 11240 ಎಂದು ಅಂದಾಜಿಸಲಾಗಿದೆ.) ಕಾರ್ಯರೂಪಕ್ಕೆ ತಂದ ಪುರೂರವಸ್ಸನ ಕಥೆಯು ಶ್ರೀ ಅರವಿಂದರನ್ನು ಅತಿಯಾಗಿ ಕಾಡಿತ್ತು. ಇಲ್ಲಿ ಪುರೂರವಸ್ಸನು ಭೂಮಂಡಲದ ಚಕ್ರವರ್ತಿಯಾದರೆ, ಉರ್ವಶಿಯು ಊರ್ಧ್ವ ಲೋಕದ ಅಪ್ಸರ ಕನ್ಯೆ. ಇವರಿಬ್ಬರ ಮಧ್ಯೆ ಜರುಗಿದ ಪ್ರೇಮ ಪ್ರಕರಣವು ಯುಗ ಪ್ರವರ್ತನೆಗೆ ಮೂಲಕಾರಣವಾಯಿತು. ಸತ್ಯ ಯುಗವು ಕೊನೆಗೊಂಡು ತ್ರೇತಾ ಯುಗವು ಆರಂಭಗೊಳ್ಳುವ ಸಂಧಿ ಕಾಲದಲ್ಲಿ ಸತ್ಯದೊಡನೆ ಅಸತ್ಯವು ಬೆರೆತು; ಋತದೊಡನೆ ಅನೃತವು ಕಲೆತು ನಾಲ್ಕು ಪಾದಗಳ ಮೇಲೆ ನಿಂತಿರುವ ಧರ್ಮವನ್ನು ಮೂರು ಕಾಲಿಗೆ ಪರಿವರ್ತಿಸುವ ಅವಶ್ಯಕತೆಯಿತ್ತು. ಇದು ಪ್ರತಿಯೊಂದು ಯುಗ ಪರಿವರ್ತನೆಯ ಸಂಧಿ ಕಾಲದಲ್ಲಿ ಜರುಗಬೇಕಿರುವ ನಿಯತಿಯಾಗಿದೆ. ಅದರಂತೆಯೇ ಸತ್ಯ ಯುಗದಲ್ಲಿ ಊರ್ಧ್ವ ಲೋಕಗಳಿಂದ ಇಳೆಗಿಳಿದ ದಿವ್ಯ ಪುರುಷರಿಂದ ಔನ್ನತ್ಯದ ನಾಗರೀಕತೆಯೊಂದು ಹುಟ್ಟಿ ಜನ ಮಾನಸದಲ್ಲಿ ಸ್ಥಾಯಿಯಾಗಿತ್ತು. ಆ ಸಂದರ್ಭದಲ್ಲಿ ಭೂಲೋಕವನ್ನಾಳಬೇಕಿರುವ ದಿವ್ಯ ಪುರುಷರ ಆಯ್ಕೆಯ ವಿಷಯಕ್ಕೆ ಬಂದಾಗ ಸಹಜವಾಗಿಯೇ ದೇವ ಜಾತರಲ್ಲಿಯೇ ಅತೀ ಉತ್ಕೃಷ್ಟ ಕುಲವನ್ನು ಮರ್ತ್ಯದೆಡೆ ಕಳಿಸಬೇಕೆಂಬ ಅಭೀಪ್ಸೆಯು ಬಲವಾಗಿತ್ತು. ಹಾಗಾಗಿಯೇ ಸತ್ಯ ಯುಗದ

ಆರಂಭದಲ್ಲಿ ಸೂರ್ಯ ವಂಶವು ಇಳೆಗಿಳಿದು ಬಂದು ಮರ್ತ್ಯವನ್ನು ಉದ್ಧರಿಸುವ ಕಾರ್ಯದಲ್ಲಿ ತೊಡಗಿಗೊಂಡಿತ್ತು. ಆಗ ಧರ್ಮವು ದಿವ್ಯ ಲೋಕದಿಂದಿಳುವಾಗ ಹೇಗಿತ್ತೋ ಹಾಗೆಯೇ ಕಲಂಕರಹಿತವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತ್ತು. ಆದರೆ ಸತ್ಯ ಯುಗವು ಕೊನೆಗೊಳ್ಳುವ ಕಾಲಕ್ಕೆ ಆ ಧರ್ಮದಲ್ಲಿ ಚ್ಯುತಿ ಬರಬೇಕೆಂಬುದು ನಿಯತಿಯ ನಿಯಮವೇ ಆಗಿತ್ತು. ಹೇಗೆ ಶುದ್ಧವಾದ ಹಾಲು ಮೊಸರಾಗಬೇಕಾದರೆ ಅದಕ್ಕೆ ಹುಳಿಯಾದ ಹೆಪ್ಪಿನ ಅವಶ್ಯಕತೆಯಿರುತ್ತದೆಯೋ ಹಾಗೆಯೇ ಸತ್ಯ ಯುಗವು ತ್ರೇತಾ ಯುಗವಾಗಿ ಪರಿವರ್ತನೆಯಾಗುವ ಸಂಧಿ ಕಾಲದಲ್ಲಿ ಧರ್ಮಕ್ಕೆ ಕರ್ಮದೊಡನೆಯ ಸಂಸರ್ಗದ ಅವಶ್ಯಕತೆಯಿತ್ತು. ಹಾಗಾಗಿಯೇ ಸೃಷ್ಟಿಯ ಆರಂಭದಿಂದಲೂ ಪೂರ್ಣಪ್ರಕಾಶದ ಅಧಿಪತಿಯಾಗಿದ್ದ ಚಂದ್ರನಲ್ಲಿ ಪರಾಂಗನಾರತಿಯ ಕರ್ಮಬಂಧವಾಯಿತು. ಬೃಹಸ್ಪತಿಯ ಪತ್ನಿ ತಾರೆಯೊಡನೆ ಸಮಾಗಮ ಗೈದ ಚಂದ್ರನಿಂದ ಬುದ್ಧಿಯ ಅಧಿಪತಿಯಾದ ಬುಧನ ಜನನವಾಯಿತು. ಆದರೆ, ಇಲ್ಲಿ ಚಂದ್ರ–ತಾರೆಯರಿಬ್ಬರೂ ಊರ್ಧ್ವ ಲೋಕದ ನಿವಾಸಿಗಳೇ ಆಗಿದ್ದರಿಂದ ಅವರ ಸಂತಾನವಾದ ಬುಧನೂ ಸಹ ಆ ಔನ್ನತ್ಯವನ್ನು ಬಿಟ್ಟು ಕೆಳಗಿಳಿಯಲು ಸಾಧ್ಯವಾಗಲಿಲ್ಲ. ಮರ್ತ್ಯಕ್ಕಿಳಿಯಬೇಕಾದರೆ ದಿವ್ಯ ಪುರುಷರ ಶರೀರಕ್ಕೆ ಸ್ಥೂಲದ ಆವರಣವನ್ನು ಹೊದಿಸಬೇಕಿತ್ತು. ಇಲ್ಲವೇ ಸ್ಥೂಲದ ಆಯಾಮದಲ್ಲಿರುವ ಸಂಕುಲದೊಡನೆ ನಿಯೋಗಕ್ಕೊಳಗಾಗಬೇಕಿತ್ತು. ಹಾಗಾಗಿ ಬುಧನೂ ಸಹ ಭೂಲೋಕಕ್ಕೆ ಬರಲು ಸಾಧ್ಯವಾಗಲಿಲ್ಲ. ಈ ಭೂಲೋಕದಲ್ಲಿ ಇರುವ ಎಲ್ಲಾ ವಸ್ತುಗಳೂ ಆ ದಿವ್ಯಧಾಮದಿಂದಿಳಿದ ದ್ರವ್ಯಗಳೇ ಆಗಿವೆ. ಒಳಿತು–ಕೆಡುಕು, ಸತ್ಯ–ಸುಳ್ಳು, ಧರ್ಮ–ಅಧರ್ಮ, ನೀತಿ–ಅನೀತಿ... ಇವೆಲ್ಲವುಗಳೂ ಮೇಲಿನಿಂದಲೇ ಇಳಿದಿವೆ. ಹಾಗಾಗಿ ಆ ಸಮಯಕ್ಕೆ ಮರ್ತ್ಯದಲ್ಲಿರುವ ಧರ್ಮಕ್ಕೆ ಚ್ಯುತಿ ತರಬೇಕಿರುವ ಅಂಶವನ್ನೂ ಅಲ್ಲಿಯಿಂದಲೇ ಇಳಿಸಬೇಕಿತ್ತು. ಮುಂದೆ ಸೂರ್ಯ ವಂಶದ ಸುದ್ಯುಮ್ನನೆಂಬ ನೃಪನು ಉಮಾದೇವಿಯ ಶಾಪಕ್ಕೆ ಗುರಿಯಾಗಿ ತನ್ನ ಪುರುಷತ್ವವನ್ನು ಕಳೆದುಕೊಂಡು ಸ್ತ್ರೀತ್ವವನ್ನು ಪಡೆದುಕೊಂಡು ಇಳೆ ಎಂಬ ಹೆಸರಿನೊಂದಿಗೆ ಬದುಕಲಾರಂಭಿಸಿದ್ದಳು. ಹೀಗಿರಲೊಮ್ಮೆ ಆ ಇಳೆಯನ್ನು ಸಂಧಿಸಿದ ಬುಧನಿಂದ ಪುರೂರವಸ್ಸನ ಜನನವಾಗಿತ್ತು. ಇಲ್ಲಿ ಬುಧನು ಮೇಲಿನ ಲೋಕದ ನಿವಾಸಿಯಾದರೆ, ಇಳೆಯು ಭೂಲೋಕ ನಿವಾಸಿಯಾಗಿದ್ದಳು ಹಾಗಾಗಿ ಇವರ ಸಂತಾನವಾದ ಪುರೂರವಸ್ಸನು ಭೂಲೋಕದಲ್ಲೇ ಉಳಿದುಕೊಳ್ಳಬೇಕಾಯಿತು. ದಿವ್ಯ ಪುರುಷರು ಬಹು ಕಾಲದಿಂದ ಕಾಯುತ್ತಿದ್ದ ಆ ಮರ್ತ್ಯಾಮರ್ತ್ಯರ ಪ್ರಥಮ ಸಂತಾನವನ್ನು ಕಂಡು ಹಿಗ್ಗಿದರು. ಈ ಪುರೂರವನಿಂದಲೇ ಮುಂದೆ ಸತ್ಯ ಯುಗವು

ತ್ರೇತಾ ಯುಗವಾಗಿ ಪರಿವರ್ತನೆಯಾಗಲಿಕ್ಕಿತ್ತು. ಆ ಒಂದು ಸಂದರ್ಭಕ್ಕಾಗಿ ಮೂಲೋಕಗಳೇ ಎದುರುನೋಡಿದ್ದವು.

ಧರ್ಮತತ್ಪರನಾಗಿ ಭೂಲೋಕವನ್ನಾಳುತ್ತಿದ್ದ ಪುರೂರವಸ್ಸನ ಕಾಲಕ್ಕೆ **ಓಂಕಾರ**(ಪ್ರಣವ)ವೆಂಬ ಏಕಮಾತ್ರ ವೇದವೂ, **ಹಂಸ**ವೆಂಬ ಹೆಸರಿನ ಏಕಮಾತ್ರ ವರ್ಣವೂ, **ಶ್ರೀಮನ್ನಾರಾಯಣ**ನೇ ಏಕಮಾತ್ರ ದೈವನೂ, **ಅಗ್ನಿ**ಯ ಏಕಮಾತ್ರ ರೂಪವೂ ಅಸ್ತಿತ್ವದಲ್ಲಿತ್ತು. ಆಗಿನ್ನೂ ಯಜ್ಞದ ಪರಿಕಲ್ಪನೆಯಿರಲಿಲ್ಲ. ಏಕೆಂದರೆ, ಸತ್ಯ ಯುಗದಲ್ಲಿ ಬೇಕು–ಬೇಡಿಕೆಗಳೆಲ್ಲವೂ ನೇರವಾಗಿಯೇ ದೊರೆತು ಬಿಡುತ್ತಿದ್ದವು. ಹಾಗಾಗಿಯೇ ಆಗ ಯಜ್ಞದಿಂದ ದೇವತೆಗಳನ್ನು ಸಂತೃಪ್ತಗೊಳಿಸುವ ಅವಶ್ಯಕತೆಯಿರಲಿಲ್ಲ. ಆದರೆ, ಯುಗ ಪರಿವರ್ತನೆಯ ಸಂದರ್ಭದಲ್ಲಿ ಇವೆಲ್ಲವೂ ಬದಲಾವಣೆಯಾಗಬೇಕಿತ್ತು. ಆದರೆ ಪುರೂರವಸ್ಸನು ಮಾತ್ರ ಧರ್ಮ–ಅರ್ಥ–ಕಾಮಗಳನ್ನು ಸಮಾನವಾಗಿ ಕಾಣುತ್ತಾ ಯುಗ ಪರಿವರ್ತನೆಗೆ ಬೇಕಿರುವ ಸಂಧಿ ಕಾಲಕ್ಕೆ ಸಿದ್ಧವಾಗಿರಲೇ ಇಲ್ಲ. ಆ ಸಂದರ್ಭದಲ್ಲಿ ಧರ್ಮಾರ್ಥ ಕಾಮಗಳ ಅಧಿದೇವತೆಗಳು ತಾವೇ ಮುಂದಾಗಿ ಬಂದು ಪುರೂರವಸ್ಸನನ್ನು ಪರೀಕ್ಷಿಸಿದರು. ಈ ಪರೀಕ್ಷೆಯಲ್ಲಿ ಪುರೂರವಸ್ಸನಿಗೆ ಅರ್ಥ–ಕಾಮಗಳಿಗಿಂತಲೂ ಧರ್ಮದ ಮೇಲೆಯೇ ಸ್ವಲ್ಪ ಹೆಚ್ಚಿನ ಗೌರವವಿರುವುದು ಕಂಡುಬಂದಿತು. ಇದರಿಂದ ಕುಪಿತರಾದ ಅರ್ಥ–ಕಾಮರುಗಳು ಪುರೂರವಸ್ಸನಿಗೆ ಶಾಪವಿತ್ತು ನಡೆದರು. ಈ ಪ್ರಕರಣವೂ ಸಹ ದಿವ್ಯ ಪುರುಷರ ನಿಯತಿಯಂತೆಯೇ ನಡೆದಿತ್ತು. ಈ ಶಾಪದ ಮೂಲಕವೇ ಮುಂದೆ ಪುರೂರವಸ್ಸನು ಊರ್ವಶಿಯೊಡನೆ ಬೆರೆತು, ಅವಳಿಗಾಗಿ ತನ್ನ ರಾಜ ಧರ್ಮವನ್ನೇ ಮರೆತು ಮರ್ತ್ಯ ಲೋಕವನ್ನು ಬಿಟ್ಟು ಮೇಲೇರಲೆಂದು ಬಯಸಿದನು. ಇದರಿಂದ ಸತ್ಯ ಯುಗದ ಕೊನೆಯಾಗಿ ತ್ರೇತಾ ಯುಗವು ಆರಂಭಗೊಂಡಿತ್ತು.

ಸೂರ್ಯ ವಂಶದ ಅನಂತ ಕವಲುಗಳಲ್ಲಿ ಕುಡಿಯೊಡೆದ ಬಳ್ಳಿಯೊಂದು ಚಂದ್ರ ವಂಶದೊಡನೆ ಬೆರೆತಿರಲು ಸೂರ್ಯ–ಚಂದ್ರರ ಸಂಗಮ ಶಿಶುವಾಗಿ ಒಗೆತಂದ ಪುರೂರವಸ್ಸನು ಒಂದು ರೀತಿಯಲ್ಲಿ ಸೂರ್ಯ ವಂಶದ ಕೈಯಲ್ಲಿರುವ ಮರ್ತ್ಯವನ್ನು ಚಂದ್ರ ವಂಶದ ಹಿಡಿತಕ್ಕೆ ತೆಗೆದುಕೊಂಡ ನೃಪನಾಗಿ ಕಾಣಿಸಿಕೊಳ್ಳುತ್ತಾನೆ. ಇತ್ತ ಸೂರ್ಯನ ಪೂರ್ಣ ಪ್ರಕಾಶವನ್ನೂ ಪಡೆಯದೆ, ಅತ್ತ ಚಂದ್ರನ ಮಧುಚಂದ್ರ ಕಾಂತಿಯನ್ನೂ ಹೊಂದದೆ, ಸೂರ್ಯ ವಂಶದ ಕೊನೆಯ ಅರಸನಾಗಿ, ಚಂದ್ರ ವಂಶದ ಪ್ರಥಮ ಅರಸನಾಗಿ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡ ಪುರೂರವಸ್ಸನಿಂದ ಸಹಜವಾಗಿಯೇ ಧರ್ಮದಲ್ಲಿ ಚ್ಯುತಿಯುಂಟಾಗುವ ಸಂದರ್ಭವು ಒದಗಿ ಬಂದಿತ್ತು. ಪುರೂರವಸ್ಸನು ಪ್ರತಿಷ್ಠಾನ

ಪುರವನ್ನು ಭೂಮಂಡಲದ ಕೇಂದ್ರವನ್ನಾಗಿಸಿಕೊಂಡು ಚಕ್ರವರ್ತಿಯಾಗಿ ಆಳುತ್ತಿರುವ ಸಮಯದಲ್ಲಿ ಅವನಿಗೆ ಮನೋಮಯವಾಸಿಯಾದ ಉರ್ವಶಿಯೆಂಬ ಅಪ್ಸರ ಕನ್ಯೆಯೊಡನೆ ಮುಖಾಮುಖಿಯಾಯಿತು. ಈ ಮರ್ತ್ಯ–ಅಮರ್ತ್ಯರ ಮಧ್ಯದ ಮುಖಾಮುಖಿಯನ್ನು ಬೇರೆ–ಬೇರೆ ಗ್ರಂಥಗಳಲ್ಲಿ ಬೇರೆ–ಬೇರೆ ರೀತಿಯಲ್ಲಿ ವಿವರಿಸಿದ್ದಾರೆ. ಒಟ್ಟಿನಲ್ಲಿ ಅಲ್ಲೊಂದು ಪ್ರೇಮ ಕಥೆಯಂತೂ ಆರಂಭಗೊಂಡಿತ್ತು. ಹಲವು ಸಂವತ್ಸರಗಳ ಕಾಲ ಅವರ ದಾಂಪತ್ಯ ಜೀವನವೂ ಯಾವುದೇ ಅಡೆತಡೆಗಳಿಲ್ಲದಂತೆ ನಡೆದಿತ್ತು. ಆದರೆ, ಸ್ವರ್ಲೋಕದ ನಿಲಿಂಪರಿಗೆ ಈ ಪ್ರೇಮವನ್ನು ತುಂಡರಿಸುವ ಸಂಕಲ್ಪವಾಯಿತು. ಅದರಂತೆ ಉರ್ವಶಿಯೂ ಸಹ ಪುರೂರವಸ್ಸನನ್ನು ತೊರೆದು ಮನೋಲೋಕದೆಡೆಗೇರಿದಳು. ಅಲ್ಲಿಗೆ ಧರ್ಮ ಪಾರಾಯಣನಾದ ಪುರೂರವಸ್ಸನ ಅಂಶದಲ್ಲಿ ಅಧರ್ಮವು ತಲೆದೋರಿತು. ರಾಜದಂಡವನ್ನು ತೊರೆದು, ಮಾಯವಾದ ಅಪ್ಸರ ಕನ್ಯೆಗೋಸುಗ ಆಡಳಿವನ್ನೆಲ್ಲ ಆರಡಿಗೆ ತಳ್ಳಿ ಕಾನನದಲ್ಲಿ ಹುಚ್ಚರಂತೆ ಅಲೆಯುತ್ತ ಕೊನೆಗೊಮ್ಮೆ ಅವಳನ್ನು ಕಂಡರೂ ಸಹ ಅವಳೊಡನೆಯ ಸಹಬಾಳ್ವೆಯಿನ್ನು ಸಾಧ್ಯವಿಲ್ಲವೆಂಬುದನ್ನರಿತನು. ಆಗ ಅವನ ಮುಂದೆ ಎರಡು ದಾರಿಗಳಿದ್ದವು. ಒಂದು ಬಿಟ್ಟುಹೋದವಳನ್ನು ಮರೆತು ಭೂಮಂಡಲದ ಆಡಳಿತ ಸೂತ್ರವನ್ನು ಮತ್ತೆ ವಹಿಸಿಕೊಂಡು ಮರ್ತ್ಯವನ್ನು ಉದ್ಧರಿಸಬೇಕು, ಇಲ್ಲವೇ ಮರ್ತ್ಯವನ್ನು ಅದರ ಪಾಡಿಗೆ ಬಿಟ್ಟು ತಾನು ಮಾತ್ರ ತನ್ನ ಲಾಲಸೆಯ ಬೆನ್ನುಹತ್ತಿ ಉರ್ವಶಿಯನ್ನು ಅರಸುತ್ತ ತಾನೂ ಸ್ವರ್ಲೋಕಕ್ಕೆ ತೆರಳಬೇಕು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಅವನು ಭೂಲೋಕದ ರಕ್ಷಣೆಯನ್ನು ಮರೆತು, ತನ್ನ ಕರ್ತ್ಯವ್ಯವನ್ನೆಲ್ಲ ತೊರೆದು ಉರ್ವಶಿಯ ಬೆನ್ನುಹತ್ತಿ ಸ್ವರ್ಲೋಕಕೇರಲೆಂದು ಯಜ್ಞವನ್ನು ಆರಂಭಿಸಿದನು. ಅದರ ಸಹಾಯದಿಂದ ತಾನೂ ಗಂಧರ್ವ ಪದವಿ ಸಂಪದನಾಗಿ ಶಾಶ್ವತವಾಗಿ ಸ್ವರ್ಲೋಕವಾಸಿಯಾದನು. ಆ ಸಮಯದಲ್ಲಿಯೇ ಸತ್ಯ ಯುಗವು ಕೊನೆಗೊಂಡು ತ್ರೇತಾ ಯುಗದ ಆರಂಭವಾಯಿತು. ಪುರೂರವಸ್ಸನ ಮನಸ್ಸಿನಿಂದ ಹೊರಬಿದ್ದ ಶ್ರುತಿಯಿಂದ ಓಂಕಾರವೆಂಬ ಏಕಮಾತ್ರ ವೇದವು ಮೂರು ಭಾಗವಾಗಿ ಒಡೆಯಿತು; ಅವನಾರಂಭಿಸಿದ ಪ್ರಥಮ ಯಜ್ಞದಿಂದ ಅಗ್ನಿಯ ಮೂರು ರೂಪಗಳು ಇಳಿದು ಬಂದವು; ಧರ್ಮದೊಡನೆ ಅವನ ಕರ್ಮವು ಬೆರೆತಿರಲು ಅಲ್ಲಿಯವರೆಗೆ ಶ್ರಿಮನ್ನಾರಾಯಣನೋರ್ವನನ್ನೇ ಆರಾಧಿಸುತ್ತಿದ್ದ ಮರ್ತ್ಯದಲ್ಲಿ ಅಸಂಖ್ಯ ದೇವತಾರಾಧನೆಗಳು ಹುಟ್ಟಿಕೊಂಡವು. ಇದು ತ್ರೇತಾ ಯುಗದ ಆರಂಭಕ್ಕೆ ಅವಶ್ಯಕವಾದ ಅಂಶಗಳೇ ಆಗಿದ್ದವು. ಒಂದು ರೀತಿಯಲ್ಲಿ ಪುರೂರವಸ್ಸನಿಂದಾದ ಲೋಪವು ಯುಗ ಪ್ರವರ್ತನೆಗೆ ಮೂಲಕಾರಣವೂ ಆಗಿತ್ತು.

ಈ ಉರ್ವಶಿ–ಪುರೂರವರ ಕಥಾನಕದ ಉತ್ತರಾರ್ಧವನ್ನು ಋಗ್ವೇದ, ಬೃಹದ್ದೇವತೆ ಮತ್ತು ಶತಪಥ ಬ್ರಾಹ್ಮಣಗಳಲ್ಲೂ; ಅದರ ಪೂರ್ವಾರ್ಧವನ್ನು ಪುರಾಣ, ಮಹಾಭಾರತ ಮತ್ತು ಕಥಾಸರಿತ್ಸಾಗರದಲ್ಲಿಯೂ ಕಾಣಬಹುದು:

ಋಗ್ವೇದದ 1.34.1, 4.2.18, 5.41.19, 7.33.9–13, 8.66.3, 10.95.1–18 ಸೂಕ್ತಗಳಲ್ಲಿ; ಬೃಹದ್ದೇವತೆಯ 2.59, 5.143–151, 7.147–154 ರಲ್ಲಿ; ಶತಪಥ ಬ್ರಾಹ್ಮಣದ 11.5.1.1–13 ರಲ್ಲಿ; ಶ್ರೀಮದ್ಭಾಗವತ ನವಮ ಸ್ಕಂದದ 14–15 ನೇ ಅಧ್ಯಾಯದಲ್ಲಿ; ಬ್ರಹ್ಮ ಮಹಾಪುರಾಣದ 9–10 ನೇ ಅಧ್ಯಾಯದಲ್ಲಿ; ಬ್ರಹ್ಮಾಂಡ ಪುರಾಣದ 65, 66 ನೇ ಅಧ್ಯಾಯದಲ್ಲಿ; ವಿಷ್ಣು ಪುರಾಣದ 4 ನೇ ಅಂಶದ 6–7 ನೇ ಅಧ್ಯಾಯದಲ್ಲಿ; ನರಸಿಂಹ ಪುರಾಣದ ವಂಶಾನುಚರಿತೆಯಲ್ಲಿ ಸೋಮ ವಂಶ ಚರಿತೆ ಎಂಬ 28 ನೇ ಅಧ್ಯಾಯದಲ್ಲಿ; ಲಿಂಗ ಮಹಾಪುರಾಣದ ಪೂರ್ವ ಭಾಗದ 66 ನೇ ಅಧ್ಯಾಯ; ವಾಯು ಪುರಾಣದ 28–29 ನೇ ಅಧ್ಯಾಯಗಳಲ್ಲಿ; ಬ್ರಹ್ಮವೈವರ್ತ ಪುರಾಣದ ಪ್ರಕೃತಿ ಖಂಡದ 58–61 ನೇ ಅಧ್ಯಾಯದಲ್ಲಿ; ಮತ್ಸ್ಯ ಪುರಾಣದ 23–24 ನೇ ಅಧ್ಯಾಯದಲ್ಲಿ; ಕೂರ್ಮ ಪುರಾಣದ 22–23 ನೇ ಅಧ್ಯಾಯದಲ್ಲಿ; ಮಹಾಭಾರತದ ಆದಿಪರ್ವದ 69.21–27 ನೇ ಅಧ್ಯಾಯದಲ್ಲಿ; ಮಹಾಭಾರತದ ಅರಣ್ಯ ಪರ್ವದ 110–113 ರ ತೀರ್ಥಯಾತ್ರಾ ಭಾಗದಲ್ಲಿ; ಕಥಾಸರಿತ್ಸಾಗರದ ಲಾವಾಣಕ ಲಂಬಕದ ಮೂರನೆ ತರಂಗದ 3–30 ನೇ ಭಾಗದಲ್ಲಿ ಸವಿಸ್ತಾರವಾಗಿ ವರ್ಣನೆಯಾದ ಉರ್ವಶಿ–ಪುರೂರವರ ಕಥೆಯನ್ನು ತಲಸ್ಪರ್ಶಿಯಾಗಿ ಅಧ್ಯಯನ ಗೈದ ಶ್ರೀ ಅರವಿಂದರು, ಕವಿರತ್ನ ಕಾಳಿದಾಸನು ರಚಿಸಿದ ವಿಕ್ರಮೋರ್ವಶಿಯ ಎಂಬ ನಾಟಕವನ್ನೂ ಅಭ್ಯಸಿಸಿದ್ದರು. ಹಾಗೂ ಇದೇ ವಿಷಯದ ಮೇಲೆ ಕಾವ್ಯವನ್ನು ರಚಿಸಲೆಂದು ನೋಂತು ಈ ಹಿಂದೆ ತಿಳಿಸಿದ ಐದು ಕೃತಿಗಳನ್ನು ರಚಿಸಿದರು. ಅದರಲ್ಲಿ ಕಾವ್ಯ ಭಾಗಕ್ಕೆ ಸಂಬಂಧಿಸಿದ ಈ ಕೃತಿಯಲ್ಲಿ ಶ್ರೀ ಅರವಿಂದರ **ಪುರೂರವಸ್ ಕಿರು ಕವನ** ಮತ್ತು **ಉರ್ವಶಿ** ಕಿರು ಕಾವ್ಯವನ್ನು ಕನ್ನಡಕ್ಕೆ ಅನುಸ್ಪಂದಿಸಲು ಪ್ರಯತ್ನಿಸಲಾಗಿದೆ.

ಉರ್ವಶಿ–ಪುರೂರವಸ್ಸರಿಗೆ ಸಂಬಂಧಿಸಿದ ಎಲ್ಲಾ ಪುರಾತನ ಗ್ರಂಥಗಳನ್ನು ಅಭ್ಯಸಿಸಿದ್ದ ಶ್ರೀ ಅರವಿಂದರು, ಆ ಎಲ್ಲಾ ಗ್ರಂಥಗಳಿರುವ ಮೂಲಸಾಮಾಗ್ರಿಯನ್ನು ತೆಗೆದುಕೊಂಡು ಅದರೊಟ್ಟಿಗೆ ತಮ್ಮ ಧ್ಯೇಯೋದ್ದೇಶವನ್ನೂ ಬೆರೆಸಿ ಸತ್ಯ–ಕಲ್ಪನೆಗಳ ಮೂಸೆಯೊಳಗೆ ತಮ್ಮ ಕಾವ್ಯ ಪ್ರತಿಭೆಯನ್ನು ತುಂಬಿ ಉರ್ವಶಿಯನ್ನು ರಚಿಸಿದರು. ಈ ಕಾವ್ಯದ ವಿಷಯಕ್ಕೆ ಬಂದರೆ: ಕಾವ್ಯವು ಆರಂಭವಾಗುವ ಹೊತ್ತಿಗೆ

ಪುರೂರವಸ್ಸನು ಊರ್ಧ್ವ ಲೋಕದಿಂದ ಇಳೆಗಿಳಿದು ಬರುವ ದೃಶ್ಯವನ್ನು ತೋರಿಸಲಾಗುತ್ತದೆ. ದೈತ್ಯರೊಡನೆಯ ಸಂಗ್ರಾಮವನ್ನು ಮುಗಿಸಿ ಮರಳಿ ತನ್ನ ರಾಜ್ಯಕ್ಕೆ ಬರುತ್ತಿದ್ದ ಪುರೂರವಸ್ಸನು ಮನೋಲೋಕವನ್ನು ದಾಟಿ, ಪ್ರಾಣದಂಗಣವನ್ನು ಮೀಟಿ ಭೂಲೋಕದ ವರ್ತುಲದೊಳಗೆ ಪ್ರವೇಶಿಸುತ್ತಾನೆ. ಅವನು ನೇರ ಹಿಮಾಚ್ಛಾದಿತ ಪರ್ವತಾವಳಿಗಳ ಮೇಲೆ ಬಂದಿಳಿಯುತ್ತಾನೆ. ಅದು ಬ್ರಾಹ್ಮಿ ಸಮಯವು ಅಳಿದು, ಅಶ್ವಿನೀ ಮುಹೂರ್ತವು ಕಳೆದು, ಅರುಣ ಸಾರಥ್ಯವಿಹ ಸೂರ್ಯನ ಆಗಮನಕ್ಕೂ ಮುಂಚಿನ ಉಷೋದಯದ ಕಾಲವಾಗಿತ್ತು. ಭೂಮಂಡಲವನ್ನು ಮುತ್ತಿದ್ದ ನಿಶೆಯ ಪರದೆಯು ಸರಿದು ನಭದಲ್ಲಿ ಹಾಸಿದ ನಕ್ಷತ್ರ ವಲಯವನ್ನು ಹರಿದು ಮರ್ತ್ಯವು ಮತ್ತೆ ಪುನರುಜ್ಜೀವಿಸುವ ಸಮಯವಾಗಿತ್ತು. ಆ ಹೊತ್ತಲ್ಲಿ ಗಗನಗಾಮಿಯಾಗಿ ಹಿಮಾದ್ರಿ ಶೃಂಗದೆಡೆಗೆ ಬಂದಿಳಿದ ಪುರೂರವಸ್ಸನು ಕೊಂಚ ಕಾಲ ವಿಶ್ರಮಿಸಲೆಂದು ನೋಂತಿರಲು ಅವನು ನಿಂತ ತಾಣದ ಪೂರ್ವ ದಿಶೆಯಲ್ಲಿ ಮೋಡಗಳ ಮಧ್ಯದೊಳಗಿಂದ ಕೆಲವೊಂದು ಸುಂದರ ಸ್ತ್ರೀಯರ ಬಿಂಬಗಳು ಕಂಡುಬಂದವು. ವಿಸ್ಮಿತನಾದ ನೃಪನು ತದೇಕ ಚಿತ್ತದಿಂದ ಅವರನ್ನೇ ದಿಟ್ಟಿಸಿರಲು, ಅವರೆಲ್ಲರೂ ಜೀವನ ದೇವತೆಗಳ ಸ್ವರ್ಗ(ಸಾವಿತ್ರಿ ಬುಕ್ 2, ಕ್ಯಾಂಟೋ 9)ದಿಂದಿಳಿದ ಅಪ್ಸರ ಕನ್ಯೆಯರಾಗಿದ್ದರು ಅವರಲ್ಲಿ ಮೇನಕಾ, ಮಿಶ್ರಕೇಶಿ, ಮಲ್ಲಿಕಾ, ರಂಭಾ, ನೀಲಭಾ, ಶೀಲಾ, ನಳಿನಿ, ಲಲಿತಾ, ಲಾವಣ್ಯಾ, ತಿಲೋತ್ತಮಾದಿ ಅಪ್ಸರೆಯರು ಕಂಡುಬಂದರು. ಅವರೆಲ್ಲರಿಗಿಂತಲೂ ಪುರುರವಸ್ಸನ ಮನಸ್ಸನ್ನು ಸೆಳೆದವಳೆಂದರೆ ಅಲ್ಲಿದ್ದ ಉರ್ವಶಿ. ಪುರೂರವಸ್ಸನು ಅವರ ಹತ್ತಿರ ಸಾಗಿ ವಿಚಾರಿಸಲೆಂದು ಮುಂಬರಿಯುವಷ್ಟರಲ್ಲಿಯೇ ಅದೆಲ್ಲಿಂದಲೋ ಧುತ್ತೆಂದು ಎರಗಿದ ದುಷ್ಟನಾದ ಕೇಶಿಯೆಂಬ ದೈತ್ಯನು ಉರ್ವಶಿಯನ್ನು ಅಪಹರಿಸಿ ಈಶಾನ್ಯ ದಿಕ್ಕಿನೆಡೆಗೆ ಮಿಂಚಿನಂತೆ ಮಾಯವಾದನು. ಕಣ್ಮುಚ್ಚಿ ತೆರೆಯುವನಿತರೊಳು ಘಟಿಸಿದ ಈ ಹೃದಯವಿದ್ರಾವಕ ದೃಶ್ಯವನ್ನು ಕಂಡು ಗಾಬರಿಯಾದ ಅಪ್ಸರ ಕನ್ಯೆಯರೆಲ್ಲರೂ ತಮ್ಮ ಸಖಿ ಉರ್ವಶಿಯನ್ನು ಕಾಪಾಡಿರಿ, ಕಾಪಾಡಿರಿ ಎಂದು ಕೂಗುತ್ತಾ ಆರ್ತನಾದಗಯಲಾರಂಭಿಸಿದರು. ಕೂಡಲೇ ಕ್ಷಾತ್ರತೇಜ ಸಂಭೂತನಾದ ಪುರೂರವಸ್ಸನು ಗಗನ ಮಾರ್ಗದಲ್ಲಿ ಓಡಿಹೋದ ದೈತ್ಯನನ್ನು ಅಟ್ಟಿಸಿಕೊಂಡು ಹೋಗಿ, ಉರ್ವಶಿಯನ್ನು ಕಾಪಾಡಿ ಮರಳಿ ತಂದು ಅವರ ಸಖಿಯರಿಗೆ ಒಪ್ಪಿಸುತ್ತಾನೆ. ಈ ಪ್ರಕರಣದಲ್ಲಿ ಉರ್ವಶಿ–ಪುರೂರವಸ್ಸರಿಬ್ಬರೂ ಒಬ್ಬರ ಮೇಲೊಬ್ಬರಿಗೆ ಮನಸ್ಸಾಗುತ್ತದೆ. ಪುರೂರವಸ್ಸನು ಉರ್ವಶಿಯನ್ನು ತನ್ನ ಜೊತೆ ಬರುವಂತೆ ಕೇಳಿಕೊಳ್ಳುತ್ತಾನೆ. ಆ ಸಮಯಕ್ಕೆ ಮುಂದಾಗಿ ಬಂದ ತಿಲೋತ್ತಮೆಯು

ಪುರೂರವಸ್ಸನಿಗೆ ರಾಜಧರ್ಮದ ಕುರಿತಾಗಿ ತಿಳುವಳಿಕೆಯ ನುಡಿಗಳನ್ನಾಡುತ್ತಾಳೆ. ಆ ಸಂವಾದದಲ್ಲಿ ತಿಲೋತ್ತಮೆಯಾಡುವ ನುಡಿಗಳು ಶ್ರೀ ಅರವಿಂದರ ನೇರ ನುಡಿಗಳೇ ಆಗಿವೆ. ಅಲ್ಲಿ ಅವಳೆನ್ನುವಂತೆ ಮಾನವನು ಮಾಧವನಾಗಿ ಪರಿವರ್ತಿತನಾಗಬಲ್ಲನು. ಅದನ್ನು ಸಾಧಿಸಲು ತ್ಯಾಗದ ಅವಶ್ಯಕತೆಯಿರುವದನ್ನು ಪುರೂರವಸ್ಸನಿಗೆ ಮನದಟ್ಟು ಮಾಡಿಕೊಡಲು ಪ್ರಯತ್ನಿಸುತ್ತಾಳೆ. ಆದರೆ, ಕುರುಡು ಪ್ರೇಮದಲಿ ಬಂಧಿತರಾದ ಉರ್ವಶಿ–ಪುರೂರವಸ್ಸರಿಬ್ಬರೂ ಒಬ್ಬರನ್ನೊಬ್ಬರು ಬಿಟ್ಟಿರಲು ಒಪ್ಪುವದಿಲ್ಲ. ಆದರೂ ತಿಲೋತ್ತಮೆಯ ತಿಳುನುಡಿಗೆ ತಲೆದೂಗಿದ ಅವರಿಬ್ಬರೂ ಒಬ್ಬರನ್ನೊಬ್ಬರು ಬಿಟ್ಟು ಮನಸ್ಸಿಲ್ಲದ ಮನಸ್ಸಿನಿಂದ ತಮ್ಮ ತಮ್ಮ ನೆಲೆಗೆ ತೆರಳಬೇಕಾಗುತ್ತದೆ. ಸ್ವರ್ಗಕ್ಕೆ ತರಳಿದ ಉರ್ವಶಿಗೆ ಪುರೂರವಸ್ಸನನ್ನು ಮರೆಯಲು ಸಾಧ್ಯವಾಗಲಿಲ್ಲ. ಇತ್ತ ಒಬ್ಬೊಂಟಿಗನಾಗಿ ಪ್ರತಿಷ್ಠಾನ ಪುರಕ್ಕೆ ಬಂದಿಳಿದ ಪುರೂರವಸ್ಸನಿಗೆ ಉರ್ವಶಿಯನ್ನು ಮರೆತು ತನ್ನ ಆಡಳಿತವನ್ನು ನಿಭಾಯಿಸಲು ಸಾಧ್ಯವಾಗಲಿಲ್ಲ. ಆ ಸಂದರ್ಭದಲ್ಲಿ ಸ್ವಲೋರ್ಕದೊಳಗೆ ಲಕ್ಷ್ಮೀ ಸ್ವಯಂವರದ ಪ್ರಕರಣವು ಜರುಗಿ ಉರ್ವಶಿಯು ಸ್ವರ್ಗದಿಂದ ಉಚ್ಚಾಟಿತಳಾಗಿ ಬುವಿಯಲ್ಲಿ ಬದುಕಬೇಕೆಂಬ ಶಾಪಕ್ಕೆ ಗುರಿಯಾಗಿ ಮರ್ತ್ಯಕ್ಕಿಳಿಯುತ್ತಾಳೆ. *(ಇಲ್ಲಿಯವರೆಗಿನ ಪ್ರಕರಣದಲ್ಲಿ ಕೇಶಿದೈತ್ಯ ಮತ್ತು ಲಕ್ಷ್ಮೀ ಸ್ವಯಂವರದ ಪ್ರಸಂಗಗಳನ್ನು ಕಾಳಿದಾಸನ ವಿಕ್ರಮೋರ್ವಶಿಯ ನಾಟಕ ಮತ್ತು ಮತ್ಸ್ಯ ಪುರಾಣದಿಂದ ಆಯ್ದುಕೊಳ್ಳಲಾಗಿದೆ)* ಅವಳನ್ನು ಅವಳ ಇಚ್ಛೆಯಂತೆ ಪುರೂರವಸ್ಸನೊಡನೆ ಕೂಡಿಸಲೆಂದು ನೋಂತ ತಿಲೋತ್ತಮೆಯು, ಆ ಮೂಲಕ ದಿವ್ಯತೆಯ ಅಂಶವನ್ನೂ ಪಾಲಿಸಲೆಂಬಂತೆ ಮೂರು ಷರತ್ತಗಳ ಮೇಲೆ ಉರ್ವಶಿಯನ್ನು ಪುರೂರವಸ್ಸನಿಗೆ ಒಪ್ಪಿಸುತ್ತಾಳೆ. ಹೀಗೆ ಹಲವು ಸಂವತ್ಸರಗಳ ಕಾಲ ಅವರಿಬ್ಬರೂ ದಾಂಪತ್ಯ ಜೀವನವನ್ನು ಅನುಭವಿಸುತ್ತಾರೆ. ಆದರೆ, ಮುಂದೊಮ್ಮೆ ಮನೋದೇವತೆಗಳು ಉರ್ವಶಿಯನ್ನು ಮತ್ತೆ ಸ್ವರ್ಗದೆಡೆಗೆ ಕರೆಸಿಕೊಳ್ಳಬೇಕೆಂದು ಬಗೆದು ಗಂಧರ್ವರಿಂದ ಅವರಿಬ್ಬರ ಮಧ್ಯದ ಪ್ರೇಮವನ್ನು ಕೊನೆಗೊಳಿಸಿ ಉರ್ವಶಿಯನ್ನು ಮತ್ತೆ ಮೇಲಕ್ಕೆ ಕರೆದುಕೊಂಡು ಹೋಗುತ್ತಾರೆ. *(ಈ ಭಾಗದಲ್ಲಿ ವರ್ಣನೆಯಾದ ಮೂರು ಷರತ್ತುಗಳು ಮತ್ತು ಗಂಧರ್ವರ ಪ್ರಸಂಗವನ್ನು ಪುರಾಣಗಳಿಂದ ಎತ್ತಿಕೊಳ್ಳಲಾಗಿದೆ. ಹಾಗೂ ಕಾಳಿದಾಸನ ನಾಟಕದಲ್ಲಿ ಉರ್ವಶಿಯ ಆಪ್ತಸಖಿಯಾಗಿದ್ದ ಚಿತ್ರಲೇಖೆಯನ್ನು ಕೈಬಿಟ್ಟು ತಿಲೋತ್ತಮೆಯನ್ನು ಪ್ರಸ್ತಾಪಿಸಲಾಗಿದೆ.)* ಇಲ್ಲಿಯಿಂದ ಪುರೂರವಸ್ಸನೊಳಗೆ ವಿಪ್ರಲಂಬ ಭಾವನೆಯು ಜಾಗೃತವಾಗುತ್ತದೆ. ಸ್ವತಃ ಚಕ್ರವರ್ತಿಯಾಗಿ ಭೂಮಂಡಲವನ್ನೇ ಉದ್ಧರಿಸಬೇಕಿದ್ದ ಪುರೂರವಸ್ಸನು

ರಾಜ್ಯವನ್ನೆಲ್ಲ ಬಿಟ್ಟು ಹುಚ್ಚನಂತೆ ಕಾನನದಲ್ಲಿ ಅಲೆಯುತ್ತ ತಿರುಗುತ್ತಾನೆ. *(ಇಲ್ಲಿ ಇವನ ಈ ಸ್ಥಿತಿಯನ್ನು ವಿಲಿಯಂ ಶೇಕ್ಸ್‌ಪೀಯರ್‌ನ ಲಿಯರ್ ಮಹಾರಾಜನ ಸ್ಥಿತಿಗೆ ಹೋಲಿಸಬಹುದು.)* ಪುರೂರವಸ್ಸನು ಅಲೆಯುತ್ತ–ತಿರುಗುತ್ತ ಕೊನೆಗೊಮ್ಮೆ ಹಿಮಾಲಯದ ಶೃಂಗಗಳನ್ನೇರುತ್ತಾನೆ. ಅಲ್ಲಿ ಕರಗಿದ ಹಿಮವು ನದಿಯಾಗಿ ಹರಿಯುತ್ತಿರುವ ದೃಶ್ಯವನ್ನು ಕಂಡ ನೃಪನು, 'ತನ್ನ ದುಃಖವನ್ನು ಕಂಡು ಪರ್ವತವೂ ಆಳುತ್ತಿದೆ!' ಎಂದು ಭಾವಿಸುತ್ತಾನೆ. ಕೊನೆಗೆ ಪರ್ವತದ ಅಂಚಿಗೆ ತಲುಪಿದ ಪುರೂರವಸ್ಸನಿಗೆ ಅಲ್ಲಿ ಶ್ರೀಲಕ್ಷ್ಮಿಯ ದರ್ಶನವಾಗುತ್ತದೆ. ಸಕಲ ಆರ್ಯಾವರ್ತದ ಮಾತೆಯಾದ ಶ್ರೀಲಕ್ಷ್ಮಿಯು ತನ್ನ ಕುವರನಾದ ಪುರೂರವಸ್ಸನಿಗೆ ದರ್ಶನವಿತ್ತು, ಅವನಲ್ಲಿ ರಾಜಧರ್ಮದ ಮಹತ್ವವನ್ನು ತಿಳಿಸಲು ಪ್ರಯತ್ನಿಸುತ್ತಾ, 'ಸಕಲ ಆರ್ಯ ಕುಲವನ್ನು ಉದ್ಧರಿಸಬೇಕಿರುವ ಅವನು ಕೇವಲ ತನ್ನ ಕಾಮತೃಷೆಯನ್ನು ನೆಚ್ಚಿಕೊಂಡು ಸರ್ವಸ್ವವನ್ನೆಲ್ಲ ತೊರೆದು ಓರ್ವ ಅಪ್ಸರ ಕನ್ಯೆಯನ್ನು ಅರಸುತ್ತಾ ಸಾಗುತ್ತಿರುವ ಪ್ರಮೇಯವನ್ನು' ದೂಷಿಸುತ್ತಾಳೆ. ಕೊನೆಗೆ ಅವನು ತನ್ನ ಬಿಗಿದ ಪಟ್ಟನ್ನು ಸಡಿಲಿಸದಿದ್ದಾಗ ಶ್ರೀಲಕ್ಷ್ಮಿಯು ಅವನಿಗೆ ದಿವ್ಯಮಾತೆಯನ್ನು ಕುರಿತು ಪ್ರಾರ್ಥಿಸಲು ಸೂಚಿಸುತ್ತಾ ಅದೃಶ್ಯಳಾಗುತ್ತಾಳೆ. ಅವಳ ಮಾತಿನಂತೆಯೇ ಪರ್ವತದ ತುತ್ತತುದಿಯನ್ನು ತಲುಪಿದ ಪುರೂರವಸ್ಸನಿಗೆ ದಿವ್ಯಮಾತೆಯು ದರ್ಶನವಿತ್ತು, ಅವನ ಇಚ್ಛೆಯಂತೆಯೇ ಅವನನ್ನು ಸ್ವರ್ಲೋಕದ ಖಾಯಂ ನಿವಾಸಿಯಾಗುವಂತೆ ಆಶೀರ್ವದಿಸುತ್ತಾಳೆ. ಆದರೆ, ಇಲ್ಲಿ ಪುರೂರವಸ್ಸನು ಬಯಸಿದ ಫಲದಂತೆ ಅವನು ಉರ್ವಶಿಯನ್ನೇನೋ ಪಡೆದುಕೊಳ್ಳುತ್ತಾನೆ. ಆದರೆ, ಆಳುವ ಕೈಯಿಲ್ಲದೆ ಬರಡಾಗಿರುವ ಭೂಮಿಯನ್ನು ಸೂರೆಗೈಯಲು ಶತ್ರುಗಳೆಲ್ಲ ಸಿದ್ಧರಾಗಿರುವ ಸಂದರ್ಭದಲ್ಲಿ ಇನ್ನೂ ಎಳೆ ಪ್ರಾಯದಲ್ಲಿರುವ ತನ್ನ ಕುವರನನ್ನು ಪಟ್ಟದಲ್ಲಿ ಕೂರಿಸಿ ತನ್ನ ಲಾಲಸೆಗಾಗಿ ಮನೋಮಯದೆಡೆಗೇರಿದ ಪುರೂರವಸ್ಸನು ಪ್ರೇಮವನ್ನು ಸಾಧಿಸಿದರೂ ತನ್ನ ರಾಜಧರ್ಮವನ್ನು ಮರೆತು ತಾನೇ ಕಟ್ಟಿ ಬೆಳೆಸಿದ ರಾಜ್ಯವು ತನ್ನ ಮುಂದೆಯೇ ಹಾಳಾಗುತ್ತಿರುವದನ್ನು ಕಂಡೂ ಕಾಣದಂತೆ ಹೋಗಿ ಚಕ್ರವರ್ತಿ ಪದ ಸಂಪದಕ್ಕೆ ಅಪಾತ್ರನಾಗಿ ಬಿಡುತ್ತಾನೆ. ಶ್ರೀ ಅರವಿಂದರ **ಲವ್ ಆ್ಯಂಡ್ ಡೆತ್**‌ನಲ್ಲಿ ಪತ್ನಿಯ ಆತ್ಮವನ್ನು ಮರಳಿ ಪಡೆಯಲೋಸುವ ಕೃತಾಂತನಲ್ಲಿಗೆ ತೆರಳಿ ಪ್ರಿಯಂವದೆಯನ್ನು ಪಡೆದುಕೊಂಡ ಕಥೆಯಲ್ಲಿ ರುರುವು ಆದರ್ಶಪತಿಯಾಗಿ ಕಂಡುಬರುತ್ತಾನೆ. ಆದರೆ ಇಲ್ಲಿ ಪುರೂರವನು ಮಾತ್ರ ಆದರ್ಶ ಪ್ರೇಮಿಯಾದರೂ ಅದಕ್ಷ ಆಡಳಿತಗಾರನಾಗಿಯೇ ಉಳಿದುಬಿಡುತ್ತಾನೆ. ಏಕೆಂದರೆ, ಅಲ್ಲಿ ರುರುವು ಓರ್ವ ಸಾಮಾನ್ಯ ತಾಪಸಕುವರನಾಗಿದ್ದರೆ, ಆದರೆ ಇಲ್ಲಿ ಪುರೂರವಸ್ಸನು ಇಡೀ

ಭೂಮಂಡಲವನ್ನಾಳುವ ಚಕ್ರವರ್ತಿಯಾಗಿರುವನು. ಒಂದು ದೇಶವನ್ನಾಳುವ ರಾಜನಿಗೆ ತನ್ನ ಸ್ವಂತದ ಅಪೇಕ್ಷೆಗಳಿಗಿಂತಲೂ ರಾಷ್ಟ್ರದ ಅಭ್ಯುದಯದ ಅಭೀಪ್ಸೆಯೇ ಪ್ರಮುಖವಾಗಿರುತ್ತದೆ. ಈ ಹಂತದಲ್ಲಿ ಪುರೂರವಸ್ಸನು ಸೋತುಬಿಡುತ್ತಾನೆ. ಕೊನೆಗೆ ಕಾವ್ಯದ ಅಂತ್ಯಕ್ಕೆ ದೊರೆಯೋರ್ವ ತನ್ನ ಕರ್ತವ್ಯವನ್ನು ಮರೆತು ಮುಂದೋಡಿದರೂ ಅನಂತ ಕಾಲದಿಂದ ಇನಿತೂ ಸಹ ಸೋಲೊಪ್ಪಿಕೊಳ್ಳದ ಹಸಿರ ಸೀರೆಯುಟ್ಟ ಭೂದೇವಿಯು ಮಾತ್ರ ತನ್ನ ದಿನನಿತ್ಯದ ಕರ್ಮದಂತೆ ಸಂಕುಲವನ್ನು ಸಾಕುತ್ತಾ ಸುತ್ತುತ್ತಿರುವ ದೃಶ್ಯವನ್ನು ತೋರಿಸಲಾಗುತ್ತದೆ.

ಶ್ರೀ ಅರವಿಂದರು 1898–99 ರಲ್ಲಿ ರಚಿಸಿದ ಈ ಕಿರು ಕಾವ್ಯವು ಹಲವುಬಾರಿ ಮುದ್ರಣವಾಗಿ ಸಾಹಿತ್ಯ ವಲಯದಲ್ಲಿ ತನ್ನ ಛಾಪನ್ನು ಮೂಡಿಸಿತ್ತು. ಆನಂತರ ಶ್ರೀ ಅರವಿಂದರು ಬರೋಡಾದಿಂದ ಪಾಂಡಿಚೇರಿಗೆ ಬಂದ ನಂತರ ಅವರ ಸಾಧನೆಯು ಆರಂಭವಾಗಿರಲು, ಅವರ ಪ್ರಜ್ಞೆಯು ನಿಧಾನವಾಗಿ ಅನ್ನಮಯವನ್ನು ತೊರೆದು ಮೇಲೇರಲಾರಂಭಿಸಿತು. ಅವರು ಕ್ರಮೇಣ ಪ್ರಜ್ಞಾವಿಕಸನ ಸೋಪಾನದ ಒಂದೊಂದೇ ಮೆಟ್ಟಿಲುಗಳನ್ನು ಅಧಿರೋಹಿಸುತ್ತ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಕಾರಣಮಯ, ಮಹಾಕಾರಣಮಯ ಕೊನೆಗೆ ಆನಂದಮಯಗಳೆಂಬ ಸಪ್ತ ಪಾತಳಿಗಳನ್ನು ದರ್ಶನ ಗೈದರು. ಆ ದರ್ಶನದ ಸಾರ ಸಮಗ್ರವನ್ನೇ ಅವರು **ಸಾವಿತ್ರಿ** ಮಹಾಕಾವ್ಯದಲ್ಲಿ ಭಟ್ಟಿ ಇಳಿಸಿದ್ದರು. ಆದರೆ ಉರ್ವಶಿ ಕಾವ್ಯವನ್ನು ರಚಿಸುವ ಕಾಲಕ್ಕೆ ಅವರಲ್ಲಿ ಇನ್ನೂ ದರ್ಶನಗಳ ಪೂರ್ಣಫಲವು ದೊರೆತಿರಲಿಲ್ಲ. ಹಾಗಾಗಿಯೇ ಅವರ ಆರಂಭಿಕ ಕಾವ್ಯದಲ್ಲಿ ವಿಶ್ವದ ಪ್ರತಿಯೊಂದು ಸ್ತರದ ಸೂಕ್ಷ್ಮ ವರ್ಣನೆಯು ದೊರೆಯುವದಿಲ್ಲ. ಇದಕ್ಕೆ ಉರ್ವಶಿಯೂ ಹೊರತಲ್ಲ. ಮುಂದೆ ಶ್ರೀ ಅರವಿಂದರು ಸಾವಿತ್ರಿಯನ್ನು ರಚಿಸಿ ಅದನ್ನು ಮೇಲಿಂದ ಮೇಲೆ ಪರಿಷ್ಕರಿಸುತ್ತಿರುವ ಸಂದರ್ಭದಲ್ಲಿ ಅವರಿಗೆ ತಮ್ಮ ಹಳೆಯ ಕಿರು ಕಾವ್ಯವಾದ ಉರ್ವಶಿಯಲ್ಲೂ ಕೆಲವು ಪರಿಷ್ಕರಣೆಯ ಅವಶ್ಯಕತೆಯಿರುವುದನ್ನು ಗಮನಿಸಿದ್ದರು. ಆದರೆ, ಈಗಾಗಲೇ ಸುಮಾರು ಮುದ್ರಣಗಳನ್ನು ಕಂಡಿದ್ದ ಕೃತಿಯನ್ನು ಪರಿಷ್ಕರಿಸುವ ಬದಲು ಅದಕ್ಕೆ ಪೂರಕವಾದ ಮತ್ತೊಂದು ಕವನವನ್ನು ರಚಿಸುವದಾಗಿ ನೋಂತು, ಉರ್ವಶಿಯನ್ನು ಮತ್ತೊಮ್ಮೆ ಗಮನಿಸಿರಲು ಆ ಕಾವ್ಯದ ಆರಂಭಿಕ ಸಾಲುಗಳಿಗೆ ಪರಿಷ್ಕರಣೆಯ ಅವಶ್ಯಕತೆಯಿರುವುದು ಕಂಡುಬಂದಿತ್ತು. ಏಕೆಂದರೆ, ಕಾವ್ಯದ ಆರಂಭದಲ್ಲಿ ಪುರೂರವಸ್ಸನು ಊರ್ಧ್ವ ಲೋಕದಿಂದ ಇಳೆಗಿಳಿದು ಬರುವ ದೃಶ್ಯವನ್ನು ತೋರಿಸಲಾಗುತ್ತದೆ. ಆದರೆ, ಅವನು ಊರ್ಧ್ವದ ಯಾವ ಸ್ತರದಿಂದ ಇಳಿದು ಬರುತ್ತಾನೆ ಎಂಬುದನ್ನು ಸ್ಪಷ್ಟವಾಗಿ ಹೇಳಿರಲಿಲ್ಲ.

ಕೇವಲ ದೈತ್ಯರೊಡನೆಯ ಸಂಗ್ರಾಮವನ್ನು ಮುಗಿಸಿ ಮರಳುವದಾಗಿ ಮಾತ್ರ ತಿಳಿಸಿದ್ದರು. ಈ ಹಂತದಲ್ಲಿ ಕಾಳಿದಾಸನೂ ಸಹ ನಾಟಕದ ಪ್ರಥಮ ಅಂಕದಲ್ಲಿ ಅದನ್ನು ಸೂಕ್ಷ್ಮವಾಗಿ ಹೇಳದೆ, ಕೇವಲ 'ಪುರೂರವಸ್ಸನು ಸೂರ್ಯೋಪಾಸನೆಯನ್ನು ಮುಗಿಸಿ ಮೇಲಿನ ಲೋಕದಿಂದ ಇಳೆಗಿಳಿದು ಬರುತ್ತಿದ್ದನು' ಎಂದಷ್ಟೇ ಉಲ್ಲೇಖಿಸುತ್ತಾನೆ. ಆದರೆ, ಶ್ರೀಅರವಿಂದರಿಗೆ ಅಷ್ಟಕ್ಕೆ ಸಮಾಧಾನವಾಗಲಿಲ್ಲ. ಅವರಿಗೆ ಆ ದೃಶ್ಯಕ್ಕೆ ಇನ್ನು ಹೆಚ್ಚಿನ ಹಿನ್ನೆಲೆಯನ್ನು ನೀಡಬೇಕು ಎನಿಸಿರಲು, ಅವರು ಮುಂದೆ 1933 ರಲ್ಲಿ ಪುರೂರವಸ್ ಎಂಬ ಕಿರು ಕವನವೊಂದನ್ನು ರಚಿಸಿದರು. ಅದರಲ್ಲಿ ಪುರುರವಸ್ಸನು ನೇರ ಆನಂದಮಯದಿಂದಲೇ ಮರ್ತ್ಯಕ್ಕೆ ಇಳಿದು ಬಂದನು ಎಂಬುದನ್ನು ಬಹು ಸ್ವಾರಸ್ಯಕರವಾಗಿ ಹೇಳುತ್ತಾರೆ. ಸಪ್ತ ಸ್ತರಗಳ ಪ್ರತಿಯೊಂದೂ ಪಾತಳಿಯನ್ನು ಪುರೂರವಸ್ಸನು ಹೇಗೆ ದಾಟುತ್ತಾ ಬುವಿಯೆಡೆಗೆ ಅವರೋಹಿಸುತ್ತಾನೆ ಎಂಬುದನ್ನು ತಿಳಿಸುತ್ತಾರೆ. ಹಾಗಾಗಿ ಇಲ್ಲಿ ಆ ಕಿರು ಕವನದ ಅನುಸ್ಪಂದನವನ್ನು ಮೊದಲಿಗೆ ಪರಿಚಯಿಸಿಕೊಟ್ಟು. ಆನಂತರದಲ್ಲಿ ಮೂಲ ಉರ್ವಶಿ ಕಾವ್ಯವನ್ನು ಕನ್ನಡಕ್ಕೆ ತರಲಾಗಿದೆ.

ಇಲ್ಲಿ ಈ ಎರಡೂ ಕವನ–ಕಾವ್ಯಗಳನ್ನು ಸಾಧ್ಯವಾದ ಮಟ್ಟಿಗೆ ಮೂಲವನ್ನೇ ಪ್ರತಿನಿಧಿಸುವಂತೆ ಅನುಸ್ಪಂದಿಸಲಾಗಿದೆ. ಹಾಗೂ ಇದನ್ನು ಕನ್ನಡಕ್ಕೆ ತರುವ ಹಂತದಲ್ಲಿ ಶ್ರೀ ಅರವಿಂದರು ಸೂಚಿಸಿದ ಸಂಕೇತಗಳಿಗೆ ಪೂರಕವಾದ ಪ್ರತಿಮೆಗಳನ್ನು ಆರೋಪಿಸಿ, ಆ ಪರಿಕಲ್ಪನೆಯನ್ನು ಇನ್ನಷ್ಟು ಶ್ರೀಮಂತಗೊಳಿಸಿಲು ಪ್ರಯತ್ನಿಸಲಾಗಿದೆ. ಹಾಗೂ ಕನ್ನಡದ ಜಾಯಮಾನಕ್ಕೆ ತಕ್ಕಂತೆ ಉರ್ವಶಿಯನ್ನು ಪರಿಚಯಿಸುವ ಹಂತದಲ್ಲಿ ಕಾವ್ಯದ ಭಾವ ಮತ್ತು ಓಘವು ಮೂಲಕಾವ್ಯವನ್ನೇ ಪ್ರತಿನಿಧಿಸುವಂತೆ ಪ್ರಯತ್ನಿಸಲಾಗಿದೆ.

ಈ ಕಾವ್ಯ ಭಾಗದಲ್ಲಿ ಬರುವ ಎರಡು ಪ್ರಮುಖ ಪಾತ್ರಗಳಾದ ಉರ್ವಶಿ–ಪುರೂರವಸ್ಸರ ನಾಮಪದ ನಿಷ್ಪತ್ತಿಯ ವಿಚಾರಕ್ಕೆ ಬಂದರೆ, ಈಗ ಪ್ರಚಲಿತವಿರುವಂತೆ ಎಲ್ಲೆಡೆಯೂ 'ಉರ್ವಶಿ' ಪದವನ್ನು 'ಊರ್ವಶಿ' ಎಂದು ಕರೆಯಲಾಗುತ್ತದೆ. ಆದರೆ ಈ ಎರಡೂ ನಾಮಗಳಲ್ಲಿ ಉರ್ವಶಿ ಪದವೇ ಪ್ರಾಚೀನವಾಗಿದ್ದು, ಊರ್ವಶಿ ಎಂಬುದು ಇತ್ತೀಚಿನ ಬಳಕೆಯಲ್ಲಿ ಹುಟ್ಟಿಕೊಂಡು ನಾಮವಾಗಿದೆ. ಇದನ್ನು ಇನ್ನೂ ಚರ್ಚಾತ್ಮಕವಾಗಿ ಹೇಳುವದಾದರೆ, ಋಗ್ವೇದದ 10.95.10 ನೇ ಋಕ್ಕಿನ ಪ್ರತಿಪದಾರ್ಥವನ್ನು ವಿವರಿಸುವ ಹಂತದಲ್ಲಿ, ಉರ್ವಶಿ ಪದ ನಿಷ್ಪತ್ತಿಯ ವಿಚಾರವು ಕಂಡುಬಂದಿರಲು ಯಾಸ್ಕರು 5.13, 5.14 ಮತ್ತು 11.36 ರ ಮೂರು ನಿರುಕ್ತಗಳ ನಿರ್ವಚನವನ್ನು ಹೇಳುತ್ತಾರೆ. ಅದರ ಪ್ರಕಾರ ಉರ್ವಶಿ ಪದವೇ ಪ್ರಾಚೀನವೆಂಬುದನ್ನು ಮನಗಾಣಬಹುದು. ಆದರೆ ಮುಂದೆ ವೇದ

ಕಾಲವು ಮುಗಿದು, ಪುರಾಣ ಯುಗವೂ ಹಿಂಸರಿದು, ಆಧುನಿಕ ಕಾಲಕ್ಕೆ ಬರುವ ಸಮಯದಲ್ಲಿ ರಚನೆಯಾದ 'ದೇವಿ ಭಾಗವತ'ದಲ್ಲಿ ಉರ್ವಶಿಯ ಜನನದ ಕುರಿತಾದ ದಂತ ಕಥೆಯೊಂದನ್ನು ವರ್ಣಿಸಲಾಗಿದೆ. ಅದರ ಪ್ರಕಾರ ಸಹಸ್ರ ಕವಚನೆಂಬ ಅಸುರನನ್ನು ಸಂಹರಿಸಲು ಪಣತೊಟ್ಟ ನರ–ನಾರಾಯಣರು ಒಂದು ಸಾವಿರ ವರ್ಷದವರೆಗಿನ ಯುದ್ಧದ ಕೊನೆಗೆ ಅವನ ಒಂದು ಕವಚವನ್ನು ಭೇದಿಸಲು ಶಕ್ಯರಾಗುತ್ತಾರೆ. ಹೀಗೆ ಅವರಿಬ್ಬರಲ್ಲಿ ಒಬ್ಬರು ಸಹಸ್ರ ಕವಚನೊಂದಿಗೆ ಒಂದು ಸಾವಿರ ವರ್ಷ ಹಗಲು ರಾತ್ರಿಯೆನ್ನದೆ ಹೋರಾಡುತ್ತ ಕೊನೆಗೆ ಅವನ ಒಂದು ಕವಚವನ್ನು ಭೇದಿಸಬೇಕು. ಆ ಸಂದರ್ಭದಲ್ಲಿ ಇನ್ನೋರ್ವರು ಬರಲಿರುವ ಮುಂದಿನ ಸಹಸ್ರ ವರ್ಷಗಳ ನಂತರದ ತನ್ನ ಪಾಲಿನ ಯುದ್ಧದ ಸಮಯಕ್ಕೆ ಸಿದ್ಧನಾಗಲು ಸಹಸ್ರ ವರ್ಷಗಳ ಕಾಲ ಬದರಿಕಾಶ್ರಮದಲ್ಲಿ ತಪೋನಿರತ–ನಾಗಬೇಕೆಂಬ ನಿಯಮದಂತೆ, ಅವರಿಬ್ಬರಲ್ಲಿ ಒಬ್ಬರು ಯುದ್ದದಲ್ಲಿದ್ದರೆ, ಇನ್ನೊಬ್ಬರು ಬದರಿಕಾಶ್ರಮದಲ್ಲಿ ತಪದಲ್ಲಿರುತ್ತಿದ್ದರು. ಈ ಮಧ್ಯೆ ಅತ್ತ ನರನು ಸಹಸ್ರ ಕವಚನೊಂದಿಗೆ ಯುದ್ಧನಿರತನಾಗಿರಲು ಅದೇ ಸಮಯಕ್ಕೆ ಇತ್ತ ನಾರಾಯಣನು ತಪೋನಿರತನಾಗಿರಲು, ಅವನ ತಪಸ್ಸನ್ನು ಭಂಗಪಡಿಸಲೆಂದು ಇಂದ್ರನಿಂದ ಪ್ರೇಷಿತರಾದ ರಂಭಾದಿ ಅಪ್ಸರೆಯರು ಬದರಿಕಾಶ್ರಮಕ್ಕೆ ಬಂದು ಅವನ ತಪಭಂಗಕ್ಕೆ ಪ್ರಯತ್ನಿಸುತ್ತಿರುವಾಗಲೇ ನಾರಾಯಣ ಮುನಿಯು ಆ ಅಪ್ಸರೆಯರ ಮುಖಭಂಗಗೊಳಿಸಲೆಂಬಂತೆ ತಮ್ಮ ತೊಡೆ(ಊರು)ಯಿಂದ ಅಪ್ರತಿಮ ಸುಂದರ ಕನ್ಯೆಯೋರ್ವಳನ್ನು ಸೃಜಿಸಿ ಅವಳನ್ನು ಉಳಿದ ಅಪ್ಸರ ಕನ್ಯೆಯರೊಡನೆ ಇಂದ್ರನಲ್ಲಿಗೆ ಕಳಿಸಿ ತಾನು ಸೌಂದರ್ಯಕ್ಕೆ ಮರಳಾಗುವದಿಲ್ಲ ಎಂದು ತೋರ್ಪಡಿಸುತ್ತಾನೆ. ಆ ಸಂದರ್ಭದಲ್ಲಿ ಮುನಿಯ ತೊಡೆಯಿಂದ ಅಥವಾ ಊರುವಿನಿಂದ ಉದ್ಭವಿಸಿದವಳೇ ಊರ್ವಶಿ ಎಂಬ ಕಥೆಯನ್ನು ಉಲ್ಲೇಖಿಸಲಾಯಿತು. ಅಂದಿನಿಂದ ಉರ್ವಶಿ ನಾಮವು ಊರ್ವಶಿಯಾಗಿ ಬದಲಾಯಿತು. ಈ ಕಥೆಯನ್ನು ಮಹಾಭಾರತ ಕಾಲದ ಕೃಷ್ಣ–ಅರ್ಜುನ–ಕರ್ಣರ ಹಿಂದಿನ ಭವಾವಳಿಯನ್ನು ನಿರೂಪಿಸಲೋಸುಗ ರಚಿಸಲಾಗಿತ್ತು ಅದರಲ್ಲಿ ಅರ್ಜುನನು ನರನ ಪುನರ್ಜನ್ಮವಾದರೆ, ಕೃಷ್ಣನು ನಾರಾಯಣ ಮುನಿಯ ಅಂಶವತಾರವಾಗಿದ್ದನು. ಇನ್ನು ಕರ್ಣನು ಸಹಸ್ರ ಕವಚನ ಅಂಶವೇ ಆಗಿದ್ದನು. ಅಂದು ನರ–ನಾರಾಯಣರು ಲಕ್ಷಾವಧಿಯ ವರ್ಷದವರೆಗೆ ಹೋರಾಡಿ ಸಹಸ್ರ ಕವಚನ 999 ಕವಚಗಳನ್ನು ಭೇದಿಸಿದರು. ಆದರೆ ಅವನ ಉಳಿದ ಇನ್ನೊಂದು ಕವಚವನ್ನು ಭೇದಿಸಬೇಕೆನ್ನುವಷ್ಟರಲ್ಲಿ ಯುಗ ಪರಿವರ್ತನೆಯಾಗಿ ಆ ಕಾರ್ಯವು ಅಷ್ಟಕ್ಕೆ ಉಳಿದು ಬಿಟ್ಟಿತು. ಅಂದು ಮರ್ತ್ಯದಿಂದ

ಚ್ಯುತರಾದ ನರನು ಸ್ವರ್ಗಕ್ಕೇರಿದರೆ, ನಾರಾಯಣನು ತನ್ನ ವೈಕುಂಠಕ್ಕೆ ತೆರಳಿದನು. ಇನ್ನು ಸಹಸ್ರ ಕವಚನನ್ನು ಮುಂದಿನ ಯುಗಕ್ಕೆಂದು ಮೀಸಲಾಗಿರಿಸಲು ಅವನನ್ನು ಸೂರ್ಯ ಮಂಡಲಕ್ಕೆ ಕಳಿಸಲಾಯಿತು. ಅದರಂತೆಯೇ ಮುಂದೆ ದ್ವಾಪರದ ಕಾಲಕ್ಕೆ ಸೂರ್ಯ ಪುತ್ರನಾಗಿ ಜನಿಸಿ ಬಂದ ಕರ್ಣನು, ವೈಕುಂಠದಿಂದಿಳಿದ ಕೃಷ್ಣ, ಮತ್ತು ಸ್ವರ್ಗದ ಇಂದ್ರ ಪುತ್ರನಾಗಿ ಇಳೆಗಿಳಿದ ಅರ್ಜುನನಿಂದ ತನ್ನ ಉಳಿದ ಇನ್ನೊಂದು ಕವಚವನ್ನೂ ಕಳೆದುಕೊಂಡು(ಇಂದ್ರ ಭಿಕ್ಷೆ!) ಹತನಾಗುತ್ತಾನೆ. ಅಲ್ಲಿಗೆ ಸತ್ಯ ಯುಗದ ಅಂತ್ಯಕ್ಕೆ ಉಳಿದ ಸಹಸ್ರ ಕವಚನ ಕಥೆಯು ದ್ವಾಪರದಲ್ಲಿ ಅಂತ್ಯವಾಗುತ್ತದೆ. ಈ ಮಧ್ಯದ ತ್ರೇತಾ ಯುಗದಲ್ಲಿ ಈ ಮೂರೂ ಚೈತನ್ಯಗಳು ಬರಲಿರುವ ತಮ್ಮ ನಿಯತಿ ಕರ್ಮವನ್ನು ಪೂರೈಸಲೆಂದು, ಅದರ ಪೂರ್ವ ಸಿದ್ಧತೆಗೆಂದು ತಮ್ಮ ತಮ್ಮ ಊರ್ಧ್ವ ನಿಲಯದ ವಿಶ್ರಾಂತ ಮಂದಿರದಲ್ಲಿ ಆತ್ಮ ನಿದ್ರಾಂಗನೆಯಲ್ಲಿದ್ದರು ಎಂಬುದನ್ನು ಹೇಳಲಾಗುತ್ತದೆ. ಒಟ್ಟಿನಲ್ಲಿ ಈ ಕಥೆಯು ಇತ್ತೀಚಿನದ್ದು ಎಂಬುದಂತೂ ಸತ್ಯ. ಹಾಗಾಗಿ ನಾವಿಲ್ಲಿ ಆಧುನಿಕ ನಾಮವಾದ ಊರ್ವಶಿಯ ಬದಲಿಗೆ **ಪ್ರಾಚೀನ ನಾಮವಾದ ಉರ್ವಶಿ**ಯನ್ನೇ ಬಳಸುವುದು ಸೂಕ್ತ. ಹಾಗೂ ಶ್ರೀ ಅರವಿಂದರು ಊರ್ವಶೀ ಎಂದು ಉಲ್ಲೇಖಿಸಿದ್ದು, ಅವರ ನುಡಿಯಲ್ಲಿ ಉರ್ವಶಿಯ ಪದ ನಿಷ್ಪತ್ತಿಯು ಹೇಗಿತ್ತು ಎಂಬುದು ಇನ್ನೂ ಅಧ್ಯಯನವಾಗಬೇಕಿದೆ. ಹಾಗಾಗಿ ಈ ಅನುಸ್ಪಂದನದ ಹಂತದಲ್ಲಿ ಊರ್ವಶಿ ಪದವನ್ನು ಕೈಬಿಟ್ಟು ಪುರಾತನವಾದ ಉರ್ವಶಿ ಪದವನ್ನೇ ಬಳಸಲಾಗಿದೆ.

ಇನ್ನು ಎರಡನೇ ಪಾತ್ರವಾದ ಪುರೂರವಸ್ಸನ ನಾಮದ ವಿಚಾರಕ್ಕೆ ಬಂದರೆ, ಪುರೂರವಸ್ಸನ್ನು ಪುರೂರವಸ್, ಪುರೂರವಸ್ಸು, ಪುರೂರವ, ಪೌರವ... ಎಂದು ಮುಂತಾಗಿ ವರ್ಣಿಸಲಾಗಿದೆ. ಆದರೆ ಶ್ರೀ ಅರವಿಂದರು ಮಾತ್ರ ಪುರೂರವಸ್ ಪದವನ್ನೇ ಬಳಸಿದ್ದಾರೆ. ಅಲ್ಲದೆ ಅವರು ತಮ್ಮ ಉರ್ವಶಿ ಕಾವ್ಯ, ಪುರೂರವಸ್ ಕವನ, ವಿಕ್ರಮೋರ್ವಶಿಯ ಕುರಿತಾದ ಲೇಖನ ಮತ್ತು ಅದರ ಪಾತ್ರ ಪರಿಚಯಕ್ಕೆ ಸಂಬಂಧಿಸಿದ ಕೃತಿಯಲ್ಲಿ ಪುರೂರವಸ್ ಎಂದು ಉಲ್ಲೇಖಿಸಿದ್ದು; ಅವರು ಅನುವಾದಿಸಿದ ವಿಕ್ರಮೋರ್ವಶಿಯ ನಾಟಕದಲ್ಲಿ ಮಾತ್ರ ಪುರೂರವಸ್ ಎಂಬ ಪದವನ್ನು ಬಳಸಿದ್ದಾರೆ. ಈ ವ್ಯತ್ಯಯಕ್ಕೆ ಕಾರಣಗಳು ತಿಳಿದು ಬಂದಿಲ್ಲ. ಆದರೆ, ಕನ್ನಡದ ಜಾಯಮಾನಕ್ಕೆ ತಕ್ಕಂತೆ ಅನುಸ್ಪಂದಿಸುವ ಕಾರ್ಯದಲ್ಲಿ ಕೆಲವೆಡೆ ಪುರೂವರಸ್ ಎಂದು, ಇನ್ನೂ ಕೆಲವೆಡೆ ಪುರೂರವಸ್ಸ ಎಂದು, ಮತ್ತೂ ಕೆಲವೆಡೆ ಪುರೂರವ ಎಂದು ಪ್ರಯೋಗಿಸಲಾಗಿದೆ.

(ಸಶೇಷ)

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

**– ಅನು: ಜಾನ್ವಿ**

### 34

### ಎರಡನೆಯ ಸರಣಿ:
### ಭಾಗ–1
### ಜ್ಞಾನ, ಭಕ್ತಿ ಮತ್ತು ಕರ್ಮಗಳ ಸಮನ್ವಯ
### ಅಧ್ಯಾಯ – 1
### ದ್ವಿವಿಧ ಪ್ರಕೃತಿ (1/2)

ಸಾಂಖ್ಯರು ಹೇಳುವಂತೆ ಅವ್ಯಕ್ತವೇ ಪರಮ ಶ್ರೇಷ್ಠ ಪ್ರಕೃತಿಯೂ ಅಲ್ಲ. ಈ ಸೃಷ್ಟಿಯ ಬೀಜ ರೂಪವಾಗಿ ಆರಂಭದಲ್ಲಿನ ಪ್ರಾಥಮಿಕ ಸ್ಥಿತಿ ಅಂದರೆ ಎಂಟು ವಿಧ ಮೂಲ ಪ್ರಕೃತಿ ಎಂದು ಸಾಂಖ್ಯರು ಹೇಳುತ್ತಾರೆ; ಇದೇ ಮೂಲ ಪ್ರಕೃತಿಯ ಶಕ್ತಿಯಾಗಿದ್ದು, ಇದರ ಮೂಲಕವೇ ಅಸಂಖ್ಯಾತ ಜಾಗತಿಕ ಶಕ್ತಿಗಳು ಉತ್ಪನ್ನವಾಗುವವು ಎಂದು ಸಾಂಖ್ಯರು ಹೇಳುತ್ತಾರೆ. ಆದರೆ ಈ ರೀತಿ, ಅವ್ಯಕ್ತವೇ ಮೂಲ, ಅದೇ ಅಭಿವ್ಯಕ್ತವಾಗದಿರುವ ತಟಸ್ಥ ಪುರುಷನ ಪರಾ ಪ್ರಕೃತಿ ಅಥವಾ ಮಹಾಶಕ್ತಿ, ಇದರ ಮೂಲಕವೇ ಸಮಸ್ತ ಚರಾಚರ ಜಗತ್ತು ಉತ್ಪನ್ನವಾಗುವುದು ಮತ್ತು ವಿಲಯನ ಹೊಂದುವುದು ಎಂದು ಹೇಳುವ ಈ ಸಾಂಖ್ಯ ವಾದವು ಪೂರ್ಣತಃ ತೃಪ್ತಿಕರವಾಗಿಲ್ಲ. ಇದು ಅಲ್ಲವೆಂತಲ್ಲ, ಆದರೆ ಇಷ್ಟೇ ಅಲ್ಲ, ಪರಾ ಪ್ರಕೃತಿ ಇದಕ್ಕಿಂತ ಹೆಚ್ಚಿನ ತತ್ತ್ವವಾಗಿದೆ. ಆಧ್ಯಾತ್ಮಿಕ ಸ್ಥಾಯಿಯಲ್ಲಿ ಇದೂ ಕೂಡ ಒಂದು ಭಾಗ ಅಷ್ಟೇ. ವಾಸ್ತವವಾಗಿ, ಜೀವಾತ್ಮ ಹಾಗೂ ಜಗತ್ತಿನ ಹಿಂದೆ ಈ ಪರಮ ಪುರುಷನ ಸಮಸ್ತ ಪ್ರಜ್ಞಾ–ಶಕ್ತಿ ಅಥವಾ ಚಿತ್ ಶಕ್ತಿ ಅವಶ್ಯವಾಗಿ ಇದ್ದೇ ಇರುವುದು. ನಿರ್ವಿಕಾರಿಯಾದ ಆತ್ಮನಲ್ಲಿ ಇದು, ಪ್ರಕೃತಿಯು ಅಂತರ್ಗತವಾಗಿ ಇರುತ್ತದೆ. ಅದು ಸದಾ ಕಾಲವೂ ಶಾಶ್ವತವಾಗಿ ಇರುತ್ತದೆ, ಆದರೆ ಅದು ಕ್ರಿಯಾ ನಿವೃತ್ತ ಸ್ಥಿತಿಯಲ್ಲಿ ನಿಶ್ಚಲವಾದ ರೂಪದಲ್ಲಿ ಇರುತ್ತದೆ. ಇನ್ನು ಜಗತ್ತಿನಲ್ಲಿ ಹಾಗೂ ಸಕ್ರಿಯ ಜೀವನಲ್ಲಿ ಮಾತ್ರ ಪ್ರವೃತ್ತಿ ರೂಪದಲ್ಲಿ ಪ್ರಕಟವಾಗುತ್ತದೆ. ತನ್ನ ಕ್ರಿಯಾಶೀಲ ಅಸ್ತಿತ್ವದಿಂದಾಗಿ ಪ್ರಕೃತಿಯು ಜೀವಾತ್ಮನಲ್ಲಿ ಅಸ್ತಿತ್ವದ ಎಲ್ಲ ಸ್ತರಗಳನ್ನು ಒಂದೊಂದಾಗಿ ಪ್ರಕಟಿಸುತ್ತ ಹೋಗುತ್ತದೆ. ಅದೇ ಮೂಲ ರೂಪದ ವಾಸ್ತವಿಕ ಸತ್ಯ, ವ್ಯಕ್ತಿ ನಿಷ್ಠ ಮತ್ತು ಆತ್ಮ ನಿಷ್ಠ ಎಲ್ಲ

ವ್ಯವಹಾರಗಳಲ್ಲಿಯೂ ಇದು ಸಾನಿಧ್ಯದ ರೂಪದಲ್ಲಿ, ಶಾಂತ ಇರುವಿಕೆಯ ರೂಪದಲ್ಲಿ ಸನ್ನಿಹಿತವಾಗಿರುತ್ತದೆ. ಇದು ಪ್ರಕೃತಿಯ ಶಕ್ತಿಯ ಮೂಲ ಧರ್ಮ ಅಥವಾ ಸ್ವಭಾವವಾಗಿದೆ. ಮುಂದಿನ ಎಲ್ಲ ಪರಿವರ್ತನೆಗಳಿಗೆ, ದೃಶ್ಯ ಪ್ರಪಂಚದ ಘಟನಾವಳಿಗಳಿಗೆ ಎಲ್ಲದಕ್ಕೂ ಈ ಪ್ರಕೃತಿಯ ಶಕ್ತಿಯೇ ಪೋಷಕ ತತ್ತ್ವವಾಗಿರುವುದು. ಇನ್ನು ಸತ್ವ ರಜ ತಮಾದಿ ತ್ರಿಗುಣಗಳ ಸಾಮ್ಯವಸ್ಥೆ ಎಂಬುದು ಕೇವಲ ಗುಣ ಸ್ವರೂಪದ ಕ್ರೀಡೆ (ಅಥವಾ ಲೀಲೆ) ಅಷ್ಟೇ. ಎಲ್ಲ ವಿವಿಧ ರೂಪಾಕಾರಗಳ ಚಲನೆ, ಕ್ರಿಯಾಶೀಲತೆ, ಈ ಮಾನಸಿಕ, ಸಂವೇದನಾತ್ಮಕ, ಬೌದ್ಧಿಕ ಪ್ರಯತ್ನವೆಲ್ಲವೂ ಕೇವಲ ತೋರಿಕೆ ಅಷ್ಟೇ; ಈ ಆಧ್ಯಾತ್ಮಿಕ ಶಕ್ತಿ ಹಾಗೂ ಸತ್ತೆಯ ಸಾಮರ್ಥ್ಯ ಇರದೇ ಹೋಗಿದ್ದರೆ ಇದಾವುದೂ ಇರುತ್ತಲೇ ಇರಲಿಲ್ಲ. ಇದೆಲ್ಲವೂ ಆಧ್ಯಾತ್ಮಿಕ ಹಾಗೂ ಸತ್ತೆಯ ಶಕ್ತಿಯಿಂದಲೇ ಹುಟ್ಟುತ್ತದೆ. ಅದರಿಂದಾಗಿಯೇ ಸ್ಥಿತಿಯಲ್ಲಿ ಮುಂದುವರಿಯುತ್ತದೆ ಮತ್ತು ಕೇವಲ ಅದರಿಂದಾಗಿಯೇ ಇದೆ. ನಾವು ಕೇವಲ ಬಾಹ್ಯ ತೋರಿಕೆಯ ಮೇಲಷ್ಟೇ ಗಮನ ಹರಿಸಿ, ಅಷ್ಟನ್ನೇ ಗ್ರಹಿಸಿದರೆ, ನಮ್ಮ ಕ್ರಿಯಾಶೀಲ ಅಸ್ತಿತ್ವದ ಬಗ್ಗೆ ನಮಗೆ ನಿಜವಾದ ಅರಿವು ಆಗುವುದೇ ಇಲ್ಲ. ನಿಜವಾದ ಸತ್ಯವೆಂದರೆ ಈ ಆಧ್ಯಾತ್ಮಿಕ ಶಕ್ತಿಯೇ, ಸತ್ತೆಯ ದೈವೀ ಶಕ್ತಿಯೇ. ಪ್ರತಿ ವಸ್ತುಗಳಲ್ಲಿ ಅವಶ್ಯವಾಗಿ, ಸಾರಭೂತವಾಗಿ ಇರುವ ಚೈತನ್ಯದ ಗುಣ ಅಥವಾ ಎಲ್ಲ ವಸ್ತುಗಳೂ ಅಸ್ತಿತ್ವದಲ್ಲಿ ಬರಲು ಕಾರಣವಾದ ಬೀಜಭೂತ ದಿವ್ಯ ಶಕ್ತಿಯೇ ನಿಜವಾದ ಸತ್ಯ – ಜಗತ್ತಿನ ಎಲ್ಲ ಚಟುವಟಿಕೆಗಳಿಗೂ ಆ ಶಕ್ತಿಯೇ ಮೂಲ ಕಾರಣ ಮತ್ತು ಆಧಾರ. ಆ ಸತ್ಯ, ಆ ಶಕ್ತಿ ನಮಗೆ ಸಿದ್ಧಿಸಿದರೆ, ಅಥವಾ ಅದನ್ನರಿತರೆ ನಮ್ಮ ಅಸ್ತಿತ್ವದ ಪರಿವರ್ತನೆಯ, ಪರಿಣಮನ ಬಗ್ಗೆ ನಿಜವಾದ ಅರಿವು ಮೂಡುವುದು, ಅದರ ನಿಯಮ ಅರ್ಥವಾಗುವುದು. ನಮ್ಮ ಜೀವನದ ದಿವ್ಯ ಸತ್ಯದ ಅನಾವರಣವಾಗುವುದು. ಕೇವಲ ಅಜ್ಞಾನದಲ್ಲಿ ಮಾತ್ರ ಅಲ್ಲ ಜ್ಞಾನದಲ್ಲೂ ಸಹ ಅದರ ಪ್ರಕ್ರಿಯೆಯ ಸ್ಪಷ್ಟ ಅರಿವು ಮೂಡುವುದು.

ಗೀತೆಯನ್ನು ಈ ರೀತಿ ಅರ್ಥೈಸುವುದೆಂದರೆ ಅದನ್ನು ಆಧುನಿಕ ವಿಚಾರಧಾರೆಗೆ ಅಳವಡಿಸಿ ಅಧ್ಯಯನ ಮಾಡಿದಂತೆ. ಇದು ಅವಶ್ಯಕ ಕೂಡ. ಅಷ್ಟೇ ಅಲ್ಲ ಪರಾ ಪ್ರಕೃತಿಯನ್ನು ಕುರಿತು ಗೀತೆ ಹೇಳುವುದನ್ನು ನೋಡಿದರೆ ಅದರ ನಿಜವಾದ, ಪ್ರಾಯೋಗಿಕ ಅರ್ಥ ಕೂಡ ಇದೇ ಆಗಿದೆ ಎಂಬುದು ನಿಚ್ಚಳವಾಗುತ್ತದೆ. ಏಕೆಂದರೆ ಈ ಪರಾ ಪ್ರಕೃತಿಯು ಸ್ವಯಂ ನನ್ನ ಪ್ರಕೃತಿ ಅಥವಾ ಗುಣಧರ್ಮವಾಗಿದೆ. ಅದು ನಾನೇ ಎಂದು ಕೃಷ್ಣನೇ ಹೇಳುತ್ತಾನೆ. ಪ್ರಕೃತಿ ಮೇ

ಪರಾಂ (7/5) ಇಲ್ಲಿ "ನಾನು" ಅನ್ನುವುದು ಪುರುಷೋತ್ತಮನ ಸೂಚಕ, ವಿಶ್ವೋತ್ತೀರ್ಣ ವಿಶ್ವಾತ್ಮಕ ಚೈತನ್ಯ ತತ್ತ್ವದ ದ್ಯೋತಕ. ಆತ್ಮ ತತ್ತ್ವದ ಮೂಲ ಸನಾತನ ಪ್ರಕೃತಿ, ಸರ್ವಾತೀತ ಸರ್ವಜನನ ಶಕ್ತಿಯೇ ಪರಾ ಪ್ರಕೃತಿ. ಈ ವಿಶ್ವದ ಉಗಮ ಅಂದರೆ ಕ್ರಿಯಾಶೀಲ ಶಕ್ತಿಯ ಚಲನೆಯ ಆರಂಭವನ್ನು ಕುರಿತು ಹೇಳುತ್ತ ಕೃಷ್ಣ ನುಡಿಯುತ್ತಾನೆ "ಪರಾ ಪ್ರಕೃತಿಯು ಸಕಲ ಚರಾಚರ ಜೀವ ರಾಶಿಗಳ ಯೋನಿ". ಇದೇ ಶ್ಲೋಕದ ಉತ್ತರಾರ್ಧದಲ್ಲಿ ನಾನೇ ಸಮಸ್ತ ವಿಶ್ವದ ಉತ್ಪತ್ತಿ, ನಾನೇ ಅದರ ಪ್ರಳಯ ಕೂಡ, ನನಗಿಂತ ಶ್ರೇಷ್ಠವಾದುದು ಎಲ್ಲಿಯೂ ಇಲ್ಲ" (7/6) ಎಂದು ಸ್ಪಷ್ಟವಾಗಿ ಘೋಷಿಸುತ್ತಾನೆ. ಇಲ್ಲಿ ಪರಮೋಚ್ಚ ತತ್ತ್ವ ಸ್ವರೂಪನಾದ ಪುರುಷೋತ್ತಮನನ್ನು ಹಾಗೂ ಪರಾ ಪ್ರಕೃತಿಯನ್ನು ಸ್ಪಷ್ಟವಾದ ಶಬ್ದಗಳಲ್ಲಿ ವಿವರಿಸಲಾಗಿದೆ. ಸತ್ಯ ಒಂದೇ, ಅದನ್ನು ಅರಿಯಲು ಇರುವ ಎರಡು ಮಾರ್ಗಗಳನ್ನು ಸಮಾಲೋಚಿಸಲಾಗಿದೆ, "ನಾನೇ ಈ ದೃಶ್ಯ ಪ್ರಪಂಚದ ಜನಕನೂ ಹೌದು ಅಂತಕನೂ ಹೌದು", ಭಗವಂತನ ಈ ಪರಾ ಪ್ರಕೃತಿಯೇ ಅವನ ಅನಂತ ಪ್ರಜ್ಞೆ, ಅನಂತ ಶಕ್ತಿ, ಅನಂತ ಸತ್ತೆಯ (ಅಸ್ತಿತ್ವದ) ಸಂಕಲ್ಪ. ಎಲ್ಲವೂ ಈಶ್ವರನ ಅನಂತ ಪ್ರಜ್ಞೆಯೂ, ಶ್ರೇಷ್ಠ ದೈವೀ ಕ್ರಿಯೆ ಕಾರ್ಯವೂ ಆಗಿದೆ. ಹುಟ್ಟು ಅಥವಾ ಜನನವೆನ್ನುವುದು ಈ ಪ್ರಜ್ಞಾ ಶಕ್ತಿಯ ವಿಕಾಸ, ಆತ್ಮದಲ್ಲಿರುವ ಚಿತ್ ಶಕ್ತಿಯ ಪ್ರಕಟನೆ, "ಪರಾ ಪ್ರಕೃತಿ ಜೀವಭೂತಾ ಮತ್ತು ಕ್ಷರ ಅಥವಾ ಬದಲಾವಣೆ ಹೊಂದುವ ವಿಶ್ವದಲ್ಲಿನ ಚಟುವಟಿಕೆಯೇ ಅದರ ಜನನ, ಆ ಚಟುವಟಿಕೆಯ ನಿವೃತ್ತಿಯೇ ಪ್ರಳಯ ಅಥವಾ ಅಂತ್ಯ ಅಥವಾ ಸಾವು. ಆ ಪರಾ ಶಕ್ತಿಯು ಮೂಲತಃ ಅವಿಕಾರಿ, ಶುದ್ಧ ನಿರಂಜನವಾಗಿದ್ದರೂ. ಪುರುಷೋತ್ತಮನ ಕೇಂದ್ರಿತಗೊಂಡ ಶಕ್ತಿಯಾಗಿದ್ದರೂ ಸಹ ವಿಶ್ವದಲ್ಲಿ ಬಂದಾಗ "ವಿಕಾರ ಯುಕ್ತ"ವಾಗಿ ಬದಲಾಗುತ್ತದೆ. ಅಪರಿವರ್ತನಾಶೀಲ ಶುದ್ಧ ಶಕ್ತಿಯನ್ನೇ ಪರಾ ಪ್ರಕೃತಿ ಎಂದು ಕರೆಯುವರು.

ಈ ಪರಾ ಪ್ರಕೃತಿಯು ಸ್ವಯಂಭೂ ಪರಮಾರ್ಥ ಸತ್ತೆಯ ಅಥವಾ ಪುರುಷನ ಅನಂತ, ಕಾಲಾತೀತ ಪ್ರಜ್ಞಾ ಶಕ್ತಿಯಾಗಿದೆ. ಇದರ ಮೂಲಕವೇ ವಿಶ್ವದಲ್ಲಿನ ಸಕಲ ಚರಾಚರ ವಸ್ತುಗಳು ಸೃಷ್ಟಿಯಾಗಿದೆ, ಕಾಲಾತೀತವಾಗಿದ್ದರೂ ಅವು ಕಾಲದಲ್ಲಿ ಪ್ರಕಟವಾಗಿವೆ. ಈ ವೈವಿಧ್ಯಮಯ ನಾನಾತ್ಮದ ಪ್ರಪಂಚಕ್ಕೆ ಅಥವಾ ಸಂಭೂತಿಗೆ ಆಧ್ಯಾತ್ಮಿಕ ಆಧಾರವನ್ನು ಒದಗಿಸಿಕೊಡಲು ಪರಾ ಪ್ರಕೃತಿಯು ತಾನೇ "ಜೀವ" ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಇದನ್ನೇ ಸ್ವಲ್ಪ ಬೇರೆ ರೀತಿ ಹೇಳುವುದಾದರೆ, ಪುರುಷೋತ್ತಮನ ಶಾಶ್ವತವಾದ ಅನಂತ ಜೀವ ಅಥವಾ ಆತ್ಮ ರೂಪವು ವಿಶ್ವದ

ಸಕಲ ರೂಪಾಕಾರಗಳಲ್ಲಿ ವೈಯಕ್ತಿಕವಾಗಿ, ಪ್ರತ್ಯೇಕವಾಗಿ ಆಧ್ಯಾತ್ಮಿಕ ಸತ್ತೆಯಾಗಿ ಪ್ರಕಟವಾಗುತ್ತದೆ. ಇಡೀ ವಿಶ್ವದ ಸಮಸ್ತ ಅಸ್ತಿತ್ವವು ಏಕೈಕವಾಗಿರುವ ಅವಿಭಾಜ್ಯ ಆತ್ಮದ ಜೀವದ ಜೊತೆಗೆ ಒಂದಾಗಿರುತ್ತದೆ. ಎಲ್ಲವೂ ಅದರ ವ್ಯಕ್ತಿತ್ವ, ಕ್ರಿಯೆ, ಕಾರ್ಯ, ಏಕೈಕ ಪುರುಷನ ಅನೇಕ ಪ್ರಕಟನೆಗಳಿಗೆ ಪೋಷಕವಾಗಿ, ಆಧಾರವಾಗಿ ಇರುತ್ತದೆ. ಆದರೆ ನಾವಿಲ್ಲಿ ತುಸು ಎಚ್ಚರಿಕೆ ವಹಿಸಬೇಕು: ಈ ಪರಾ ಪ್ರಕೃತಿ ಮತ್ತು ಕಾಲದಲ್ಲಿ ಪ್ರಕಟವಾದ ಜೀವ ಎರಡೂ ಒಂದೇ ಆದರೂ ಸಮಾನ ಅಥವಾ ಏಕರೂಪವೆಂದು ಭಾವಿಸಬಾರದು. ಏಕೆಂದರೆ ಜೀವ ಅನ್ನುವುದು ಕೇವಲ ಸಂಭೂತಿಯ ಸ್ವಭಾವದ್ದೇ ವಿನಃ ಸ್ಥಾಯಿ ಪ್ರಕೃತಿಯ ಸತ್ತೆಯಲ್ಲ. ಅಂದರೆ ಜೀವವು ನಿತ್ಯ ಪರಿವರ್ತನೆಯ ಪ್ರಕಟನೆಯಾದರೆ ಆತ್ಮವು ಅವಿಕಾರಿ ಹಾಗೂ ಪರಿವರ್ತನಾರಹಿತ ಸ್ಥಾಯಿ ಸ್ವರೂಪದ್ದಾಗಿದೆ. ಈ ಚಲನೆಯು ಸ್ಥಾಣು ಹಾಗೂ ಶುದ್ಧ ಸ್ವರೂಪದ ಆತ್ಮ ತತ್ತ್ವ ಅಥವಾ ಪರಾ ಚೈತನ್ಯದ ಮೂಲ ಪ್ರಕೃತಿ (ಸ್ವಭಾವ) ಅಲ್ಲವೆಂಬುದನ್ನು ಮರೆಯಬಾರದು. ಅಷ್ಟೇ ಅಲ್ಲ, ಇನ್ನೂ ವಿಶೇಷವೇನೆಂದರೆ, ಕಾಲದಲ್ಲಿ (ಕಾಲದಲ್ಲಿ ಪ್ರಕಟವಾಗಿದ್ದರೂ) ಸಹ ಅದು ಅಧಿಕವೇ ಆಗಿದೆ. ಏಕೆಂದರೆ, ಅದಿಲ್ಲದೇ ಪ್ರಕೃತಿಯಲ್ಲಿ ಅದು ಕೇವಲ ಅನೇಕತ್ವ, ವಿಕಾರಿತ್ವ, ಪರಿವರ್ತನಶೀಲತೆ ಅಷ್ಟೇ ಆಗಿದ್ದರೆ ಈ ವಿಶ್ವದಲ್ಲಿ ಏಕತೆಯ ಮೂಲಭೂತ ಸ್ವಭಾವ ಧರ್ಮವೇ ಇರುತ್ತಿರಲಿಲ್ಲ. ಗೀತೆಯು ಹೀಗೆ, ಹೇಳುವುದಿಲ್ಲ; ಪರಾ ಪ್ರಕೃತಿಯೇ ಮೂಲತಃ ಅಥವಾ ಸಾರಭೂತವಾಗಿ ಜೀವವಾಗಿದೆ ಎಂದು ಗೀತೆ ಹೇಳುವುದಿಲ್ಲ. ಆದರೆ ಅದು "ಜೀವ ಭೂತದ" ರೂಪಧಾರಣ ಮಾಡಿದೆ ಎಂಬುದು ಗೀತೆಯ ಅಭಿಪ್ರಾಯ. ಇದರರ್ಥವೇನೆಂದರೆ ಅದು "ಜೀವ" ಸ್ವರೂಪವಾಗಿ ಪ್ರಕಟವಾಗುವ ಪೂರ್ವದಲ್ಲಿ ಬೇರೆ ಯಾವುದೋ ಹಿರಿದಾದ, ಶ್ರೇಷ್ಠವಾದ ತತ್ತ್ವವಾಗಿತ್ತು ಎಂಬ ಅರ್ಥ ಬರುತ್ತದೆ. ಗೀತೆ ಇದನ್ನೇ ಸ್ಪಷ್ಟ ಪಡಿಸುತ್ತ ಮುಂದುವರಿದು ಹೇಳುವಂತೆ, ಜೀವವೇ ಪ್ರಕೃತಿಯ ಒಡೆಯ ಅಥವಾ ಈಶ್ವರ, ಆದರೆ ಅದು ಪ್ರಕಟವಾದಾಗ ಮಾತ್ರ ಆಂಶಿಕವಾಗಿಯೇ ಇರುತ್ತದೆ, "ಮಮೈವಾಂಶೋ". ವಿಶ್ವದಲ್ಲಿರುವ ಸಮಸ್ತ ಕೊಟ್ಯಾವಧಿ ಜೀವಿಗಳನ್ನು ಅಥವಾ ಬ್ರಹ್ಮಾಂಡದಲ್ಲಿರಬಹುದಾದ ಅಸಂಖ್ಯಾತ ವಿಶ್ವಗಳ ಎಲ್ಲ ಜೀವಿಗಳನ್ನು ಸೇರಿಸಿದರೂ "ಸಮಗ್ರ ಬ್ರಹ್ಮ" ಆಗಲಾರದು, ಆಗಲೂ ಆ ಅಸಂಖ್ಯಾತ ಪ್ರಕಟನೆಯು ಆಂಶಿಕ ಪ್ರಕಟನೆಯಾಗಿಯೇ ಇರುವುದು. ಅವೆಲ್ಲವುಗಳಲ್ಲಿ ಬ್ರಹ್ಮನು ಅವಿಭಾಜ್ಯ ಸತ್ತೆಯಾಗಿದ್ದರೂ ವಿಭಕ್ತನಾಗಿ ವಾಸವಾಗಿರುವಂತೆ ತೋರುವುದು, ಅವೆಲ್ಲವುಗಳಲ್ಲಿ ಅವಿಭಾಜ್ಯನಾದ ಏಕೈಕ

ಸದ್ವಸ್ತು ಪರಬ್ರಹ್ಮನಿರುವುದು ನಿಜ ಆದರೆ ಅವನು ವಿಭಕ್ತವಾಗಿರುವುದಿಲ್ಲ, ಹಾಗೆ ತೋರಿದರೂ ಅವನು ಅವಿಭಕ್ತನಾಗಿಯೇ ಇರುತ್ತಾನೆ. "ಅವಿಭಕ್ತಂ ಚ ಭೂತೇಷು ವಿಭಕ್ತಮಿವ ಚ ಸ್ಥಿತಮ್" ಏಕತ್ವವೆನ್ನುವುದು ಹೆಚ್ಚಿನ ಅಥವಾ ಹಿರಿದಾದ ಸತ್ಯ, ಅನೇಕತ್ವವೆನ್ನುವುದು ಕಿರಿದಾದ ಸತ್ಯ; ಎರಡೂ ಸತ್ಯವೇ ಎರಡರ ಪೈಕಿ ಯಾವುದೂ ಮಿಥ್ಯೆಯಲ್ಲ, ಭ್ರಮೆಯಲ್ಲ.

ಯಯೇದಂ ಧಾರ್ಯತೇ ಜಗತ್, ಆಧ್ಯಾತ್ಮಿಕ ಏಕತೆಯ ಸ್ವಭಾವದಿಂದಲೇ ಈ ಜಗತ್ತು ನಿಂತಿದೆ, ಧಾರಣ ಹೊಂದಿದೆ. ಯೇತದ್ ಯೋನಿಂ ಭೂತಾನಿ ಸರ್ವಾಣಿ. ಸಕಲ ಸಂಭೂತಿ ಜೀವಿಗಳು ಈ ಆಧ್ಯಾತ್ಮಿಕ ಏಕತೆಯ ಶಕ್ತಿಯಿಂದಲೇ ಜನಿಸಿವೆ. ಅಹಂ ಕೃತ್ಸ್ನಸ್ಯ ಜಗತಃ ಪ್ರಭಾವಃ ಪ್ರಳಯ ಸ್ತಥಾ. ಆ ಪರಮ ಏಕತೆಯಲ್ಲಿಯೇ ಸಮಸ್ತ ಬ್ರಹ್ಮಾಂಡವು ವಿಲಯನ ಹೊಂದುತ್ತದೆ (7/5, 6). ಈ ಜೀವ ಪ್ರಕಟನೆಯಲ್ಲಿ ಅಂದರೆ ಆತ್ಮದಲ್ಲಿ ಧಾರಣವಾಗಿರುವ, ಜಗತ್ತಿನಲ್ಲಿ ಸಕ್ರಿಯವಾಗಿ ಪ್ರಕಟವಾಗಿರುವ ಮತ್ತು ಅದೇ ನಿಶ್ಚಲ ಸ್ಥಿತಿಯಲ್ಲಿ ವಿಲಯ ಹೊಂದಿ ಕೆಲಕಾಲ ತಂಗಿರುವ "ಜೀವವು" ಈ ಅನೇಕ ವೈವಿಧ್ಯಮಯ ಜಗತ್ತಿನ ಆಧಾರವಾಗಿದೆ. ಅದನ್ನು ಅನೇಕ ಜೀವ ಎಂದು ಕರೆಯಬಹುದು ಅಥವಾ ಅನೇಕತೆಯ ಆತ್ಮವೇ ನಮಗಿಲ್ಲಿ ಅನುಭವ ವೇದ್ಯವಾಗುತ್ತದೆ ಅಂತಲೂ ಹೇಳಬಹುದು. ಜೀವವು, ಅನೇಕ ಜೀವವು ತನ್ನ ಸತ್ತಾತ್ಮಕ ಅಸ್ತಿತ್ವದಲ್ಲಿ ಏಕಮೇವ ಬ್ರಹ್ಮ ತತ್ತ್ವದೊಡನೆ ಒಂದಾಗಿದೆ. ಅವುಗಳಲ್ಲಿನ ವ್ಯತ್ಯಾಸವೇನೆಂದರೆ ಏಕವಾಗಿರುವ ಮೂಲ ತತ್ತ್ವವು ಭಾಗಶಃ ವೈಯಕ್ತಿಕ ಅಥವಾ ಪ್ರತ್ಯೇಕತೆಯ ರೂಪದಲ್ಲಿ ಪ್ರಕಟವಾದ ಒಂದೇ ಶಕ್ತಿಯಾಗಿದೆ. ಕಾರ್ಯದಲ್ಲಿ ಭಿನ್ನವಾಗಿ ತೋರಿದರೂ, ಅದು ಒಂದೇ ಆಗಿದೆ. ಇದೇ ಅವುಗಳ ನಡುವಿನ ವ್ಯತ್ಯಾಸ ಮತ್ತು ಏಕಾತ್ಮತೆ. ಆದ್ದರಿಂದ ಚರಾಚರ ಸಕಲ ವಸ್ತುಗಳೂ ಆದ್ಯಂತವಾಗಿ ಹಾಗೂ ತಾತ್ವಿಕವಾಗಿ ಆತ್ಮ ಚೈತನ್ಯಮಯವೇ ಆಗಿವೆ. ಅವೆಲ್ಲವುಗಳ ಮೂಲಭೂತ ಪ್ರಕೃತಿಯು ಆತ್ಮ ಪ್ರಕೃತಿಯೇ ಆಗಿದೆ, ಅವುಗಳ ನಿಮ್ನ ಸ್ತರದಲ್ಲಿ, ಬಾಹ್ಯದಲ್ಲಿ ಅವು ತೀರ ಬೇರೆ ಎಂಬಂತೆ ತೋರಿದರೂ, ಅಂದರೆ ಮನಃ, ಪ್ರಾಣ, ಶರೀರ, ಬುದ್ಧಿ, ಇಂದ್ರೀಯಗಳು ಮತ್ತು ಅಹಂನಲ್ಲಿ ತೀರ ವಿಭಿನ್ನವೆಂಬಂತೆ ತೋರಿದರೂ, ಅದೆಲ್ಲವೂ ನಶ್ವರ ತೋರಿಕೆಯ ಪ್ರಕಟನೆಯೇ ಹೊರತು ನಮ್ಮ ಸತ್ತೆಯ, ಪ್ರಕೃತಿಯ ಅತ್ಯವಶ್ಯ ಸತ್ಯಗಳಲ್ಲ.

ಹೀಗೆ ಪುರುಷೋತ್ತಮನ ಪರಾ ಪ್ರಕೃತಿಯು ನಮಗೆ ಎರಡು ಸಂಗತಿಗಳನ್ನು – ವಿಶ್ವಾತೀತವಾದ ಪರಾ ಸತ್ತೆಯ ಮೂಲ ಸತ್ಯ ಮತ್ತು ಶಕ್ತಿ ಹಾಗೂ ವಿಶ್ವದಲ್ಲಿನ

ಅನೇಕ ಸಂಭೂತಿಗಳ ಪ್ರಕಟನೆಗೆ ಅವಶ್ಯವಾಗಿರುವ ಆಧ್ಯಾತ್ಮಿಕ ಸತ್ಯ – ಒದಗಿಸುತ್ತದೆ. ಸರಿ, ಆದರೆ ಈ ಪರಾ ಪ್ರಕೃತಿ ಮತ್ತು ನಿಮ್ಮ ಲೌಕಿಕ ಜಗತ್ತಿನ ನಡುವೆ ಜೋಡಣೆ ಇದೆಯೇ? ಇದ್ದರೆ ಯಾವುದು? ಎಲ್ಲಿದೆ? "ಇದೆ, ನನ್ನಲ್ಲಿ ಇದೆ, ನಾನೇ ಅವುಗಳ ನಡುವಿನ ಕೊಂಡಿ" ಎಂದು ಕೃಷ್ಣ ಹೇಳುತ್ತಾನೆ. "ಮೆಯಿ ಸರ್ವಮಿದಂ ಪ್ರೋತಮ್" (7/7) ದೃಶ್ಯ ಜಗದ, ಚಲನಶೀಲ ವಿಶ್ವದ ಏಕತೆಯನ್ನು ಕುರಿತು ಹೇಳುವಾಗ ಉಪನಿಷತ್ತು ಹೇಳುವ ಪದವೇನೆಂದರೆ "ಸೂತ್ರೇ ಮಣಿಗಣಾ ಇವ (7/7) ಎಲ್ಲವೂ ನನ್ನಲ್ಲಿ ದಾರದಲ್ಲಿ ಪೋಣಿಸಿದ ಮಣಿಗಳಂತೆ ಏಕತ್ರಿತವಾಗಿವೆ. ಇದೊಂದು ಸಾದೃಶ ಚಿತ್ರಣವಷ್ಟೇ ಹೊರತು ಸೂತ್ರ, ಮಣಿಗಳು, ಪೋಣಿಸುವುದು ಹೀಗೆಲ್ಲ ಎಳೆದು ಜಗ್ಗಾಡುವಂತಿಲ್ಲ. ಈ ದೃಷ್ಟಾಂತವು ಹೇಳ ಬಯಸುವ ಅರ್ಥದ ಕಡೆಗೆ ಗಮನ ಕೊಡಬೇಕು. ದೃಶ್ಯ ಜಗದ ಸಮಸ್ತ ಜೀವರಾಶಿಗಳ, ಹಾಗೂ ಸಕಲ ವಸ್ತುಗಳ ನಡುವೆ ಪರಸ್ಪರ ಸಂಬಂಧವನ್ನು ಕಾಪಾಡಲು ಪರಮ ಪುರುಷನ ಪರಾ ಪ್ರಕೃತಿಯು ಅವನ ಸತ್ತೆಯ ಸರ್ವಶಕ್ತ, ಸರ್ವಾಂತರ್ಯಾಮಿ, ಸರ್ವಜ್ಞ, ಸ್ವಯಂಭೂ ಶಕ್ತಿಯು ಅವನ್ನೆಲ್ಲ ಭೇದಿಸಿ, ಎಲ್ಲದಕ್ಕೂ ಆಧಾರವಾಗಿ ನಿಂತು ಎಲ್ಲವನ್ನೂ ಅಭಿವ್ಯಕ್ತಿಯ ವ್ಯವಸ್ಥೆಯಲ್ಲಿ ಸುಸ್ಥಿರಗೊಳಿಸುತ್ತದೆ. ಈ ಪರಾ ಶಕ್ತಿಯು ಎಲ್ಲದರಲ್ಲೂ ತಾನೇ ಆಗಿ, ಒಂದೇ ಆಗಿ ವ್ಯಕ್ತವಾಗುವುದಲ್ಲವೇ, ಎಲ್ಲದರಲ್ಲೂ ಪ್ರತ್ಯೇಕ "ಜೀವ"ವಾಗಿ ವೈಯಕ್ತಿಕ ಆಧ್ಯಾತ್ಮಿಕ ಸಾರವಾಗಿ ಪ್ರಕಟವಾಗುತ್ತದೆ. ಈ ಜೀವವು ಪ್ರಕೃತಿಯ ಎಲ್ಲ ಗುಣಗಳ ಸಾರಭೂತ ಅಸ್ತಿತ್ವವಾಗಿ ಎಲ್ಲದರಲ್ಲಿ ಪ್ರಕಟವಾಗುತ್ತದೆ. ದೃಶ್ಯ ಪ್ರಪಂಚದ ಎಲ್ಲ ವಸ್ತು, ಜೀವಗಳ ಹಿಂದೆ ಈ ಆಧ್ಯಾತ್ಮಿಕ ಶಕ್ತಿಗಳ ಉಪಸ್ಥಿತಿ ಇದ್ದೇ ಇರುತ್ತದೆ. ಈ ಆಧ್ಯಾತ್ಮಿಕ ತತ್ತ್ವವೆಂದರೆ ತ್ರಿಗುಣಗಳೆಂದು ಭಾವಿಸಬಾರದು. ತ್ರಿಗುಣಗಳು ಪ್ರಕಟ ವಿಶ್ವದ ಕಾರ್ಯಕಾರೀ ಗುಣಗಳೇ ಹೊರತು ಆಧ್ಯಾತ್ಮಿಕ ತತ್ತ್ವಗಳಲ್ಲ.

ಆಧ್ಯಾತ್ಮಿಕ ತತ್ತ್ವವು ಎಲ್ಲದರ ಅಂತಸ್ಥ ಅಥವಾ ಅಂತರ್ಗತ ಆತ್ಮ ತತ್ತ್ವವಾಗಿದ್ದು, ಬಾಹ್ಯ ನಾಮ ರೂಪಗಳ ಬದಲಾವಣೆಯ ಜೊತೆ ಬದಲಾಗುವಂತೆ ತೋರಿದರೂ ಬದಲಾಗದ ತತ್ತ್ವವಾಗಿದೆ. ಈ ಆಧ್ಯಾತ್ಮಿಕ ಸತ್ವವು ಎಲ್ಲ ಸಂಭೂತಿಗಳ ಅಥವಾ ಬದಲಾವಣೆಗಳ ಮೂಲಭೂತ ಆಧಾರವಾಗಿದೆ, ಈ ಆಧ್ಯಾತ್ಮಿಕ ಸತ್ವ ಅಥವಾ ಸತ್ಯವೇ ಬಾಹ್ಯ ನಾಮರೂಪ ಆಕಾರಗಳಿಗೆ ದೈವೀ ವಿಶೇಷತೆಯನ್ನು ಕಲ್ಪಿಸುತ್ತದೆ. ತ್ರಿಗುಣಗಳು ಮತ್ತು ಅವುಗಳ ಕಾರ್ಯ ಕೇವಲ ಮೇಲ್ಮೈನಲ್ಲಿ ತೋರುವ ತಾತ್ಕಾಲಿಕ, ಅಲ್ಪಾಯು ಪರಿಣಾಮಗಳು; ತರ್ಕ, ಮನ,

ಇಂದ್ರೀಯ, ಅಹಂ, ಪ್ರಾಣ, ಭೌತಿಕ, ಸಾತ್ವಿಕ ಭಾವ, ರಾಜಸಿಕ ಮತ್ತು ತಾಮಸಿಕ ಇವೆಲ್ಲವೂ ತಾತ್ಕಾಲಿಕ ಪ್ರಕಟನೆಗಳೇ. ಆದರೆ ಇದು ಬದಲಾವಣೆ ಹೊಂದುತ್ತಲೇ ಹೋಗುವ "ಸಂಭೂತಿಗಳಲ್ಲಿರುವ" ಮೂಲ, ಆಪ್ತ ಶಕ್ತಿಯಾಗಿದೆ. ಇದನ್ನೇ "ಸ್ವಭಾವ" ಎಂದು ಕರೆಯುತ್ತೇವೆ. ಈ ಸ್ವಭಾವವೇ ಎಲ್ಲದರ ಸಾರ ಸತ್ವವನ್ನು ಒಳಗೊಂಡಿರುವುದರ ಜೊತೆಗೆ ಅದರ ಚಲನೆಯನ್ನು ಕೂಡ ಸ್ವಭಾವವೇ ರೂಪಿಸುತ್ತದೆ. ಇದು ಪ್ರತಿ ಜೀವಿಯಲ್ಲಿರುವ ವಿಶ್ವಾತೀತನಾದ ಪುರುಷೋತ್ತಮನ ಜೊತೆ ನಿಕಟವಾಗಿರುವ ತತ್ತ್ವವಾಗಿದ್ದು, ಈಶ್ವರ ಅಥವಾ ಸೃಷ್ಟಿಯ ಪ್ರಭುವಿನ ಜೊತೆ ತಾದಾತ್ಮ್ಯ ಹೊಂದಿರುತ್ತದೆ, ಮದ್ ಭಾವಃ. ದೈವೀ ಭಾವ ಮತ್ತು ಸ್ವಭಾವ ಮತ್ತು ತೀವ್ರ ಮೇಲ್ಮೈನಲ್ಲಿರುವ ಭಾವ, ದೈವೀ ಪ್ರಕೃತಿ ಮತ್ತು ಪ್ರತ್ಯೇಕ ವ್ಯಕ್ತಿಯ ವೈಯಕ್ತಿಕ ಪ್ರಕೃತಿ ಹಾಗೂ ವೈಯಕ್ತಿಕ ಪ್ರಕೃತಿ ಮತ್ತು ಪ್ರಾಪಂಚಿಕ ಪ್ರಕೃತಿ ಇವೆಲ್ಲವುಗಳ ನಡುವಿನ ಸಂಬಂಧದಲ್ಲಿ ನಮಗೆ ನಿಮ್ನ ಮತ್ತು ಉನ್ನತ ಅಸ್ತಿತ್ವಗಳ ನಡುವೆ ಇರುವ ಜೋಡಣೆಯ ಕೊಂಡಿಯ ಸ್ಪಷ್ಟ ಕಲ್ಪನೆ ಬರುತ್ತದೆ. ನಿಮ್ನ ಪ್ರಕೃತಿಯ ಶಕ್ತಿಗಳು ಮತ್ತು ಮೌಲ್ಯಗಳು ಕೆಳ ದರ್ಜೆಯವುಗಳಾಗಿದ್ದರೂ ಅವೂ ಸಹ ಪರಾ ಪ್ರಕೃತಿಯ ಪರಿಪೂರ್ಣ ಶಕ್ತಿಗಳಿಂದಲೇ ಜನಿಸಿರುತ್ತವೆ ಮತ್ತು ಅವೆಲ್ಲವೂ ಕೊನೆಗೆ ತಮ್ಮ ಮೂಲ ಸತ್ಯವನ್ನು ಹಾಗೂ ಅವಶ್ಯಂ ಭಾವಿ ನಿಯಮವನ್ನು, ಅವುಗಳ ಅನ್ವಯ ಮತ್ತು ತನ್ಮೂಲಕ ಅವುಗಳ ಕಾರ್ಯಗಳನ್ನು ಕಂಡುಕೊಳ್ಳಲು ಮೂಲ, ಅಮೂರ್ತ, ಶುದ್ಧ, ನಿರಂಜನ ತತ್ತ್ವಕ್ಕೆ ಹೋಗಲೇ ಬೇಕಾಗುತ್ತದೆ. ಅದೇ ರೀತಿ, ಪ್ರಪಂಚದ ಸಂಕೋಲೆಗಳಿಂದ ಬಂಧಿತವಾಗಿ ಸೆರೆಯಲ್ಲಿರುವ, ನಿಮ್ನ ಹಾಗೂ ಕೆಳ ಮಟ್ಟದ ಕ್ರೀಡೆಯಲ್ಲಿ ಸಿಕ್ಕಿ ಹಾಕಿಕೊಂಡಿರುವ ಜೀವವು ಇವೆಲ್ಲವುಗಳಿಂದ ಪಾರಾಗಿ ಹೋಗಬೇಕಾದರೆ, ದೈವಿಕವಾಗಿ ಬದಲಾಗಿ ಪರಿಪೂರ್ಣವಾಗಿ ನಿಲ್ಲಬೇಕಾದರೆ ತನ್ನ ಮೂಲ ಸ್ವಭಾವದ ಅವಶ್ಯಕ ಗುಣಧರ್ಮಕ್ಕೆ ಮರಳಿ ಹೋಗಿ, ತನ್ನ ಸ್ವಭಾವಕ್ಕನುಗುಣವಾಗಿ ಪ್ರಕೃತಿಯ ಮೂಲ ಹಾಗೂ ಉನ್ನತ ನಿಯಮವನ್ನು ಹಾಗೂ ಪರಾತ್ಪರ ಸಂಕಲ್ಪವನ್ನು ಕಂಡುಕೊಳ್ಳಬೇಕಾದರೆ ತನ್ನ ಮೂಲ ಅಸ್ತಿತ್ವಕ್ಕೆ ಮರಳಲೇಬೇಕು. ಅಲ್ಲಿಯೇ ಪರಾತ್ಪರ ಸಂಕಲ್ಪ, ಶಕ್ತಿ, ಕ್ರಿಯಾಶೀಲ ತತ್ತ್ವ ಹಾಗೂ ದೈವೀ ಪ್ರಕೃತಿಯ ಉನ್ನತ ಕಾರ್ಯಾಚರಣೆ ಎಲ್ಲವೂ ಸುಲಭವಾಗಿ ವೇದ್ಯವಾಗುವುದು.

(ಸಶೇಷ)

# ವಾರ್ತಾಪತ್ರ

## ಶ್ರೀ ಅರವಿಂದೋ ಸೊಸೈಟಿ, ರಾಯಚೂರು

ಫೆಬ್ರವರಿ 08 ಮತ್ತು 09, 2025 ರಂದು ರಾಜ್ಯ ಸಮಿತಿ ಕರ್ನಾಟಕ ಮತ್ತು ಶ್ರೀ ಅರವಿಂದೋ ಸೊಸೈಟಿ, ರಾಯಚೂರು, ಮಾನ್ವಿ, ಅಲ್ಕೋಡ್ ಹಾಗೂ ಸಿರವಾರ್ ಕೇಂದ್ರಗಳ ಸಹಯೋಗದಲ್ಲಿ "ರಾಜ್ಯ ಮಟ್ಟದ ಸಮ್ಮೇಳನ ಮತ್ತು ವಿಚಾರ ಸಂಕಿರಣ" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ರಾಜ್ಯಾದ್ಯಂತ 135 ಪ್ರತಿನಿಧಿಸಿದ್ದ ಈ ಕಾರ್ಯಕ್ರಮ ತುಂಬ ಯಶಸ್ವಿಯಾಗಿ ನೆರವೇರಿತು. ದಿನಾಂಕ 08/02/2025 ರಂದು ಡಾ॥ ಭೀಡ ಅವರ "ಸಾವಿತ್ರಿ – ಭಾಗ 1: ಹೊತ್ತಿಗೆ 2: ಸರ್ಗ 1 ರಿಂದ 5" ಲೋಕಾರ್ಪಣೆಗೊಂಡಿತು. ಹಾಗೆಯೇ ಶ್ರೀ ಕಿಶೋರ ಕುಮಾರ ಕಾಸಾರ ಅವರ "ಪ್ರೇಮ ಮತ್ತು ಮೃತ್ಯು" ಎಂಬ ಪುಸ್ತಕವೂ ಬಿಡುಗಡೆ ಹೊಂದಿತು. ಇದು ಶ್ರೀ ಅರವಿಂದರ "Love and Death" ಎಂಬ ನೀಳ್ಗವನದ ಅನುವಾದ.

ಡಾ॥ ಬಸವರಾಜ ಡೋಣೂರ, ಕೇಂದ್ರೀಯ ವಿಶ್ವ ವಿದ್ಯಾಲಯ ಕಲಬುರಗಿ, ಡಾ॥ ಆರ್.ವಿ. ಜಹಾಗೀರದಾರ, ಸಾಕ್ಷಿ ಸಂಸ್ಥೆ, ಬೆಂಗಳೂರು, ಶ್ರೀ ಕರಿಬಸಪ್ಪ, ಎಸ್. ವ್ಯಾಸ, ಜಿಗಣಿ, ಬೆಂಗಳೂರು ಇವರು ಮುಖ್ಯ ಅತಿಥಿಗಳಾಗಿ ಉಪನ್ಯಾಸ ನೀಡಿದರು. ಡಾ॥ ಅಜಿತ್ ಸಬ್ನಿಸ್ ಅವರು ಅಧ್ಯಕ್ಷತೆ ವಹಿಸಿದ್ದರು. ಮಧ್ಯಾಹ್ನದ ಭೋಜನದ ನಂತರ ಡಾ॥ ನಂದನ ಪ್ರಭು ಅವರು "ಶ್ರೀ ಅರವಿಂದರ ರಾಜಕೀಯ ಚಿಂತನೆಗಳು ಮತ್ತು ಅವರ ಐದು ಕನಸುಗಳ"ನ್ನು ಕುರಿತು ಉಪನ್ಯಾಸ ನೀಡಿದರು. ಶ್ರೀ ಎಸ್.ಎಸ್. ಸಿಂಹ ಅವರು "ಸಾವಿತ್ರಿಯ ಮೂರು ಜೀವ ಬಲ"ಗಳನ್ನು ಕುರಿತು ಮಾತನಾಡಿದರು. ಆನಂತರ ಪ್ರಶ್ನೆ – ಉತ್ತರಗಳ ಸುದೀರ್ಘ ಚರ್ಚೆ ನಡೆಯಿತು.

ಸಂಜೆ 07 ರಿಂದ 8.15 ವರೆಗೆ ಲಘು ಸಂಗೀತ ಕಾರ್ಯಕ್ರಮ ಜರುಗಿತು. ಭೋಜನದೊಂದಿಗೆ ಅಂದಿನ ಕಾರ್ಯಕ್ರಮ ಮುಕ್ತಾಯಗೊಂಡಿತು.

ಮರುದಿನ 09/02/2025 ರಂದು ರಾಜ್ಯ ಸಮಿತಿಯ ಕಾರ್ಯಕಲಾಪಗಳು ಸಂಪನ್ನಗೊಂಡವು.

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 29ನೇ ಮಾರ್ಚ್ 2025ರ ಶನಿವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರು ಪಾಂಡಿಚೇರಿಗೆ ಮೊಟ್ಟಮೊದಲ ಆಗಮನದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.30 ರಿಂದ 10.50 ರವರೆಗೆ ಸಾಮೂಹಿಕ ಧ್ಯಾನ ಏರ್ಪಡಿಸಲಾಗಿತ್ತು. ಸಂಜೆ 10.30 ರಿಂದ 12.00 ಗಂಟೆಯವರೆಗೆ ಡಾ॥ ಫಲ್ಗುಣಿ ಜಾನಿರವರು "The Mother's Prayers for Transformation" ಎಂಬ ವಿಷಯ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಆಸಕ್ತರು ಭಾಗವಹಿಸಿದ್ದರು.

## <u>ಸಂತಾಪ ಸೂಚನೆ</u>

ಡಾ॥ ಆರ್. ಜಗದೀಶ್, ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಸಂಚಾಲಕರು, ದಿನಾಂಕ 12–03–2025 ರಂದು ವಿಜಯಪುರದಲ್ಲಿ ನಿಧನರಾದರು. ಶ್ರೀಯುತರು ಶ್ರೀಮಾತಾರವಿಂದರ ತತ್ತ್ವ, ಆದರ್ಶ ಮತ್ತು ಸಿದ್ಧಾಂತಗಳನ್ನು ರಾಜ್ಯ ಸಮಿತಿ ಪರವಾಗಿ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಶ್ರೀ ಅರವಿಂದೋ ಸೊಸೈಟಿ, ಕೇಂದ್ರ ಮತ್ತು ಶಾಖೆಗಳ ಮೂಲಕ ಪ್ರಚಾರ ಕೈಗೊಂಡಿದ್ದರು. ಇವರ ಸೇವೆ ಅವಿಸ್ಮರಣೀಯ. ಶ್ರೀಮಾತಾರವಿಂದರು ಇವರ ಆತ್ಮಕ್ಕೆ ಶಾಂತಿ ನೀಡಲೆಂದು ರಾಜ್ಯ ಸಮಿತಿ ಪ್ರಾರ್ಥಿಸುತ್ತದೆ.



ಫೋಟೋ: ಇಮೇಜಿಂಗ್ ಸಾವಿತ್ರಿ

**ತ್ರಾಟಕ ಸೂರ್ಯ**

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಚಿನ್ಮಯದ ಅಗ್ನಿಜ್ವಾಲೆಯದು ಇಂತು ಆಗಮಿಸಿತಿಲ್ಲಿ ಒಳಗೆ
ಈಗಿದೋ ದಹಿಸಿ ತಮದ–ಹೃದಯವನು, ಪರಿಪೂರ್ಣಗೊಳಿಸಿ ಬೆಳಗೆ;

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 10 ರೇಣು 1 ಪುಟ 601–02)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.